ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 21 ಮಂಗಳವಾರ 2023

ಸಂಪುಟ: 44 | ಸಂಚಿಕೆ: 214 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕಾಂಗ್ರೆಸ್ ಸರ್ಕಾರದ ಆರು ತಿಂಗಳ ಅಧಿಕಾರ

ಜನರ ಜೀವನಕ್ಕೆ ಗ್ಯಾರಂಟಿ ಕೊಟ್ಟಿದ್ದೇವೆ



■ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ■ ಈಗಾಗಲೇ ನಾಲ್ಕು ಗ್ಯಾರಂಟಿ ಜಾರಿಯಿಂದ ಮಹಿಳೆಯರು ಸುಸಂತೃಪ್ತರಾಗಿದ್ದಾರೆ; ಸಮಾಜದಲ್ಲಿ ಶಾಂತಿ–ಸಾಮರಸ್ಯವಿದೆ

ಬೆಂಗಳೂರು, ನ. 20(ಕೆಎಂಶಿ)–ಬೆಲೆ ಏರಿಕೆಯಿಂದ ಕಂಗಾಲಾಗಿದ್ದ ಜನರಿಗೆ ಬದುಕು ಕಟ್ಟಿಕೊಳ್ಳಲು ಕಳೆದ ಆರು ತಿಂಗಳಲ್ಲಿ ನಮ್ಮ ಸರ್ಕಾರ ರೂಪಿಸಿದ ಯೋಜನೆಗಳು ಯಶಸ್ವಿಗೊಂಡಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ.

ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಂಕಷ್ಟ ಸಂದರ್ಭದಲ್ಲಿ ಅಧಿಕಾರ ಹಿಡಿದು ನಾಲ್ಕು ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಜನತೆ ನೆಮ್ಮದಿಯ ಬದುಕು ನಡೆಸುತ್ತಿದ್ದಾರೆ. ಹವಾಮಾನ ವೈಪರೀತ್ಯದಿಂದ ಮಳೆ ಇಲ್ಲದೆ, ಬೆಳೆ ಕಳೆದುಕೊಂಡರೂ ರೈತರು ಕಂಗಾಲಾಗಿಲ್ಲ, ಯಾರೂ ಹಸಿವಿನಿಂದ ಬಳಲಿಲ್ಲ ಎಂದು ತಿಳಿಸಿದ್ದಾರೆ.

ತಮ್ಮ ಆರು ತಿಂಗಳ ಆಡಳಿತದ ಸಾಧನೆಯನ್ನು ಟ್ವೀಟ್ ಮೂಲಕ ಸಮರ್ಥಿಸಿಕೊಂಡಿರುವ ಮುಖ್ಯಮಂತ್ರಿ ಅವರು, ನಮ್ಮ ಯೋಜನೆಗಳಿಂದ ಕುಟುಂಬ ನಿರ್ವಹಣೆ ಹೊಣೆ ಹೊತ್ತ ನಾಡಿನ ಮಹಿಳೆಯರು ನೆಮ್ಮದಿಯಿಂದ ಬದುಕುತ್ತಿದ್ದಾರೆ.

ಗ್ಯಾರಂಟಿ ಯೋಜನೆಗಳೂ ಸೇರಿದಂತೆ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿ ಮತ್ತು ಸಮಾಜದ ಶಾಂತಿ–ಸಾಮರಸ್ಯದ ರಕ್ಷಣೆಗೆ ಸರ್ಕಾರ ಆದ್ಯತೆ ನೀಡಿದೆ. ನಮ್ಮ ಯೋಜನೆಗಳು ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ಬೇರೆ ರಾಜ್ಯಗಳೂ ನಮ್ಮನ್ನು ಅನುಸರಿಸಲು ಮುಂದಾಗಿರುವುದೇ ಇದಕ್ಕೆ ಸಾಕ್ಷಿ ಎಂದರು.

ಗೃಹಲಕ್ಷ್ಮಿ ಯೋಜನೆಯಡಿ 99.52 ಲಕ್ಷ ಮಹಿಳೆಯರ ಖಾತೆಗೆ ಮಾಸಿಕ 2,000 ರೂ ಸಹಾಯಧನ ಸಂದಾಯವಾಗುತ್ತಿದ್ದು ಸಂಕಷ್ಟದಲ್ಲಿರುವ ಕುಟುಂಬಗಳಿಗೆ ನೆರವಾಗುತ್ತಿದೆ. ಶಕ್ತಿ ಯೋಜನೆಯಡಿ ನಾಡಿನ ಮಹಿಳೆಯರು ನಿತ್ಯ ಸರಾಸರಿ 60 ಲಕ್ಷದಂತೆ ಇದುವರೆಗೂ 97.2 ಕೋಟಿಗೂ ಅಧಿಕ ಬಾರಿ ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಿದ್ದಾರೆ.

ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ನಡುವೆಯೂ ಕಳೆದ ಆರು ತಿಂಗಳ ಅವಧಿಯಲ್ಲಿ ನಾಡಿನ ಜನತೆಗೆ ನೀಡಿದ್ದ



ಎಲ್ಲಾ ಭರವಸೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ.

ನಮ್ಮ ಯೋಜನೆಗಳು ನಾಡಿನ ಪ್ರತಿಯೊಬ್ಬರನ್ನೂ ತಲುಪುವ ಪ್ರಾಮಾಣಿಕ ಪಯತ್ನ ಇದಾಗಿದೆ. ನಮ್ಮ ಈ ಪ್ರಯತ್ನದ ಫಲವಾಗಿ ಇಂದು ಪ್ರತೀ ಮನೆ–ಮನೆಯಲ್ಲೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳನ್ನು ಕಾಣುವಂತಾಗಿರುವುದು ಖುಷಿಯ ವಿಚಾರ. ಭರವಸೆಗಳನ್ನು ಈಡೇರಿಸುವ ಜೊತೆಗೆ ಅಭಿವೃದ್ಧಿಯನ್ನೂ ಸಮಾನವಾಗಿ ಮುನ್ನಡೆಸುವ ಕರ್ನಾಟಕ ಮಾದರಿ ಆಡಳಿತವೆಂಬ ನವಕಲ್ಪನೆ ಇಡೀ ದೇಶದಲ್ಲಿ ಮನ್ನಣೆ ಗಳಿಸಿದೆ. ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ▶ 6ನೇ ಪುಟಕ್ಕೆ

ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ಅಸಮಾಧಾನ ಸ್ಫೋಟ

ಬಿಜೆಪಿ ನೂತನ ರಾಜ್ಯಾಧ್ಯಕ್ಷ ವಿಜಯೇಂದ್ರ ಭವಿಷ್ಯ

● ನಮ್ಮಲ್ಲಿ ಅಸಮಾಧಾನ ಇರುವುದು ಸತ್ಯ ● ಯತ್ನಾಳ್, ರಮೇಶ್ ಜಾರಕಿಹೊಳಿ ಭೇಟಿ ಮಾಡುತ್ತೇನೆ ● ನಮ್ಮ ಚಿಂತೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್‌ಗೆ ಏಕೆ ● ಬಿಜೆಪಿ ಬಿಟ್ಟು ಯಾರೂ ಹೋಗಲ್ಲ



ಮೈಸೂರು, ನ.20(ಬಿಎಲ್‌ಯು)– ಲೋಕಸಭಾ ಚುನಾವಣೆ ನಂತರ ಕಾಂಗ್ರೆಸ್‌ನಲ್ಲಿರುವ ಅಸಮಾಧಾನ ಸ್ಫೋಟಗೊಳ್ಳಲಿದೆ ಎಂದು ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ ನುಡಿದಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಕಾಂಗ್ರೆಸ್‌ನ ಬೆಳವಣಿಗೆಗಳ ಬಗ್ಗೆ ಕಾದು ನೋಡಿ ಎಂದರು.

ವಿರೋಧ ಪಕ್ಷದ ನಾಯಕನಾಗಿ ಅಶೋಕ್ ಆಯ್ಕೆ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಆಯ್ಕೆ ನಂತರ ಬಿಜೆಪಿಯಲ್ಲಿ ಭಿನ್ನಮತ ಸ್ಫೋಟಗೊಂಡಿದ್ದು, ಮುಂದಿನ ದಿನಗಳಲ್ಲಿ ಬಿಜೆಪಿಯಲ್ಲಿ ಏನೆಲ್ಲಾ ಬೆಳವಣಿಗೆ ಆಗುತ್ತದೆ ಕಾದು ನೋಡಿ ಎಂಬ ಸಿದ್ದರಾಮಯ್ಯ ಹೇಳಿಕೆಗೆ ವಿಜಯೇಂದ್ರ ತಿರುಗೇಟು ನೀಡಿದರು.

ನಮ್ಮ ಪಕ್ಷದಲ್ಲಿ ಏನೂ ಆಗುವುದಿಲ್ಲ. ಎಲ್ಲಾ ಭಿನ್ನಾಭಿಪ್ರಾಯ ಸರಿಪಡಿಸುತ್ತೇವೆ. ಆದರೆ ಕಾಂಗ್ರೆಸ್ ಸ್ಥಿತಿ ಏನಾಗಲಿದೆ ಎಂಬುದು ಮುಂದೆ ತಿಳಿಯಲಿದೆ. ಆ ಕಾಲ ಹತ್ತಿರದಲ್ಲೇ ಇದೆ ಎಂದರು. ನಮ್ಮ ಪಕ್ಷದಲ್ಲಿ ಒಂದಿಷ್ಟು ಅಸಮಾಧಾನ ಇರುವುದು ಸತ್ಯ. ಆದರೆ ರಾಜ್ಯಾಧ್ಯಕ್ಷನಾಗಿ ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುತ್ತೇನೆ. ಬಿಜೆಪಿಯ ಹಲವು ಹಿರಿಯ ನಾಯಕರನ್ನು ಭೇಟಿ ಮಾಡುತ್ತೇನೆ. ಅದರಲ್ಲೂ ಅಸಮಾಧಾನಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ▶ 6ನೇ ಪುಟಕ್ಕೆ

ಇಂಡಿಯಾ ಮೈತ್ರಿಕೂಟದಲ್ಲಿರುವವರಲ್ಲಿ ಒಬ್ಬರಿಗೂ ಪ್ರಧಾನಿಯಾಗುವ ಅರ್ಹತೆ ಇಲ್ಲ

■ ಯಡಿಯೂರಪ್ಪ ಮಗನೆಂದು ಈ ಹುದ್ದೆ ನೀಡಿಲ್ಲ ■ 28 ಕ್ಷೇತ್ರ ಗೆಲ್ಲುತ್ತೇವೆ, ಸಾಧಿಸಿ ತೋರಿಸುತ್ತೇವೆ ■ ಜೆಡಿಎಸ್ ಮೈತ್ರಿಯಿಂದ ನಮಗೆ ಅಧಿಕ ಬಲ ■ ಫ್ಲೆಕ್ಸ್ ತೆರವಿಗೆ ಆಕ್ರೋಶ

ಮೈಸೂರು, ನ.20(ಬಿಎಲ್‌ಯು)– ಪ್ರತಿಪಕ್ಷಗಳ ಇಂಡಿಯಾ ಮೈತ್ರಿಕೂಟದಲ್ಲಿ ಪ್ರಧಾನಮಂತ್ರಿಯಾಗುವ ಅರ್ಹತೆ ಯಾರಿಗೂ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಗೇಲಿ ಮಾಡಿದ್ದಾರೆ.

ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ಇಂದು ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ಅವರನ್ನು ಸೋಲಿಸುವ ಏಕೈಕ ಉದ್ದೇಶದಿಂದ ಪ್ರತಿಪಕ್ಷಗಳು ಇಂಡಿಯಾ ಮೈತ್ರಿಕೂಟ ಮಾಡಿಕೊಂಡಿವೆ. ಆದರೆ ಅವರ ರಾಜಕೀಯ ಉದ್ದೇಶ ಈಡೇರುವುದಿಲ್ಲ ಎಂದರು.


ನನ್ನನ್ನು ಯಡಿಯೂರಪ್ಪ ಮಗ ಎಂಬ ಕಾರಣಕ್ಕೆ ರಾಜ್ಯಾಧ್ಯಕ್ಷನಾಗಿ ಮಾಡಿಲ್ಲ. ಪಕ್ಷದಲ್ಲಿ ನಾನು ಮಾಡಿರುವ ಕೆಲಸವನ್ನು ಗುರುತಿಸಿ ವರಿಷ್ಠರು ಈ ಹುದ್ದೆ ನೀಡಿದ್ದಾರೆ ಎಂದು ಪಕ್ಷದಲ್ಲಿ ▶ 6ನೇ ಪುಟಕ್ಕೆ

ಸಿದ್ದರಾಮಯ್ಯ ಇಳಿಸಲು ಡಿಕೆಶಿ, ಡಿಕೆಶಿ ಕಟ್ಟಿ ಹಾಕಲು ಸಿದ್ದರಾಮಯ್ಯ...!

ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಇಳಿಸಲು ಡಿ.ಕೆ.ಶಿವಕುಮಾರ್ ಮುಂದಾಗಿದ್ದರೆ, ಉಪ ಮುಖ್ಯಮಂತ್ರಿ ಸ್ಥಾನಗಳನ್ನು ಸೃಷ್ಟಿಸಿ ಡಿ.ಕೆ.ಶಿವಕುಮಾರ್ ಕಟ್ಟಿ ಹಾಕಲು ರಾಜಕೀಯ ತಂತ್ರಗಾರಿಕೆ ರೂಪಿಸಲಾಗಿದೆ ಎಂದು ವಿಜಯೇಂದ್ರ ಆರೋಪಿಸಿದರು. ಚುನಾವಣೆಗೂ ಮುನ್ನ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಕೈ ಕೈ ಹಿಡಿದು ಜೋಡೆತ್ತುಗಳಂತೆ ಓಡಾಡಿದರು. ಆದರೆ ಈಗ ಒಬ್ಬರನ್ನೊಬ್ಬರು ಬಲಿ ಹಾಕಲು ರಾಜಕೀಯ ಹುನ್ನಾರು ನಡೆಸುತ್ತಿದ್ದಾರೆ. ಈ ವಿಚಾರ ಹಾದಿ ಬೀದಿಯಲ್ಲಿ ಚರ್ಚೆಯಾಗುತ್ತಿದೆ ಎಂದು ಲೇವಡಿ ಮಾಡಿದರು. ರಾಜ್ಯದ ▶ 6ನೇ ಪುಟಕ್ಕೆ

ಭಾರತ 2047ರ ವೇಳೆಗೆ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಎಲ್ಲರೂ ಕೈಜೋಡಿಸಬೇಕು ■ ಪುಟ–7

ಡಿ.1ರಿಂದ ಭತ್ತ, ರಾಗಿ ಬೆಂಬಲ ಬೆಲೆಯಡಿ ಖರೀದಿ



ಕನಿಷ್ಠ ಬೆಂಬಲ ಬೆಲೆ(ಕ್ವಿಂ)	
ಭತ್ತ	2,183
ರಾಗಿ	3,846

ಮೈಸೂರು, ನ.20(ಎಸ್‌ಬಿಡಿ)– ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಹಾಗೂ ರಾಗಿಯನ್ನು ಡಿ.1ರಿಂದ ಮುಂದಿನ ಮಾರ್ಚ್‌ವರೆಗೆ ಖರೀದಿಸಲಾಗುವುದು ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ತಮ್ಮ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಸಿದ ಬಳಿಕ ಅವರು ಮಾಹಿತಿ ನೀಡಿದ್ದು, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಹಾಗೂ ರಾಗಿಗೆ ಕೇಂದ್ರ ಸರ್ಕಾರ ಬೆಲೆ ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ನೋಂದಣಿ ಹಾಗೂ ಖರೀದಿಗೆ ಡಿ.1ರಿಂದ ಮುಂದಿನ ಮಾರ್ಚ್ 31ರವರೆಗೆ ಅವಕಾಶವಿರಲಿದೆ ಎಂದರು.

ಜಿಲ್ಲೆಗೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯನ್ನು ಸಂಗ್ರಹಣಾ ಸಂಸ್ಥೆಯನ್ನಾಗಿ ನೇಮಿಸಲಾಗಿದ್ದು, ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಸಂಗ್ರಹಣಾ ಏಜೆನ್ಸಿಗಳು ಭತ್ತ ಮತ್ತು ರಾಗಿ ಖರೀದಿ ಹಂತದಲ್ಲಿ ಕೇಂದ್ರ ಸರ್ಕಾರದಿಂದ ನಿಗದಿಪಡಿಸಿದ ಮಾನದಂಡಗಳನ್ವಯ ಎಫ್‌ಎಕ್ಯೂ ಗುಣಮಟ್ಟವನ್ನು ದೃಢೀಕರಿಸಲು ಕ್ರಮ ವಹಿಸಬೇಕು. ಪ್ರತಿ ಖರೀದಿ ಕೇಂದ್ರಕ್ಕೆ ಕೃಷಿ ಇಲಾಖೆಯ ವತಿಯಿಂದ ಗ್ರೇಡರ್‌ಗಳನ್ನು ನೇಮಿಸಬೇಕು ಎಂದು ಸೂಚನೆ ನೀಡಿದರು.

ಭತ್ತವನ್ನು ಪ್ರತಿ ರೈತರಿಂದ ಉತ್ಪಾದನೆಗೆ ಅನುಗುಣವಾಗಿ ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಗರಿಷ್ಠ 40 ಕ್ವಿಂಟಾಲ್ ಭತ್ತ ಹಾಗೂ ರಾಗಿಯನ್ನು ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ ಖರೀದಿಸಬೇಕು. ಸರ್ಕಾರವು ನಿಗದಿಪಡಿಸಿರುವ ಪ್ರಮಾಣವನ್ನು ಮೀರಿ ಹೆಚ್ಚುವರಿಯಾಗಿ ಖರೀದಿಸುವಂತಿಲ್ಲ. ಈ ಕುರಿತು ರೈತರಿಗೆ ಜಾಗೃತಿ ಮೂಡಿಸುವ ಮೂಲಕ ಖರೀದಿ ಸಂದರ್ಭದಲ್ಲಿ ಯಾವುದೇ ಗೊಂದಲವಾಗದಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ರೈತರಿಂದ ಧಾನ್ಯ ಖರೀದಿ ಮಾಡಲು ನೋಂದಣಿಗೆ ಕೃಷಿ ಇಲಾಖೆಯಿಂದ ನೀಡಲಾಗಿರುವ ಫ್ರೂಟ್ಸ್ (FRUITS-Farmer Registration and Unified beneficiary Information System) ಐಡಿಯನ್ನು ಕಡ್ಡಾಯಗೊಳಿಸಲಾಗಿದೆ. ಹಾಗಾಗಿ ನೋಂದಣಿಗೆ ರೈತರು ಫ್ರೂಟ್ಸ್ ಐಡಿಯನ್ನು ತರಬೇಕು. ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳಲು ಎಪಿಎಂಸಿ ಮತ್ತು ಕೃಷಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ವ್ಯಾಪಕ ಪ್ರಚಾರ ಕೈಗೊಂಡು ಹೆಚ್ಚು ನೋಂದಣಿಯಾಗುವಂತೆ ನಿಗಾ ವಹಿಸಬೇಕು ಎಂದರು. ಆಹಾರ ಮತ್ತು ನಾಗರಿಕ ಸರಬರಾಜು ಗ್ರಾಹಕರ ▶ 9ನೇ ಪುಟಕ್ಕೆ

ಮಾಹಿತಿಗೆ ಭೇಟಿ ಕೊಡಿ



ರೈತರು ಸರ್ಕಾರದ ಯಾವುದೇ ಸೌಲಭ್ಯ ಪಡೆಯಲು ಫ್ರೂಟ್ಸ್ ಐಡಿ ಕಡ್ಡಾಯಗೊಳಿಸಲಾಗಿದೆ. ಆದ್ದರಿಂದ ಈವರೆಗೆ ಫ್ರೂಟ್ಸ್ ಐಡಿ ಆಗದೇ ಇರುವವರು ಹತ್ತಿರದ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ. ಆಧಾರ್, ಜಾತಿ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್ ಜೊತೆಗೆ ತಮ್ಮ ಎಲ್ಲಾ ಜಮೀನುಗಳ ಪಹಣಿ ನೀಡಿ ಫ್ರೂಟ್ಸ್ ಐಡಿ ಮಾಡಿಸಬೇಕು. ತಮ್ಮ ಹೆಸರಿನಲ್ಲಿರುವ ಎಲ್ಲಾ ಸರ್ವೇ ನಂಬರ್‌ಗಳ ಜಮೀನನ್ನು ಫ್ರೂಟ್ಸ್ ಐಡಿಗೆ ಲಿಂಕ್ ಮಾಡಿಸಬೇಕು. ಜಂಟಿ ಮಾಲೀಕರಿಗೂ ಈ ಕ್ರಮ ಕಡ್ಡಾಯವಾಗಿದೆ.

–ಡಾ.ಕೆ.ವಿ.ರಾಜೇಂದ್ರ, ಡಿಸಿ

ಕಾರ್ಖಾನೆಗೆ ಭೂಮಿ ನೀಡಿದವರಿಗೆ ಉದ್ಯೋಗದ ಭರವಸೆ


ಮಾತು ತಪ್ಪಿದ ಕಾರ್ಖಾನೆ; ರೈತ ನೇಣಿಗೆ ಶರಣು

● ನಂಜನಗೂಡು ಅಡಕನಹಳ್ಳಿಯಲ್ಲಿ ಘಟನೆ ● ಪಾರ್ಲೆ ಆಗ್ರೋ ಇಂಡಿಯಾ ಲಿಮಿಟೆಡ್ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲು

ನಂಜನಗೂಡು, ನ. 20– ಕೈಗಾರಿಕಾ ಪ್ರದೇಶಕ್ಕೆ ಭೂಮಿ ನೀಡಿದ ತನಗೆ ಖಾಸಗಿ ಕಾರ್ಖಾನೆಯವರು ಉದ್ಯೋಗ ನೀಡದೆ, ಪ್ರಶ್ನಿಸಿದ್ದಕ್ಕೆ ಕುಟುಂಬದವರ ಮೇಲೆ ಕೇಸ್ ಹಾಕಿದ್ದಾರೆ ಎಂದು ಡೆತ್ ನೋಟ್ ಬರೆದಿಟ್ಟು ರೈತ ನೇಣಿಗೆ ಶರಣಾದ ಘಟನೆ ನಂಜನಗೂಡು ತಾಲೂಕಿನ ಅಡಕನಹಳ್ಳಿ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಗ್ರಾಮದ ರೈತ ಸಿದ್ದರಾಜು(28) ಆತ್ಮಹತ್ಯೆಗೆ ಶರಣಾದವರಾಗಿದ್ದು, ಈ ಸಂಬಂಧ ಪಾರ್ಲೆ ಆಗ್ರೋ ಇಂಡಿಯಾ ಲಿಮಿಟೆಡ್‌ನ ಹೆಚ್‌ಆರ್ ಮುಷೀದ್ ಉಲ್ಲಾಖಾನ್ ಮತ್ತು ಪ್ಲಾಂಟ್ ಹೆಡ್ ರಾಮಪ್ರಸಾದ್ ವಿರುದ್ಧ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ವಿವರ: ನಂಜನಗೂಡು ತಾಲೂಕು ಅಡಕನಹಳ್ಳಿ ಗ್ರಾಮದ ಸರ್ವೆ ನಂಬರ್ 96/1ರಲ್ಲಿನ ಸಿದ್ದರಾಜು ಅವರ ಕುಟುಂಬದ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ




ಸಿದ್ದರಾಜು

ಕೆಐಎಡಿಬಿ ಭೂಸ್ವಾಧೀನ ಮಾಡಿಕೊಂಡಿತ್ತು. ಕಾರ್ಖಾನೆಗಾಗಿ ಭೂಮಿ ನೀಡಿದ ರೈತರ ಕುಟುಂಬದವರಿಗೆ ಉದ್ಯೋಗ ನೀಡಬೇಕು ಎಂದು ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತ ಕಾರ್ಖಾನೆಗಳಿಗೆ ಸೂಚಿಸಿತ್ತು. ಅದರಂತೆ ಸಿದ್ದರಾಜು ಕುಟುಂಬದವರ ಜಮೀನಿನಲ್ಲಿ ಕಾರ್ಖಾನೆ ನಿರ್ಮಿಸಿದ್ದ ಪಾರ್ಲೆ ಆಗ್ರೋ ▶ 9ನೇ ಪುಟಕ್ಕೆ

ನೋಡ ಬನ್ನಿ... ಹಿನಕಲ್‌ನ ಶ್ರೀ ನನ್ನೇಶ್ವರ ದೇವರಕೆರೆಯ ಅಂದವಾ...!

ಅಭಿವೃದ್ಧಿಗೊಂಡು ಕಂಗೊಳಿಸುತ್ತಿರುವ ಸುಂದರ ಕೆರೆ

■ <u>ಮೋಹನ್ ಕಾಯಕ</u>



ಮೈಸೂರು, ನ.20– ಭೂ ಒತ್ತುವರಿ ಹಾವಳಿ ನಡುವೆ ಕಣ್ಮರೆಯಾಗುತ್ತಿದ್ದ ಹಿನಕಲ್ ಗ್ರಾಮದ 'ಶ್ರೀ ನನ್ನೇಶ್ವರ ದೇವರ ಕೆರೆ' ಪರಿಸರ ಪ್ರೇಮಿಗಳ ಹೋರಾಟದ ಫಲವಾಗಿ ಮರುಜನ್ಮ ಪಡೆದಿದೆ....!

ಹಿನಕಲ್ ಗ್ರಾಮದ ಶ್ರೀ ನನ್ನೇಶ್ವರ ದೇವಸ್ಥಾನದ ಪಕ್ಕದಲ್ಲಿ ಸೂರ್ಯನ ಕಿರಣಗಳಿಗೆ ಹೊಳೆಯುತ್ತಿರುವ ದೇವರ ಕೆರೆ, ವಾಯುವಿಹಾರಿಗಳ ನೆಚ್ಚಿನ ತಾಣವಾಗಿರುವುದಲ್ಲದೆ, ಅಂತರ್ಜಲ ವೃದ್ಧಿಗೂ ಸಹಕಾರಿಯಾಗಿದೆ. ಕೆರೆಗಳೇ ಕಣ್ಮರೆಯಾಗುತ್ತಿರುವ ಕಾಲದಲ್ಲಿ ಮರುಜನ್ಮ ಪಡೆದು ಕಂಗೊಳಿಸುತ್ತಿರುವ ದೇವರಕೆರೆ ಹಿನಕಲ್ ಗ್ರಾಮಸ್ಥರ ಜೀವ ಜಲವಾಗಿದೆ.

ಹೂಟಗಳ್ಳಿ ನಗರಸಭೆ ವ್ಯಾಪ್ತಿಯ 6 ಎಕರೆ 6 ಗುಂಟೆ ವಿಸ್ತೀರ್ಣದಲ್ಲಿರುವ ದೇವರಕೆರೆ ಬಿರು ಬಿಸಿಲಿನ ನಡುವೆಯೂ ಹಚ್ಚ ಹಸಿರಿನಿಂದ ಕೂಡಿದ್ದು, ಜಲಚರ ಪ್ರಾಣಿಗಳ ಜೊತೆಗೆ ಹಕ್ಕಿಗಳ ನೆಚ್ಚಿನ ತಾಣವೂ ಆಗಿದೆ. ಕಳೆದ ಮೂರು ವರ್ಷದ ಹಿಂದೆ ಬತ್ತಿ ಭಣಗುಡುತ್ತಿದ್ದ ದೇವರ ಕೆರೆಯು ಹಿನಕಲ್ ಗ್ರಾಮಸ್ಥರು, ಗ್ರಾಮ ಪಂಚಾಯತ್, ಶ್ರೀ ದೇವರಕೆರೆ ಅಭಿವೃದ್ಧಿ ಸಮಿತಿ ಸದಸ್ಯರು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಸಮೃದ್ಧವಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ 'ನಮ್ಮೂರು ನಮ್ಮ ಕೆರೆ' ಪರಿಕಲ್ಪನೆಯಲ್ಲಿ ದೇವರಕೆರೆಯ ಹೂಳು ತೆಗೆಯಲು 9.40 ಲಕ್ಷ ರೂ. ನೆರವು ಹಾಗೂ ಗ್ರಾಮಸ್ಥರ 5.60 ಲಕ್ಷ ರೂ. ಸಹಕಾರ ಸೇರಿದಂತೆ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲಾಗಿದೆ. ಸುಮಾರು 12 ಅಡಿ ಆಳವಿರುವ ದೇವರಕೆರೆಯ ಸುತ್ತಲೂ ಕಬ್ಬಿಣ ▶ 9ನೇ ಪುಟಕ್ಕೆ





ಕೆರೆ ಸುತ್ತಲಿನ ಬಫರ್ ಜೋನ್ ಒತ್ತುವರಿ...!; ಮುಡಾ ಅಧಿಕಾರಿಗಳು ಕ್ರಮಕ್ಕೆ ಮೀನಾಮೇಷ

ಕೆರೆಯ ಸುತ್ತಲಿನ 30 ಮೀಟರ್‌ವರೆಗೆ (ಬಫರ್ ಜೋನ್) ಯಾವುದೇ ಕಟ್ಟಡಗಳನ್ನು ಕಟ್ಟಬಾರದೆಂಬ ನಿಯಮವಿದ್ದರೂ ಸಹ ಒತ್ತುವರಿ ಮಾಡಲಾಗಿದೆ ಎಂದು ಶ್ರೀ ದೇವರಕೆರೆ ಅಭಿವೃದ್ಧಿ ಸಮಿತಿ ಸದಸ್ಯರು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಕೆರೆಯ ದಕ್ಷಿಣ ಭಾಗದಲ್ಲಿನ (ಕೊಂಕಣ ಭವನದ ಕಡೆ) ಏರಿಯ ಕಡೆಗಿರುವ ಬಫರ್ ಜೋನ್‌ನ ಅರ್ಧದಷ್ಟು ಜಾಗವನ್ನು ಒತ್ತುವರಿ ಮಾಡಲಾಗಿದೆ. ಈ ಕುರಿತು ಮುಡಾ ಗಮನಕ್ಕೆ ತರಲಾಗಿದ್ದು, ಮುಡಾ ಅಧಿಕಾರಿಗಳು ಕೂಡ ▶ 9ನೇ ಪುಟಕ್ಕೆ



ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಎದುರು ಬಿಎನ್ ರಸ್ತೆಯ ಬ್ಯಾರಿಕೇಡ್ ತೆರವು

ಸಾರ್ವಜನಿಕರ ಅಸಮಾಧಾನದ ಹಿನ್ನೆಲೆಯಲ್ಲಿ ದೇವರಾಜ ಸಂಚಾರ ಠಾಣೆ ಪೊಲೀಸರ ಕ್ರಮ

ಮೈಸೂರು,ನ.20(ಆರ್‌ಕೆ)–ಮೈಸೂರಿನ ಕೆಎಸ್ ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದೆದುರು ಬಿಎನ್ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ಅಳವಡಿಸಿದ್ದ ಬ್ಯಾರಿಕೇಡ್ ಅನ್ನು ಸೋಮವಾರ ದೇವರಾಜ ಸಂಚಾರ ಠಾಣೆ ಪೊಲೀಸರು ತೆರವುಗೊಳಿಸಿದ್ದಾರೆ.

ಕಾರುಗಳನ್ನು ನಿಲುಗಡೆ ಮಾಡುತ್ತಿದ್ದರಿಂದ ಅದನ್ನು ತಪ್ಪಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂಬ ಉದ್ದೇಶದಿಂದ ದೇವರಾಜ ಸಂಚಾರ ಠಾಣೆ ಪೊಲೀಸರು, ದೊಡ್ಡ ಮೋರಿ ಉದ್ದಕ್ಕೂ ಮಹಾರಾಜ ಕಾಂಪ್ಲೆಕ್ಸ್‌ವರೆಗೂ ಕಬ್ಬಿಣದ ಬ್ಯಾರಿಕೇಡ್ ಅಳವಡಿಸಿದ್ದರು.

ಆದರೆ, ಕಾರಿನ ಚಾಲಕರು ಬ್ಯಾರಿಕೇಡ್ ಪಕ್ಕದಲ್ಲೇ ವಾಹನ ನಿಲ್ಲಿಸುತ್ತಿದ್ದರಿಂದ ಬೆಂಗಳೂರಿನಿಂದ ಬರುವ ಹಾಗೂ ಸ್ಥಳೀಯ ವಾಹನಗಳು ಓಡಾಡಲು ಬ್ಯಾರಿಕೇಡ್ ಹಾಕಿದ ಬಳಿಕ ರಸ್ತೆ ಇನ್ನೂ ಕಿರಿದಾದ ಕಾರಣ ತೀವ್ರ ತೊಂದರೆ ಉಂಟಾಗಿತ್ತು. ಅಲ್ಲದೇ ಬ್ಯಾರಿಕೇಡ್ ಒಳಗಿನ ಜಾಗವನ್ನು ಬೇರೆ ಯಾವುದೇ ಉದ್ದೇಶಕ್ಕೂ ಬಳಸುತ್ತಿರಲಿಲ್ಲ. ಆ ಮಾರ್ಗದಲ್ಲಿ ನಿತ್ಯ ಸಂಚರಿಸುವ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಬ್ಯಾರಿಕೇಡ್ ಅಳವಡಿಸಿರುವುದರಿಂದ ಅದರ ಪಕ್ಕದಲ್ಲೇ ಟ್ಯಾಕ್ಸಿಗಳನ್ನು ನಿಲ್ಲಿಸುತ್ತಿರುವ ಕಾರಣ, ಬಿಎನ್ ರಸ್ತೆ ಮತ್ತಷ್ಟು ಕಿರಿದಾಗಿದ್ದು, ಅನುಕೂಲಕ್ಕಿಂತ ತೊಂದರೆ ಆಗಿರುವುದರಿಂದ ಬ್ಯಾರಿಕೇಡ್ ತೆರವುಗೊಳಿಸಿ ಆ ಸ್ಥಳದಲ್ಲಿ 'ನೋ ಪಾರ್ಕಿಂಗ್' ಫಲಕ ಅಳವಡಿಸಿ ವಾಹನ ನಿಲ್ಲಿಸದಂತೆ ಕ್ರಮ ವಹಿಸಿದರೆ ಸಾರ್ವಜನಿಕ ವಾಹನಗಳ ಸಂಚಾರ ಸುಗಮವಾಗಲಿದೆ ಎಂದು ಅಭಿಪ್ರಾಯಿಸಿ, ನಗರ ಪೊಲೀಸ್ ಆಯುಕ್ತರಿಗೆ ಲಿಖಿತ ಪತ್ರ ಬರೆದಿದ್ದರು.

ಅಲ್ಲದೇ 'ಮೈಸೂರು ಮಿತ್ರ' ಪತ್ರಿಕೆಯೂ ಸಹ ನವೆಂಬರ್ 19ರಂದು 'ಅವೈಜ್ಞಾನಿಕವಾಗಿ ಬ್ಯಾರಿಕೇಡ್ ಅಳವಡಿಕೆ' ಸಂಬಂಧ ಸುದ್ದಿ ಪ್ರಕಟಿಸಿತ್ತು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ್ದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ, ಎಸಿಪಿ ಪರಶುರಾಮಪ್ಪ ಪರಿಶೀಲನೆ ನಡೆಸಿ, ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿ ಸ್ಥಳದಲ್ಲಿ 'ನೋ ಪಾರ್ಕಿಂಗ್' ಫಲಕ ಅಳವಡಿಸಿ, ಸಂಚಾರ ಪೊಲೀಸರನ್ನು ನಿಯೋಜಿಸುವುದರೊಂದಿಗೆ ವಾಹನ ನಿಲ್ಲಿಸದಂತೆ ಅಗತ್ಯ ಕ್ರಮ ವಹಿಸಲಾಗಿದೆ.

ಅವೈಜ್ಞಾನಿಕ ಬ್ಯಾರಿಕೇಡ್ ತೆರವಿಗೆ ಹೋಟೆಲ್ ಉದ್ಯಮಿಗಳ ಮನವಿ



ಮೈಸೂರು,ನ.19(ಎಸ್‌ಬಿಡಿ)–ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಎದುರು ಬಿ.ಎನ್.ರಸ್ತೆಯಲ್ಲಿ ಅಳವಡಿಸಿರುವ ಬ್ಯಾರಿಕೇಡ್ ತೆರವುಗೊಳಿಸಲು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಬಸ್ ನಿಲ್ದಾಣದ ಎದುರಿನ ಟ್ಯಾಕ್ಸಿ ನಿಲ್ದಾಣದ ಬಳಿ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಸುಮಾರು 15 ಅಡಿ ರಸ್ತೆ ಸೇರಿಸಿಕೊಂಡಂತೆ 250 ಅಡಿ ಉದ್ದ ಅವೈಜ್ಞಾನಿಕವಾಗಿ ಬ್ಯಾರಿಕೇಡ್ ಅಳವಡಿಸಿರುವುದರಿಂದ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲೂ ಅನುಕೂಲವಾಗಿಲ್ಲ.

ಬಸ್‌ನಲ್ಲಿ ಬರುವ ಕುಟುಂಬದವರು, ಸಂಬಂಧಿಕರು, ಸ್ನೇಹಿತರಿಗಾಗಿ ಕಾಯುವವರು ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸುತ್ತಿದ್ದರು. ಆದರೆ ಬ್ಯಾರಿಕೇಡ್ ಅಳವಡಿಸಿರುವುದರಿಂದ ಅನಿವಾರ್ಯವಾಗಿ ರಸ್ತೆ ಮಧ್ಯದಲ್ಲೇ ವಾಹನಗಳನ್ನು ನಿಲ್ಲಿಸುವಂತಾಗಿದೆ. ಪರಿಣಾಮ ಸಂಚಾರಕ್ಕೆ ತೀವ್ರ ಅಡ್ಡಿಯಾಗುತ್ತಿದೆ. ದಯಮಾಡಿ ಈ ಬಗ್ಗೆ ಪರಿಶೀಲಿಸಿ, ಅನಗತ್ಯವಾಗಿ ಅಳವಡಿಸಿರುವ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸುವಂತೆ ಸಿ.ನಾರಾಯಣಗೌಡ ಮನವಿ ಮಾಡಿದ್ದಾರೆ.



ಮೂವರು ಹಮಾಸ್ ಕಮಾಂಡರ್‌ಗಳನ್ನು ಹೊಡೆದುರುಳಿಸಿದ ಇಸ್ರೇಲ್ ಸೇನೆ



ಟೆಲ್ ಅವೀವ್: ಗಾಜಾಪಟ್ಟಿಯಲ್ಲಿ ಕಳೆದ ರಾತ್ರಿ ನಡೆಸಿದ ಕಾರ್ಯಾಚರಣೆಯಲ್ಲಿ ಮೂವರು ಹಮಾಸ್ ಕಮಾಂಡರ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಇಸ್ರೇಲ್ ರಕ್ಷಣಾ ಪಡೆ ಇಂದು ಘೋಷಿಸಿದೆ.

ಯುದ್ಧಸಾಮಗ್ರಿಗಳನ್ನು ಅಡಗಿಸಿರುವ ಗೋದಾಮಿನೊಳಗೆ ಸೇನೆ ಪ್ರವೇಶಿಸಿದಾಗ ಭಯೋತ್ಪಾದಕರು ಅಡಗಿರುವುದು ತಿಳಿದುಬಂತು. ವೈಮಾನಿಕ ದಾಳಿಯಲ್ಲಿ ಭಯೋತ್ಪಾದಕರನ್ನು ಹತ್ಯೆ ಮಾಡಿ ಕಟ್ಟಡ ಮತ್ತು ಅದರ ಶಸ್ತ್ರಾಸ್ತ್ರಗಳನ್ನು ನಾಶಪಡಿಸಲಾಗಿದೆ ಎಂದು ಐಡಿಎಫ್ ತಿಳಿಸಿದ್ದಾರೆ.

ಕನಿಷ್ಠ ಮೂವರು ಒತ್ತೆಯಾಳುಗಳನ್ನು ಶಿಫಾ ಆಸ್ಪತ್ರೆಗೆ ಕರೆತರುವ ಸಿಸಿಟಿವಿ ದೃಶ್ಯಾವಳಿಗಳನ್ನು ಐಡಿಎಫ್ ಪ್ರಸ್ತುತಪಡಿಸಿದ್ದು ಆಸ್ಪತ್ರೆಯ ಅಡಿಯಲ್ಲಿ ಹಮಾಸ್ ಭಯೋತ್ಪಾದಕ ಮೂಲಸೌಕರ್ಯವನ್ನು ನಿರ್ಮಿಸಿಕೊಂಡಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಗುಪ್ತಚರ ದೃಢಪಡಿಸಿದೆ ಎಂದು IDF ವಕ್ತಾರ ಡೇನಿಯಲ್ ಹಗರಿ ಹೇಳಿದ್ದಾರೆ.

ಇಸ್ರೇಲ್ ಮೇಲೆ ದಾಳಿ ನಡೆಸಿದ್ದ ಹಮಾಸ್ ಉಗ್ರರು ಈ ವೇಳೆ ನೋವಾ ಮಾರ್ಸಿಯಾನೊ ಅವರನ್ನು ಶಿಫಾ ಆಸ್ಪತ್ರೆಗೆ ಕರೆತಂದಿದ್ದರು. ಮಧ್ಯ ಇಸ್ರೇಲ್‌ನ ಮೊದಿಇನ್‌ನ ನಿವಾಸಿ ಮಾರ್ಸಿಯಾನೊ ಅವರನ್ನು ಕಿಬ್ಬುಟ್ಜ್ ನಹಾಲ್ ಓಜ್‌ನಿಂದ ಅಪಹರಿಸಲಾಗಿತ್ತು. ಆಕೆ ಲುಕ್‌ಔಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಳು.

ಕಳೆದ ಶುಕ್ರವಾರ IDF ಆಕೆಯ ದೇಹವನ್ನು ಶಿಫಾ ಪಕ್ಕದ ಕಟ್ಟಡದಿಂದ ವಶಪಡಿಸಿಕೊಂಡಿದೆ ಎಂದು ಹೇಳಿದರು. ಇನ್ನು ಗುರುವಾರ ಸೈನಿಕರು ಹತ್ತಿರದ ಕಟ್ಟಡದಿಂದ 65 ವರ್ಷದ ಯೆಹೂದಿತ್ ವೈಸ್ ಅವರ ದೇಹವನ್ನು ಪತ್ತೆಹಚ್ಚಿದ್ದು ವಶಪಡಿಸಿಕೊಳ್ಳಲಾಗಿದೆ ಎಂದು ಮಿಲಿಟರಿ ಘೋಷಿಸಿತು. ಮಾರ್ಸಿಯಾನೊ ಜೊತೆಗೆ, ನೇಪಾಳ ಮತ್ತು ಥೈಲ್ಯಾಂಡ್‌ನ ಇಬ್ಬರು ಒತ್ತೆಯಾಳುಗಳನ್ನು, ಅಕ್ಟೋಬರ್ 7ರ ಹತ್ಯಾಕಾಂಡದ ನಂತರ ಶಿಫಾ ಆಸ್ಪತ್ರೆಯಲ್ಲಿ ಇರಿಸಲಾಗಿತ್ತು ಎಂದು ಹಗರಿ ಹೇಳಿದರು.


ಹಮಾಸ್ ಒತ್ತೆಯಾಳುಗಳನ್ನು ಕರೆತಂದು ಶಿಫಾ ಆಸ್ಪತ್ರೆಯ ಅಡಿಯಲ್ಲಿ ನಿರ್ಮಿಸಿಕೊಂಡಿರುವ ಸುರಂಗಗಳಲ್ಲಿ ಅಡಗಿಸಿಟ್ಟಿತ್ತು. ಇದೀಗ ಅವರನ್ನು ಹತ್ಯೆ ಮಾಡಿದೆ ಎಂದು ಐಡಿಎಫ್ ಹೇಳಿದೆ.

ಹಮಾಸ್ ಭಯೋತ್ಪಾದಕರು ಇಸ್ರೇಲಿ ಅಲ್ಲದ ಇಬ್ಬರು ಒತ್ತೆಯಾಳುಗಳನ್ನು ಮಿಲಿಟರಿ ಜೀಪ್ ಮೂಲಕ ಆಸ್ಪತ್ರೆಗೆ ಕರೆತರುವ ದೃಶ್ಯಗಳನ್ನು ಬಹಿರಂಗಪಡಿಸಿದ್ದಾರೆ. ನಾವು ಈ ಒತ್ತೆಯಾಳುಗಳನ್ನು ಇನ್ನೂ ಪತ್ತೆ ಮಾಡಿಲ್ಲ ಅವರನ್ನು ಇನ್ನೂ ರಕ್ಷಿಸಿಲ್ಲ ಎಂದರು.



ಮೈಸೂರಿಗೆ ಆಗಮಿಸಿದ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಕರ್ನಾಟಕ ಬಿ.ಎಸ್.ಯಡಿಯೂರಪ್ಪ ಯುವ ಸೇನೆ ರಾಜ್ಯಾಧ್ಯಕ್ಷರಾದ ಎಲ್.ರುದ್ರಮೂರ್ತಿ, ಬಿಜೆಪಿ ಮುಖಂಡರಾದ ಎಂ.ಎಸ್. ಮಂಜುನಾಥ್, ಚಂದನ್ ಅವರು ಆತ್ಮೀಯವಾಗಿ ಅಭಿನಂದಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಾರ್ಷಿಕ ಸಭೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಹುಬ್ಬಳ್ಳಿಯ ಹವ್ಯಕ ಭವನದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮಹಾಸಭಾದ ಹಿರಿಯ ಉಪಾಧ್ಯಕ್ಷರಾದ ಹಿರಣ್ಣಯ್ಯಸ್ವಾಮಿ, ವೈ.ಎ.ಸುಧಾಕರ್ ಬಾಬು, ಸಂಘಟನಾ ಕಾರ್ಯದರ್ಶಿ ಕಾರ್ತಿಕ್ ಭಾಪಟ್, ಮಿಂಚನಹಳ್ಳಿ ಕೆ.ಲಕ್ಷ್ಮಣರಾವ್, ಸ್ನೇಹಜೀವಿ ದಿಡಿಗ ರಮೇಶ್, ಚಂದ್ರಶೇಖರ್ ಶರ್ಮಾ, ಹುಬ್ಬಳ್ಳಿಯ ಸಂಘಟಕರಾದ ಮಾಲ್ತೇಶ್ ಕುಲಕರ್ಣಿ, ವಿಜಯನಾಡ ಜೋಶಿ, ವಿನಯ್ ನಾಡಜೋಶಿ, ಡಿ.ಪಿ.ಪಾಟೀಲ್ ಇದ್ದರು.

ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೋದ್ಯಮಿಗಳಿಂದ ಅರ್ಜಿ ಆಹ್ವಾನ

ಮೈಸೂರು, ನ.20– 2023–24ನೇ ಸಾಲಿನಲ್ಲಿ ವಿವಿಧ ಯೋಜನೆ ಅಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರಿಸಿಕೊಂಡು ಹೋಗಲು ಇಲಾಖಾ ಸೌಲಭ್ಯವನ್ನು ಪಡೆಯಲು ಇಚ್ಛಿಸಿದ್ದಲ್ಲಿ, ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು https://mysore.nic.inನಲ್ಲಿ ನ.22ರಿಂದ ಡಿಸೆಂಬರ್ 11ರೊಳಗೆ ಅಪ್ಲೋಡ್ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲೂಕು ಕೈಗಾರಿಕಾ ವಿಸ್ತರಣಾಧಿಕಾರಿಗಳು, ಉಪನಿರ್ದೇಶಕರ ಕಚೇರಿ, ಖಾದಿ ಮತ್ತು ಗ್ರಾಮೋದ್ಯೋಗ, ಮೈಸೂರು ಇವರನ್ನು ಸಂಪರ್ಕಿಸಬಹುದು.

ಬಿಜೆಪಿ ಸದಸ್ಯತ್ವಕ್ಕೆ ರಾಜೀನಾಮೆ



ಮೈಸೂರು,ನ.20–ಬಿಜೆಪಿ ಅಸಂಘಟಿತ ಕಾರ್ಮಿಕರ ಪ್ರಕೋಷ್ಠದ ಕೆ.ಆರ್.ಕ್ಷೇತ್ರದ ಸಂಚಾಲಕ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಮುಖಂಡ ಆರ್ಟಿಸ್ಟ್ ಎಸ್.ನಾಗರಾಜು ತಿಳಿಸಿದ್ದಾರೆ. ಇತ್ತೀಚೆಗೆ ಪಕ್ಷದಲ್ಲಿನ ಸಭೆ, ಸಮಾರಂಭಗಳಿಗೆ ಆಹ್ವಾನಿಸದೆ ಹಾಗೂ ಪಕ್ಷದಲ್ಲಿ ಯಾವುದೇ ಜವಾಬ್ದಾರಿ ನೀಡದೆ ಕಡೆಗಣಿಸಲಾಗುತ್ತಿದೆ. ಆದ್ದರಿಂದ ನಾನು ನನ್ನ ಸ್ಥಾನಕ್ಕೆ ಹಾಗೂ ಬಿಜೆಪಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವುದಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ವೆಂಕಟರಮಣ ಶೆಟ್ಟಿ



ಮೈಸೂರು, ನ.20–ನಿವೃತ್ತ ಸರ್ವೇಯರ್ ಹಾಗೂ ಮೂಲತಃ ಮಳವಳ್ಳಿಯ ದೇವಾಂಗ ಸಮಾಜದ ಶೆಟ್ಟಿಗಾರರಾದ ವೆಂಕಟರಮಣ ಶೆಟ್ಟಿ (86) ಅವರು ಮೈಸೂರಿನ ದೀಪಾನಗರದಲ್ಲಿರುವ ಅವರ ಪುತ್ರಿ ಮನೆಯಲ್ಲಿ ಸೋಮವಾರ ನಿಧನರಾದರು.

ಮೃತರು ಪತ್ನಿ ತುಳಸಮ್ಮ, ಆರು ಮಂದಿ ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಜಿ. ಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ನಿಶ್ಚಲ್



ಮೈಸೂರಿನ ಸಿಎಫ್‌ಟಿಆರ್‌ಐ ಬಡಾವಣೆಯ ದಿವಂಗತ ಡಿ.ವಿ. ವೆಂಕಟರಮಣನ್ ಮತ್ತು ಕರುಣಾ ವೆಂಕಟರಮಣನ್ ಅವರ ಪುತ್ರ ವಿ.ನಿಶ್ಚಲ್ (30) ನವೆಂಬರ್ 16ರಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ತಾಯಿ ಕರುಣಾ ವೆಂಕಟರಮಣನ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನ.17ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎಸ್. ಶ್ರೀನಿವಾಸಮೂರ್ತಿ



ಮೈಸೂರಿನ ಕೆ.ಆರ್. ಸರ್ಕಲ್ ಮತ್ತು ಸರಸ್ವತಿಪುರಂನಲ್ಲಿರುವ ಕೃಷ್ಣ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ನ ಅಂದಿನ ಮಾಲೀಕರು ಹಾಗೂ ಸರಸ್ವತಿಪುರಂ ನಿವಾಸಿಗಳಾದ ಕೆ.ಎಸ್.ಶ್ರೀನಿವಾಸ ಮೂರ್ತಿ (83) ಸೋಮವಾರ ನಿಧನರಾದರು. ಮೃತರು ಪತ್ನಿ ರಾಜೇಶ್ವರಿ, ಪುತ್ರ ಬಾಲಾಜಿ, ಪುತ್ರಿ ತನುಜಾ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜಯನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳು ಶಾಲಾ ಹಂತದಲ್ಲೇ ವೈಜ್ಞಾನಿಕ ಮನೋಭಾವದಿಂದ ಅಧ್ಯಯನ ಮಾಡಬೇಕು

ಕ್ಷೇತ್ರ ಶಿಕ್ಷಣಾಧಿಕಾರಿ ವಿವೇಕಾನಂದ ಸಲಹೆ



ಮೈಸೂರು,ನ.20(ಎಂಟಿವೈ)– ಶಾಲಾ ಹಂತದಲ್ಲಿ ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವದಿಂದ ಅಧ್ಯಯನ ಮಾಡುವತ್ತ ಗಮನಹರಿಸಬೇಕು ಎಂದು ಬಿಇಓ ವಿವೇಕಾನಂದ ಸಲಹೆ ನೀಡಿದ್ದಾರೆ.

ಮೈಸೂರಿನ ಹೂಟಗಳ್ಳಿಯಲ್ಲಿರುವ ರೋಟರಿ ಮಿಡ್‌ಟೌನ್ ಅಕಾಡೆಮಿಯಲ್ಲಿ ಸೋಮವಾರ ಆಯೋಜಿಸಿದ್ದ 'ಅನಾವರಣ' ವಿಜ್ಞಾನ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಓದುವ ದಿಸೆಯಲ್ಲಿ ವೈಜ್ಞಾನಿಕ ಮನೋಭಾವ ಬೆಳಸಿಕೊಳ್ಳಬೇಕು. ಯಾರೋ ಸುಮ್ಮನೇ ಹೇಳುವ ವಿಚಾರಗಳನ್ನು ನಂಬಬಾರದು. ಮಾಟ, ಮಂತ್ರ ಇದು ನಿಜವೇ, ಸುಳ್ಳೇ ಎನ್ನುವ ಬಗ್ಗೆ ವೈಜ್ಞಾನಿಕವಾಗಿ ತಿಳಿದುಕೊಳ್ಳಲು ಪ್ರಯತ್ನ ಮಾಡಬೇಕು. ಶಾಲಾ ಮಕ್ಕಳ ಮುಗ್ಧತೆಯನ್ನೇ ಕೆಲವರು ಬಂಡವಾಳ ಮಾಡಿಕೊಂಡು ದಾರಿ ತಪ್ಪಿಸಲು ಯತ್ನಿಸುತ್ತಾರೆ. ಆದರೆ ಅದಕ್ಕೆ ಬಲಿಯಾಗಬಾರದು. ವೈಜ್ಞಾನಿಕ, ವೈಚಾರಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಬಸವರಾಜು ಮಾತನಾಡಿ, ವಿದ್ಯಾರ್ಥಿಗಳು ಚೆನ್ನಾಗಿ ಓದಿ ಪಾಲಕರು ಹಾಗೂ ಓದಿದ ಶಾಲೆಗೆ ಒಳ್ಳೆಯ ಹೆಸರು ತರಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಪ್ರತಿಭೆ ಇದೆ ಎನ್ನುವುದನ್ನು ಮರೆಯಬಾರದು. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಪ್ರತಿಭೆ ಇರುತ್ತದೆ. ಸಿಗುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಗುರಿ ಮುಟ್ಟಬೇಕು ಎಂದು ಕಿವಿಮಾತು ಹೇಳಿದರು.

ಯೋಗ ಶಿಕ್ಷಕ ಹೆಚ್.ಪಿ.ನವೀನ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ತಾನು ಏನು ಆಗಬೇಕು ಎಂಬುದನ್ನು ಮೊದಲೇ ನಿರ್ಧರಿಸಿ ಒಂದು ನಕ್ಷೆ ತಯಾರು ಮಾಡಿಕೊಳ್ಳಬೇಕು. ಸರಿಯಾದ ಗುರಿ ಇಟ್ಟುಕೊಂಡು ಆ ನಕ್ಷೆಯ ಮಾರ್ಗದಲ್ಲಿ ಸಾಗಲು ಪ್ರತಿದಿನ, ಪ್ರತಿಕ್ಷಣ ಸಾಗಲು ಶ್ರಮಿಸಬೇಕು. ಅನೇಕ ಸಾಧಕರನ್ನು ಪ್ರೇರಣೆಯನ್ನಾಗಿ ತೆಗೆದುಕೊಂಡು ಅವರಂತೆ ಸಾಧನೆ ಮಾಡಿ ತೋರಿಸಬೇಕು. ಆ ಮೂಲಕ ದೇಶ ಕಟ್ಟುವ ಕೆಲಸಕ್ಕೆ ಕೈ ಜೋಡಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರೋಟರಿ ಮಿಡ್ ಟೌನ್‌ನ ಚೇರ್ಮನ್ ಅಲಗಪ್ಪನ್, ಕಾರ್ಯದರ್ಶಿ ರಾಮಕೃಷ್ಣ, ಖಜಾಂಚಿ ಉಮೇಶ್, ಪ್ರಾಂಶುಪಾಲ ಆತ್ಮಾನಂದ, ಮುಖ್ಯ ಶಿಕ್ಷಕರಾದ ಸರಳ ಮತ್ತು ನಿವೇದಾ, ವಿದ್ಯಾರ್ಥಿಗಳು, ಪೋಷಕರು ಪಾಲ್ಗೊಂಡಿದ್ದರು.

ಗಮನ ಸೆಳೆದ ವಿಜ್ಞಾನ ವಸ್ತುಪ್ರದರ್ಶನ

ವಿಜ್ಞಾನ ವಸ್ತುಪ್ರದರ್ಶನ ನೋಡುಗರ ಗಮನ ಸೆಳೆಯಿತು. ಶಾಲೆಯ ವಿದ್ಯಾರ್ಥಿಗಳು ತಯಾರಿಸಿದ್ದ ಪ್ರಯೋಗಗಳು ಗಮನ ಸೆಳೆದವು. ಪ್ರದರ್ಶನಗಳು ಉದಯೋನ್ಮುಖ ಸಂಶೋಧನೆಯ ಪ್ರತೀಕವಾಗಿತ್ತು. ಜೀವಶಾಸ್ತ್ರ, ರಾಸಾಯನಿಕ ಶಾಸ್ತ್ರ, ಭೌತಶಾಸ್ತ್ರ ಮತ್ತು ತಂತ್ರಜ್ಞಾನದ ಮಾದರಿಗಳು ನೋಡುಗರ ಕುತೂಹಲಕ್ಕೆ ಕಾರಣವಾಗಿತ್ತು. ಚಂದ್ರಯಾನ–3, ಗಾಳಿಯ ಪರಿಚಲನೆ, ಭೂಮಿಯ ಪರಿಚಲನೆ, ನೀರಿನ ಪರಿಚಲನೆ ನೋಡುಗರನ್ನು ಪುಳಕಿತಗೊಳಿಸಿತು. ಕಲಾ ವಿಭಾಗದಲ್ಲಿ ತಯಾರಿಸಿದ್ದ ತಾಜ್ ಮಹಲ್, ಕೆಂಪುಕೋಟೆ, ನೂತನ ಸಂಸತ್ತು ಭವನ, ಹೈಕೋರ್ಟ್ ವಿಚಾರ ಪಸರಿಸಿತು.

ಅತಿರೇಕದ ಸಂಭ್ರಮಾಚರಣೆ: ಕೈಯಲ್ಲಿ ಬಿಯರ್ ಬಾಟಲ್ ಹಿಡಿದು, ಟ್ರೋಫಿ ಮೇಲೆ ಕಾಲಿಟ್ಟ ಆಸ್ಟ್ರೇಲಿಯಾ ಆಟಗಾರ!




ನವದೆಹಲಿ: ಐಸಿಸಿ ಏಕದಿನ ವಿಶ್ವಕಪ್ 2023 ಟೂರ್ನಿಯಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ. ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಫೈನಲ್‌ನಲ್ಲಿ ಭಾರತ ವಿರುದ್ಧ ಬ್ಯಾಟಿಂಗ್–ಬೌಲಿಂಗ್–ಫೀಲ್ಡಿಂಗ್ ಮೂರೂ ವಿಭಾಗಗಳಲ್ಲಿ ಅದ್ಭುತ ಪ್ರದರ್ಶನ ತೋರಿದ ಕಾಂಗರೂ ಪಡೆ ಆರನೇ ಬಾರಿ ಟ್ರೋಫಿ ಗೆದ್ದ ಸಾಧನೆ ಮಾಡಿತು.

ವಿಶ್ವಕಪ್ 2023 ಗೆದ್ದಿರುವ ಆಸ್ಟ್ರೇಲಿಯಾಗೆ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತಿದೆ. ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದ ಟೀಂ ಇಂಡಿಯಾ, ಫೈನಲ್ ಪಂದ್ಯದಲ್ಲಿ ಎಡವಿದೆ. ಆದರೆ ಟ್ರೋಫಿ ಗೆದ್ದ ಬಳಿಕ ಕೆಲ ಆಸ್ಟ್ರೇಲಿಯಾ ಆಟಗಾರರ ಸಂಭ್ರಮಾಚರಣೆ ಅತಿರೇಕಕ್ಕೇರಿದೆ. ಕೆಲ ಪ್ಲೇಯರ್ಸ್ ಟ್ರೋಫಿ ಜೊತೆ ಫೋಟೋಕ್ಕೆ ಪೋಸ್ ಕೊಟ್ಟಿದ್ದಾರೆ. ಆದರೆ, ಆಸೀಸ್ ಆಟಗಾರ ಮಿಚೆಲ್ ಮಾರ್ಷ್ ಕೈಯಲ್ಲಿ ಬಿಯರ್ ಬಾಟಲ್ ಹಿಡಿದು ಟ್ರೋಫಿಯ ಮೇಲೆ ಕಾಲನ್ನಿಟ್ಟು ಫೋಟೋ ತೆಗೆಸಿಕೊಂಡಿದ್ದಾರೆ. ಮಿಚೆಲ್ ಮಾರ್ಷ್ ಅವರು ಕೈಯ್ಯಲ್ಲಿ ಬಿಯರ್ ಬಾಟಲ್ ಹಿಡಿದುಕೊಂಡು, ವಿಶ್ವಕಪ್ ಟ್ರೋಫಿಯ ಮೇಲೆ ಎರಡೂ ಕಾಲುಗಳನ್ನು ಇಟ್ಟು ಸೋಫಾ ಮೇಲೆ ವಿಶ್ರಾಂತಿ ಮಾಡುವುದನ್ನು ಕಾಣಬಹುದು. ಈ ಫೋಟೋವನ್ನು ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮ್ಮಿನ್ಸ್ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಈ ಫೋಟೋ ಸೋಷಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ಚರ್ಚೆಯಾಗುತ್ತಿದೆ. ಮಾರ್ಷ್ ಅವರ ಈ ನಡೆಗೆ ಭಾರೀ ವಿರೋಧ ವ್ಯಕ್ತವಾಗುತ್ತಿದೆ. ಸಾಮಾಜಿಕ ಮಾಧ್ಯಮದಲ್ಲಿ ಅನೇಕ ಮಂದಿ ಮಾರ್ಷ್ ನಡೆಗೆ ಕಿಡಿಕಾರಿದ್ದು, ಟ್ರೋಫಿಗೆ ಈ ರೀತಿ 'ಅಗೌರವ' ತೋರುವುದು ಸರಿಯಲ್ಲ ಎಂದಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.20–ನವೆಂಬರ್ 21ರ ಬೆಳಗ್ಗೆ 10ರಿಂದ ಸಂಜೆ 6ವರೆಗೆ ಕೆ.ಆರ್.ನಗರದಲ್ಲಿ ತ್ರೈಮಾಸಿಕ ನಿರ್ವಹಣೆ ಕೈಗೊಳ್ಳಬೇಕಾಗಿರುವುದರಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕೆ.ಆರ್.ನಗರ ಉಪವಿಭಾಗ ವ್ಯಾಪ್ತಿಗೆ ಒಳಪಡುವ ಕೆ.ಆರ್.ನಗರ ಪಟ್ಟಣ ಹಾಗೂ ಚಂದಗಾಲು, ಹೆಬ್ಬಾಳು, ಸಿದ್ದಾಪುರ, ಬ್ಯಾಡರಹಳ್ಳಿ, ದೊಡ್ಡೇಕೊಪ್ಪಲು ಹಾಗೂ ಲಾಲಂದೇವನಹಳ್ಳಿ ಗ್ರಾಮ ಪಂಚಾಯಿತಿಗಳಿಗೆ ಒಳಪಡುವ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.


ವಿಜಯಪುರ ಬಳಿ ವೀಣಾ ಕಾಶಪ್ಪನವರ್ ಕಾರು ಅಪಘಾತ; ಆಸ್ಪತ್ರೆಗೆ ದಾಖಲು



ವಿಜಯಪುರ: ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಪತ್ನಿ, ಕಾಂಗ್ರೆಸ್ ನಾಯಕಿ ವೀಣಾ ಕಾಶಪ್ಪನವರ ತೆರಳುತ್ತಿದ್ದ ಕಾರು ಅಪಘಾತಕ್ಕೀಡಾಗಿದ್ದು, ಘಟನೆಯಲ್ಲಿ ವೀಣಾ ಅವರ ಕೈ ಮತ್ತು ಎದೆ ಭಾಗಕ್ಕೆ ಪೆಟ್ಟು ಬಿದ್ದಿದೆ. ಸದ್ಯ ಹೆಚ್ಚಿನ ಚಿಕಿತ್ಸೆಗೆ ಅವರನ್ನು ಇದೀಗ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಜಯಪುರ ಜಿಲ್ಲೆಯ ಹೊರವಲಯದ ಕಲಬುರಗಿ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಅಪಘಾತ ಸಂಭವಿಸಿದೆ. ವಿಜಯಪುರದಿಂದ ಸಿಂದಗಿಯತ್ತ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ವೀಣಾ ಕಾಶಪ್ಪನವರ್ ಕಾರಿಗೆ ಎದುರಾಗಿ ಬಂದ ಸ್ಕೂಟಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಯತ್ನಿಸಿದ ವೇಳೆ ಅದೇ ರಸ್ತೆಯ ಪಕ್ಕದಲ್ಲಿ ನಿಂತಿದ್ದ ಮತ್ತೊಂದು ಕಾರಿಗೆ ಡಿಕ್ಕಿಯಾಗಿದೆ. ವಿಜಯಪುರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.11.2023 ಮಂಗಳವಾರ, ಮಳೆ ನಕ್ಷತ್ರ: ಅನುರಾಧ, 20.11.2023ರಿಂದ 02.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ,
ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಶ್ರೀ ಖೇಡ ವೇದ ವ್ಯಾಸಚಾರ್ಯ ಅವರಿಂದ ಉಪನಿಷದ್‌ಗಳ ಬಗ್ಗೆ ಪ್ರವಚನ, ಸ್ಥಳ: ಮಠದ ಆವರಣ, ಸಂಜೆ 5ರಿಂದ 6.30 ರವರೆಗೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯುಪ್ರೆಶರ್, ಸುಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀರಾಮಮಂದಿರ ದೇವಸ್ಥಾನ, ಮಾರಿಗುಡಿ ರಸ್ತೆ, ಎಂ.ಜಿ. ಕೊಪ್ಪಲು, ಬೆಳಗ್ಗೆ 10.30 ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಪಿಜಿ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮುಗುರೇಶಪ್ಪ, ಗೌರವ ಅತಿಥಿಗಳು: ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಿನ್ಸಿಪಾಲ್ ಡಾ. ಎಸ್.ಪ್ರತಿಭಾ, ಸ್ಥಳ: ಗೋಲ್ಡನ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಭವನೇಶ್ವರಿ ಸೇವಾ ಟ್ರಸ್ಟ್ :** ಕಾರ್ತಿಕ ಮಾಸ ಹಾಗೂ ತುಳಸಿ ಹಬ್ಬದ ಪ್ರಯುಕ್ತ ಭಕ್ತಾದಿಗಳಿಗೆ ಉಚಿತ ತುಳಸಿ ಗಿಡ ವಿತರಣೆ, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ. ಶ್ರೀಕಂಠಕುಮಾರ್, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಡಾ. ಲಕ್ಷ್ಮಿ, ನಗರಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯಮೂರ್ತಿ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಸ್ಥಳ: ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ವಿಶ್ವೇಶ್ವರನಗರ ಕೈಗಾರಿಕಾ ಪ್ರದೇಶ, ಬೆಳಗ್ಗೆ 10.30ಕ್ಕೆ.

■ **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ, ಕನ್ನಡ ವಿಭಾಗ :** ಕನ್ನಡ ರಾಜ್ಯೋತ್ಸವ, ಉದ್ಘಾಟನೆ : ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಕೆ.ಎಂ.ಎಸ್. ವಸುಂಧರಾ, ಮುಖ್ಯ ಅತಿಥಿಗಳು : ಕಾನೂನು ಮಾಪನಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ ಎಂ.ಎಸ್. ಕುಮಾರ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ. ವಿ. ಷಣ್ಮುಗಂ, ಉಪಸ್ಥಿತರು : ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಡಿ. ವಿಜಯಲಕ್ಷ್ಮಿ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಪ್ರೊ. ಸಿ.ಈ. ಲೋಕೇಶ್, ಕನ್ನಡ ಸಂಘದ ಸಂಚಾಲಕ ಪ್ರೊ. ಸಿ.ಕೆ. ಪುಟ್ಟಸೋಮಾಚಾರ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 11ಕ್ಕೆ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** 46ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, ಸಂಜೆ 7 ಗಂಟೆಗೆ ಶ್ರೀ ಸ್ವರ್ಣಗೌರಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಲಷ್ಕರ್ ಮೊಹಲ್ಲಾ.

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಸುತ್ತೂರು ಶ್ರೀಕ್ಷೇತ್ರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ – ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ಗೀತಾ ವೈ. ಪುಟ್ಟಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ನರಸಿಂಹ ನಾಯಕ್, ಪಿ.ರಮಾ, 1.20 ಭಾವಗೀತೆಗಳು – ಬಿ. ಸುನಂದಾ ದಿಲೀಪ್, 3.00 ಶ್ರೀ ರಾಂ ಭಟ್ – ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಶ್ರೀ ತುಳಸಿ ಮಹಾತ್ಮೆ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಗ್ರಾಮೀಣ ಸ್ವ ಉದ್ಯೋಗದ ಪ್ರಾಮುಖ್ಯತೆ ಕುರಿತು ರಾಕೇಶ್ ಅಕುಲಾ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವಮೂರ್ತಿ, 9.30 ಎಂ.ಆರ್. ಸುಧಾ–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ ಸುಮಿತ್ರಾ ವಿಶ್ವನಾಥ್, ವ್ಯಾಖ್ಯಾನ– ಪರಮೇಶ್ವರ್ ವಿ. ಹೆಗ್ಡೆ, 10.30 ಸವಿನೆನಪು

ಮೈಸೂರು ಮಿತ್ರ

ಒಡನಾಡಿಗಳು, ಶಿಷ್ಯ ವೃಂದದಿಂದ ಪ್ರೊ.ವೆಂಕೋಬರಾವ್‌ರಿಗೆ ಶ್ರದ್ಧಾಂಜಲಿ

ನಮ್ಮ ನೆಲ-ಪರಂಪರೆಯ ಸಮಗ್ರವಾಗಿ ರೂಢಿಸಿಕೊಂಡಿದ್ದ ಅಪ್ಪಟ ಭಾರತೀಯ ವೆಂಕೋಬರಾವ್; ನಿವೃತ್ತ ಪ್ರಾಧ್ಯಾಪಕ ಪ್ರೊ.ಶಿವಾಜಿ ಜೋಯಿಸ್

ಮೈಸೂರು,ನ.20(ಪಿಎಂ)–ಇತ್ತೀಚೆಗೆ ನಿಧನರಾದ ಪ್ರೊ.ಎನ್.ವೆಂಕೋಬರಾವ್ ಅವರಿಗೆ ಇಂದು ನುಡಿ ನಮನ ಸಲ್ಲಿಸಲಾಯಿತು. ನಗರದ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಸಂಸ್ಥಾಪಕರೂ ಆದ ಪ್ರೊ.ಎನ್.ವೆಂಕೋಬರಾವ್ 'ಮೇಷ್ಟ್ರು', 'ವೆಂಕಣ್ಣ' ಎಂದೇ ಖ್ಯಾತನಾಮರಾಗಿದ್ದರು.

ಮೈಸೂರಿನ ಶ್ರೀಹರ್ಷ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಪ್ರೊ.ಎನ್.ವೆಂಕೋಬರಾವ್ ಅವರ ಶಿಷ್ಯರು, ಒಡನಾಡಿಗಳು ಮತ್ತು ಬಂಧುಗಳು 'ಮೇಷ್ಟ್ರ ಮೆಲುಕು' ಶೀರ್ಷಿಕೆಯಡಿ ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವೆಂಕೋಬರಾವ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಬನುಮಯ್ಯ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದ ಪ್ರೊ.ಎನ್.ವೆಂಕೋಬರಾವ್ ಅವರ ಜೊತೆಗಿನ ಒಡನಾಟವನ್ನು ಅವರ ಒಡನಾಡಿಗಳು ಹಾಗೂ ಶಿಷ್ಯರು ಹಂಚಿಕೊಂಡು ಸ್ಮರಿಸಿದರು.



ಮೈಸೂರಿನ ಶ್ರೀಹರ್ಷ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ಇತ್ತೀಚೆಗೆ ನಿಧನರಾದ ಪ್ರೊ.ಎನ್.ವೆಂಕೋಬರಾವ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಇದೇ ವೇಳೆ ಮಾತನಾಡಿದ ಮಾಜಿ ಶಾಸಕ ವಾಸು, ನಾನು ಮೇಷ್ಟ್ರ ತರಗತಿಗೆ ಒಂದು ದಿನವೂ ತಪ್ಪಿಸಿಕೊಂಡಿದ್ದಿಲ್ಲ. ಅವರು ಅಂತಹ ಅಪರೂಪದ ಮೇಷ್ಟ್ರು. ಅವರು ದೈಹಿಕವಾಗಿ ಇಂದು ಇಲ್ಲವಾಗಿದ್ದರೂ ನಮ್ಮೆಲ್ಲರಲ್ಲಿ ಮಾನಸಿಕವಾಗಿ ಇದ್ದಾರೆ. ಅವರದು ಎಂತಹ ಕಷ್ಟಕರ ಪರಿಸ್ಥಿತಿಯಲ್ಲೂ ಕುಗ್ಗದ ವ್ಯಕ್ತಿತ್ವ. ಅವರು ಆರ್‌ಎಸ್‌ಎಸ್‌ನಲ್ಲಿ ಇದ್ದರೂ ತಮ್ಮ ಪಾಠ–ಪ್ರವಚನದಲ್ಲಿ ಎಂದಿಗೂ ಅದರ ಪ್ರಭಾವ ವ್ಯಕ್ತಪಡಿಸುತ್ತಿರಲಿಲ್ಲ. ದೇಶಪ್ರೇಮದ ವಿಚಾರದಲ್ಲಿ ಅವರು ಅತ್ಯಂತ ಭಾವನಾತ್ಮಕವಾಗಿ ವರ್ತಿಸುತ್ತಿದ್ದರು. ಅಂತಹ ದೇಶ ಪ್ರೇಮ ಅವರಲ್ಲಿತ್ತು ಎಂದು ನುಡಿದರು.

ವೆಂಕೋಬರಾವ್ ಅವರು ಲಯನ್ಸ್ ಕ್ಲಬ್‌ನ ಸದಸ್ಯರು ಮಾತ್ರವೇ ಆಗಿರದೇ ಅದರ ಐಕಾನ್‌ನಂತೆ ಇದ್ದರು. ತರಗತಿಯಲ್ಲಿ ಎಂತಹ ತುಂಟ ಹುಡುಗರಾಗಿದ್ದರೂ ಅವರ ಪರಿವರ್ತನೆ ಮಾಡುವ ಶಕ್ತಿ ಅವರಿಗಿತ್ತು. ಬುದ್ಧಿಮಾಂದ್ಯ ಮಕ್ಕಳಿಗಾಗಿ ಅವರು ಸ್ಥಾಪಿಸಿದ ಮೈತ್ರಿ ಶಾಲೆ ನಿಜಕ್ಕೂ ಒಂದು ಪುಣ್ಯದ ಕೆಲಸ. ಅವರು ಮತ್ತೆ ಹುಟ್ಟಿ ಬರಲಿ ಎಂದು ಭಾವುಕರಾದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಶಿವಾಜಿ ಜೋಯಿಸ್ ಮಾತನಾಡಿ, ವೆಂಕೋಬರಾವ್ ನಮ್ಮ ನಡುವೆ ಇಲ್ಲ ಎಂಬುದು ಭಾವುಕ ಸಂಚಲನ ಉಂಟು ಮಾಡಿದೆ. ಅವರು 1971ರಿಂದ ನನ್ನ ಸಹೋದ್ಯೋಗಿ ಆಗಿದ್ದರು. ಅವರಲ್ಲಿ ಬುದ್ಧನ ಮೈತ್ರಿ ಸಿದ್ಧಾಂತ ಅವರ ಜೀವನದ ಉದ್ದಕ್ಕೂ ಇತ್ತು. ಹಾಗಾಗಿಯೇ ಅವರು ಯಾವುದೇ ಸನ್ನಿವೇಶದಲ್ಲೂ ಎದೆಗುಂದಿದವರಲ್ಲ. ಅದ್ಭುತ ಸಂಘಟನಾಕಾರರಾಗಿದ್ದ ಅವರು, ಬಹುತ್ವದ ವ್ಯಕ್ತಿತ್ವ ಹೊಂದಿದ್ದರು. ಅವರು ಕೇವಲ ಮೇಷ್ಟ್ರು ಮಾತ್ರ ಆಗಿರಲಿಲ್ಲ. ಅದರ ಜೊತೆಗೆ ಸಮಗ್ರವಾದ ಗುರುತ್ವ ಅವರಲ್ಲಿತ್ತು ಎಂದು ಸ್ಮರಿಸಿದರು. ಪ್ರಖರ ನೆನಪಿನ ಶಕ್ತಿ ಹೊಂದಿದ್ದ ಅವರಲ್ಲಿ ಅಭಿವ್ಯಕ್ತಿಸುವ ವಿಶಿಷ್ಟ ಶಕ್ತಿ ಅವರಿಗೆ ದೈವದತ್ತವಾಗಿತ್ತು. ಅವರು ಸ್ನೇಹ ವಲಯವನ್ನು ನಡೆಸಿಕೊಂಡು ಕೆಲಸ ತೆಗೆಯುತ್ತಿದ್ದ ರೀತಿ ಅನನ್ಯವಾದುದು. ಶ್ರೇಷ್ಠ ವಾಗ್ಮಿಗಳಾಗಿದ್ದ ಅವರು, ಸಾಹಿತ್ಯ ವಲಯದಲ್ಲಿ 'ಶ್ರೀಕಾಂತ' ಎಂಬ ಹೆಸರಿನಲ್ಲಿ ಪರಿಚಿತರಾಗಿದ್ದರು. ಅವರೊಬ್ಬ ಅಪ್ಪಟ ಭಾರತೀಯ. ಒಬ್ಬ ಭಾರತೀಯ ಹೇಗಿರಬೇಕು ಎಂಬುದಕ್ಕೆ ವೆಂಕೋಬರಾವ್ ಆದರ್ಶ ವ್ಯಕ್ತಿ. ಬದುಕಿನ ಧರ್ಮವನ್ನು ರೂಢಿಸಿದ ನೆಲೆಯಲ್ಲಿ ಅವರು ಅನನ್ಯ ಧಾರ್ಮಿಕ ವ್ಯಕ್ತಿ. ಈ ನೆಲ ಮತ್ತು ಪರಂಪರೆಯ ಗುಣಗಳನ್ನು ಸಮಗ್ರವಾಗಿ ರೂಢಿಸಿಕೊಂಡಿದ್ದರು. ಅವರು ತಮ್ಮ ಮೈತ್ರಿ ನೆಲೆಯಲ್ಲಿ ಸದಾ ಸ್ಮರಣೀಯವಾಗಿ ಉಳಿಯುತ್ತಾರೆ. ಅವರ ಸಾವು ಬಹಳ ವೇದನೆ ನೀಡಿದೆ ಎಂದು ಭಾವುಕರಾದರು.

ಆರ್‌ಎಸ್‌ಎಸ್ ಮುಖಂಡ ಮಾ. ವೆಂಕಟರಾಮ್ ಮಾತನಾಡಿ, ವೆಂಕೋಬರಾವ್ ಅವರು ಸಂಘದ ಶಾಖೆಗಳಿಗೆ ಬಂದು ಹೇಳುತ್ತಿದ್ದ ಕಥೆಗಳು ಎಲ್ಲರ ಮನ ಮುಟ್ಟುತ್ತಿದ್ದವು. ತಮ್ಮ ಕಥೆಗಳ ಮೂಲಕ ಜೀವನ ಪಾಠ ತಿಳಿಸುತ್ತಿದ್ದರು. ದೇಶಭಕ್ತಿ ಮೂಡಿಸುವ ಘಟನಾವಳಿಗಳನ್ನು ಹೇಳುತ್ತಿದ್ದರು. ನನಗೆ ಅವರು ಗುರು ಮತ್ತು ಅಣ್ಣನ ಸ್ಥಾನದಲ್ಲಿದ್ದರು. ಅವರು ನಮ್ಮ ಜೊತೆ ಇಂದು ಇಲ್ಲವಾಗಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ ಎಂದು ಭಾವುಕ ನುಡಿಗಳನ್ನಾಡಿದರು.

ಹಿರಿಯ ಪತ್ರಕರ್ತ ರವೀಂದ್ರ ಭಟ್ ಮಾತನಾಡಿ, ವೆಂಕೋಬರಾವ್ ಅವರ ದೇಹ ಮರೆಯಾಗಿದ್ದರೂ ಅವರ ಉದಾತ್ತ ಚಿಂತನೆ–ಕಾರ್ಯಗಳಿಂದ ಅವರು ನಮ್ಮೊಂದಿಗೇ ಇದ್ದಾರೆ. ಬುದ್ಧಿಮಾಂದ್ಯ ಮಕ್ಕಳಿಗಾಗಿ ಅವರು ಸ್ಥಾಪಿಸಿದ ಶಾಲೆಯನ್ನು ಉಳಿಸಿ ಮುನ್ನಡೆಸುವುದೇ ಅವರಿಗೆ ನಾವು ನಿಜವಾಗಿ ಸಲ್ಲಿಸುವ ಶ್ರದ್ಧಾಂಜಲಿ ಆಗಲಿದೆ ಎಂದು ತಿಳಿಸಿದರು.

ಮೈತ್ರಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಪೃಥ್ವಿ ಸುದೀಂದರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖಂಡ ಪುಟ್ಟಸ್ವಾಮಿ, ವೆಂಕೋಬರಾವ್ ಪುತ್ರ ಮನು ಮಹೇಶ್, ಪತ್ರಕರ್ತರೂ ಆದ ಕಾರ್ಯಕ್ರಮ ಸಂಚಾಲಕ ರವೀಂದ್ರ ಜೋಷಿ, ಚುಟುಕು ಸಾಹಿತಿ ಡಾ.ಎಂ.ಜಿ.ಆರ್.ಅರಸ್ ಸೇರಿದಂತೆ ಮತ್ತಿತರರು ಹಾಜರಿದ್ದರು.



ಮೈಸೂರು ಪ್ರವಾಸ ಕೈಗೊಂಡಿದ್ದ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿರುವ ಆದಿಚುಂಚನಗಿರಿ ಶಾಖಾ ಮಠಕ್ಕೆ ಭೇಟಿ ನೀಡಿ ಶ್ರೀ ಸೋಮನಾಥ ಸ್ವಾಮೀಜಿ ಅವರನ್ನು ಸನ್ಮಾನಿಸಿ, ಆಶೀರ್ವಾದ ಪಡೆದರು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಶಾಸಕ ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ, ಹಿರಿಯ ಮುಖಂಡ ಹಾಗೂ ಚಿತ್ರನಟ ಜಯಪ್ರಕಾಶ್ (ಜೆಪಿ), ಒಕ್ಕಲಿಗರ ಸಂಘದ ನಿರ್ದೇಶಕರಾದ ಪ್ರಶಾಂತ್‌ಗೌಡ, ರಾಜ್‌ಕುಮಾರ್, ಚೇತನ್‌ಗೌಡ, ರಾಕೇಶ್‌ಗೌಡ, ಕೀರ್ತಿಗೌಡ, ದೀಪಕ್‌ಗೌಡ, ಬಾಲು, ವಿಜಯ್‌ಕುಮಾರ್, ಅರುಣ್‌ಕುಮಾರ್‌ಗೌಡ, ಹೇಮಂತ್‌ಕುಮಾರ್, ಲಕ್ಷ್ಮಿ, ಸರಸ್ವತಿ, ಹೇಮಾ ನಂದೀಶ್ ಇನ್ನಿತರರಿದ್ದರು.

ರಾಜ್ಯದಲ್ಲಿ ಬರದ ಹಿನ್ನೆಲೆ: ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬ ಸೇವಾ ಕಾರ್ಯಕ್ರಮಗಳಿಗೆ ಮೀಸಲು

ಮೈಸೂರು,ನ.20–ರಾಜ್ಯದಲ್ಲಿ ಬರ ಇರುವುದರಿಂದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬ ಆಚರಿಸದಿರಲು ತೀರ್ಮಾನಿಸಲಾಗಿದೆ. ಪ್ರತಿ ವರ್ಷ ನ.25ರಂದು ಜಿ.ಟಿ.ದೇವೇಗೌಡರ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಣೆ ಮಾಡಲಾಗುತ್ತಿತ್ತು. ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳು ವಿವಿಧೆಡೆ ಜಿಟಿಡಿ ಅವರ ಹುಟ್ಟುಹಬ್ಬವನ್ನು ಆಚರಿಸಿ, ಅವರನ್ನು ಅಭಿನಂದಿಸುತ್ತಿದ್ದರು. ಆದರೆ ಈ ಬಾರಿ ರಾಜ್ಯದಲ್ಲಿ ಬರ ಇರುವುದರಿಂದ ಜಿಟಿಡಿ ಅವರ ಸೂಚನೆ ಮೇರೆಗೆ ಅವರ ಹುಟ್ಟುಹಬ್ಬ ಆಚರಣೆ ಮಾಡದಿರಲು ನಿರ್ಧರಿಸಲಾಗಿದೆ.



ತಮ್ಮ ಗ್ರಾಮದಲ್ಲಿರುವ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ, ಬಡವರಿಗೆ ನೆರವು, ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಸಹಾಯ, ಇಂತಹ ಸಾರ್ಥಕ ಸೇವೆಯ ಮೂಲಕ ಜಿಟಿಡಿ ಅವರ ಹುಟ್ಟುಹಬ್ಬವನ್ನು ಆಚರಿಸುವಂತೆ ಜೆಡಿಎಸ್ ಮೈಸೂರು ತಾಲೂಕು ಅಧ್ಯಕ್ಷ ಹೆಚ್.ಸಿ.ರಾಜು ಮನವಿ ಮಾಡಿದ್ದಾರೆ.

ಡಿ.9ಕ್ಕೆ ಜೆಡಿಎಸ್ ಹೊಸ ರಾಷ್ಟ್ರೀಯ ಅಧ್ಯಕ್ಷರ ನೇಮಕ!

ಬೆಂಗಳೂರು: ನನ್ನನ್ನು ಅಮಾನತು ಮಾಡಿರೋ ಪಕ್ಷದ ನಿರ್ಧಾರವೇ ಕಾನೂನುಬಾಹಿರ ಎಂದು ಮತ್ತೆ ದೇವೇಗೌಡ ಹಾಗೂ ಕುಮಾರಸ್ವಾಮಿ ವಿರುದ್ಧ ಸಿಎಂ ಇಬ್ರಾಹಿಂ ವಾಗ್ದಾಳಿ ನಡೆಸಿದ್ದಾರೆ.

ಅಮಾನತು ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ದೇವೇಗೌಡರು ಪ್ರಧಾನಿ ಆಗಿದ್ದರು. 70 ವರ್ಷ ರಾಜಕೀಯದಲ್ಲಿ ಇರೋರು. ದೇವೇಗೌಡರು ತಪ್ಪು ಮೇಲೆ ತಪ್ಪು ಮಾಡ್ತಿದ್ದಾರೆ. ನನ್ನನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ತೆಗೆದಿದ್ದೇ ತಪ್ಪು. ನನ್ನನ್ನು ತೆಗೆಯಬೇಕಾದ್ರೆ ಸಭೆ ಮಾಡಿ 2/3 ಮೆಜಾರಿಟಿಯಲ್ಲಿ ತೆಗೆಯಬೇಕು. ಇಲ್ಲದೆ ಹೋದ್ರೆ ಅವಧಿ ಮುಗಿಯಬೇಕು. ಇಲ್ಲ ನಾನು ಸಾಯಬೇಕು ಎಂದು ಹೇಳಿದರು.

ಕೇರಳದಲ್ಲಿ ಮೀಟಿಂಗ್ ಕರೆದಿದ್ದು ನಾನು ಅಲ್ಲ. ರಾಷ್ಟ್ರೀಯ ಉಪಾಧ್ಯಕ್ಷ ಸಿಕೆ ನಾಣು ಕರೆದಿದ್ದರು. 12 ರಾಜ್ಯದ ಜಿಲ್ಲಾ ಅಧ್ಯಕ್ಷರು ಆ ಸಭೆಯಲ್ಲಿ ಭಾಗವಹಿಸಿದ್ದರು. ಆ ಸಭೆಯಲ್ಲಿ ದೇವೇಗೌಡರು ಮಗನ ಮಾತು ಕೇಳಿ ಮೈತ್ರಿ ಮಾಡಿಕೊಂಡಿದ್ದಾರೆ. ಹೀಗಾಗಿ ದೇವೇಗೌಡರಿಗೆ ಮತ್ತೊಮ್ಮೆ ಅವಕಾಶ ಕೊಡೋಣ ಅಂತ ತೀರ್ಮಾನ ಆಗಿದೆ ಎಂದರು.


ಕುಮಾರಸ್ವಾಮಿ ಏಕಾಏಕಿಯಾಗಿ ಮೈತ್ರಿ ಮಾಡಿಕೊಂಡಿದ್ದಾರೆ. ಡಿ.9ರವರೆಗೂ ಅವಕಾಶ ಕೊಡಲಾಗಿದೆ. ಡಿ.9ರ ಒಳಗೆ ನಿರ್ಧಾರ ವಾಪಸ್ ಮಾಡದೇ ಹೋದರೆ ರಾಷ್ಟ್ರೀಯ ಅಧ್ಯಕ್ಷರು ಬದಲಾವಣೆ ಮಾಡ್ತೀವಿ ಅಂತ ಹೇಳಿದ್ದಾರೆ. ನಾನೇನು ಈ ಸಭೆ ಮಾಡಿಲ್ಲ. ಉಪಾಧ್ಯಕ್ಷರು ಕರೆದಿದ್ದರು ಅದಕ್ಕೆ ಹೋದೆ. ದೇವೇಗೌಡರು ಇಂತಹ ಒಂದು ಸಭೆ ಮಾಡಿಲ್ಲ. ಜಿಟಿ ದೇವೇಗೌಡ ಸಭೆ ಮಾಡಿದ್ರು. ಅವರ ಹತ್ರ ಮಾತಾಡಿಸ್ತಾರೆ ಅಷ್ಟೇ. ಇದು ಫ್ಯಾಮಿಲಿ ಅಂಡ್ ಕೋರ್ಟ್ ತರಹ ಆಗಲ್ಲ. ಇಷ್ಟು ದಿನ ಹಾಗಿತ್ತು. ಈಗ ಅದು ಆಗಲ್ಲ. ನನ್ನ ತೆಗೆದಿದ್ದೇ ತಪ್ಪು ಅಂತ ಕೋರ್ಟ್‌ಗೆ ಹೋಗ್ತೀನಿ. ಬಿಜೆಪಿ ಜೊತೆ ಹೋಗಿ ಕುಮಾರಸ್ವಾಮಿ ಮಾತಾಡಿದ್ರು. ಅವರನ್ನು ದೇವೇಗೌಡರು ಅಮಾನತು ಮಾಡಬೇಕು. ಅದು ಬಿಟ್ಟು ನನ್ನನ್ನು ಅಮಾನತು ಮಾಡಿದ್ದೇ ನಿಯಮಬಾಹಿರ ಎಂದರು.

ನಾನು ಎಂಎಲ್‌ಸಿ ಸ್ಥಾನ ಬಿಟ್ಟು ಬಂದೆ. ಹೀಗೆ ಮಾಡಿದ್ದು ಸರಿನಾ ದೇವೇಗೌಡರೇ? ನಿಮ್ಮ ಮಗನಿಗಾಗಿ ಎಷ್ಟು ಜನರನ್ನು ಬಲಿ ಕೊಡಬೇಕು ಅಂತ ಇದ್ದೀರಾ? ನಿಮ್ಮ ಸಿದ್ಧಾಂತಕ್ಕೆ ನೀವು ವಾಪಸ್ ಬನ್ನಿ. ದಸರಾ ಆಯ್ತು ಅಮಿತ್ ಶಾ ಕರೆದರಾ? ವಿಜಯೇಂದ್ರ, ಅಶೋಕ್ ಅಧ್ಯಕ್ಷ, ವಿಪಕ್ಷ ನಾಯಕನ ಮಾಡಿದ್ರು. ಅವರ ಮುಂದೆ ಹೋಗಿ ಕುಮಾರಸ್ವಾಮಿ ನಿಲ್ತೀರಾ? 2 ಸೀಟಿಗೋಸ್ಕರ ಅಮಿತ್ ಶಾ ಮುಂದೆ ದೇವೇಗೌಡರು ಹೋಗಿ ನಿಂತುಕೊಳ್ಳೋದಾ? ಜೆಡಿಎಸ್ ಅವರು ಮೈಮೇಲೆ ಬಿದ್ದು ಬಿಜೆಪಿ ಜೊತೆ ಹೋಗ್ತಿದ್ದಾರೆ. ತೆನೆ ಹೊತ್ತ ಮಹಿಳೆಯನ್ನು ಯಾರ ಯಾರ ಹತ್ತಿರ ಕರೆದುಕೊಂಡು ಹೋಗ್ತೀರಾ? ಕಾಂಗ್ರೆಸ್ ಆಯ್ತು, ಬಿಜೆಪಿ ಆಯ್ತು ಇನ್ನು ಯಾರ ಜೊತೆ ಕಳಿಸ್ತೀರಾ ಎಂದು ಕಿಡಿಕಾರಿದರು.

ಚನ್ನಪಟ್ಟಣದಲ್ಲಿ 20 ಸಾವಿರ ಮುಸ್ಲಿಂ ಮತ ಪಡೆದು ಗೆದ್ರಲ್ಲ ಅದು ಯಾರ ಮುಖ ನೋಡಿ ಬಂತು. ಇದು ಸಂತೆ ವ್ಯಾಪಾರನಾ ದೇವೇಗೌಡರೇ? ಚಂದ್ರಶೇಖರ ರಾವ್ ಜೊತೆ ಹೋದ್ರಿ ಅವರನ್ನು ಬಿಟ್ರಿ. ಯಾರನ್ನಾದ್ರು ಒಬ್ಬರನ್ನು ಇಟ್ಕೊಳ್ಳಿ. ಕುಮಾರಸ್ವಾಮಿ ಶಿವಕುಮಾರ್‌ಗೆ ಸಿಎಂ ಆದ್ರೆ ಬೆಂಬಲ ಕೊಡ್ತೀನಿ ಅಂತೀರಾ. ಯಾರು ನಿಮಗೆ ಅಧಿಕಾರ ಕೊಟ್ಟಿದ್ದು? 19 ಜನ ಶಾಸಕರನ್ನು ಕೇಳಿದ್ರಾ? ಇದು ಕಂಪನಿನಾ? ರಾಜಕೀಯ ಪಕ್ಷಾ? ಡಿಕೆಶಿ ನಿಮಗೆ ಸರಿಯಾಗಿ ಉತ್ತರ ಕೊಟ್ಟಿದ್ದಾರೆ ಅಂತ ಲೇವಡಿ ಮಾಡಿದರು.

ನಾನು ಈಗಲೂ ಜೆಡಿಎಸ್ ರಾಜ್ಯಾಧ್ಯಕ್ಷ

ಬೆಂಗಳೂರು: ಜೆಡಿಎಸ್ ಪಕ್ಷದ ಅಮಾನತುಗೊಂಡಿರುವ ನಾಯಕ ಸಿ.ಎಂ.ಇಬ್ರಾಹಿಂ ಅವರು ತಾವು ಈಗಲೂ ಜೆಡಿಎಸ್ ಪಕ್ಷದ ಕರ್ನಾಟಕ ರಾಜ್ಯಾಧ್ಯಕ್ಷರಾಗಿದ್ದು, ತಮ್ಮ ಅಮಾನತು ನಿರ್ಧಾರದ ವಿರುದ್ಧ ಕೋರ್ಟ್ ಮೊರೆ ಹೋಗುವುದಾಗಿ ಸೋಮವಾರ ಹೇಳಿದ್ದಾರೆ.



ಅಂತೆಯೇ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಉಳಿಯುತ್ತಾರೆಯೇ ಎಂಬುದು ಡಿಸೆಂಬರ್ 9ರಂದು ತಿಳಿಯಲಿದೆ ಎಂದು ಹೇಳಿದ ಅವರು, ತಮ್ಮನ್ನು ಪಕ್ಷದಿಂದ ಅಮಾನತುಗೊಳಿಸಿರುವುದನ್ನು ತಡೆಯುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗುವುದಾಗಿ ಮತ್ತು ಈ ಸಂಬಂಧ ಚುನಾವಣಾ ಆಯೋಗಕ್ಕೆ ಪತ್ರ ಬರೆಯುವುದಾಗಿ ಇಬ್ರಾಹಿಂ ಹೇಳಿದ್ದಾರೆ. ನಾನು ಈಗಲೂ ಜೆಡಿಎಸ್‌ನ ರಾಜ್ಯಾಧ್ಯಕ್ಷ, ಅವರು (ಗೌಡ) ರಾಷ್ಟ್ರೀಯ ಅಧ್ಯಕ್ಷರಾಗಿ ಎಲ್ಲಿ ಉಳಿಯುತ್ತಾರೆ. ರಾಷ್ಟ್ರೀಯ ಪರಿಷತ್ ಸದಸ್ಯರು ಮತ್ತು ರಾಜ್ಯಾಧ್ಯಕ್ಷರು ಅವರನ್ನು ತೆಗೆದುಹಾಕುತ್ತಾರೆಯೇ? ಈ ಬಗ್ಗೆ ಶೀಘ್ರ ತಿಳಿಯಲಿದೆ ಎಂದು ಹೇಳಿದರು.

ಯುವಕನ ಬೆದರಿಸಿ ಸುಲಿಗೆ; ತೃತೀಯಲಿಂಗಿಯ ಬಂಧನ

ಚಿನ್ನದ ಸರ ವಶಕ್ಕೆ

ಮೈಸೂರು,ನ.20(ಎಸ್‌ಬಿಡಿ)– ಯುವಕನನ್ನು ಬೆದರಿಸಿ ಸುಲಿಗೆ ಮಾಡಿದ್ದ ತೃತೀಯ ಲಿಂಗಿಯನ್ನು ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿ, 23 ಗ್ರಾಂ ಸರವನ್ನು ವಶಪಡಿಸಿಕೊಂಡಿದ್ದಾರೆ.

ವಿಜಯನಗರ 4ನೇ ಹಂತ ಕಾಯಿ ಮಟ್ಟೆ ಜಂಕ್ಷನ್ ಬಳಿ ಕೆಲ ದಿನಗಳ ಹಿಂದೆ ರಾತ್ರಿ ಸುಮಾರು 7.40ರ ವೇಳೆಯಲ್ಲಿ ತೃತೀಯ ಲಿಂಗಿಯೊಬ್ಬರು ಯುವಕನನ್ನು ಬೆದರಿಸಿ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಯುವಕ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ವಿಜಯನಗರ ಪೊಲೀಸರು, ವಿಶೇಷ ತಂಡದ ಮೂಲಕ ಕಾರ್ಯಾಚರಣೆ ನಡೆಸಿ, ಅದೇ ಬಡಾವಣೆಯ ಆರ್‌ಎಂಪಿ ಜಂಕ್ಷನ್ ಬಳಿ ಆರೋಪಿಯನ್ನು ಬಂಧಿಸಿ, ಸರವನ್ನು ವಶಪಡಿಸಿಕೊಂಡಿದ್ದಾರೆ. ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ, ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರಪ್ರಸಾದ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಎಸ್.ಡಿ.ಸುರೇಶ್ ಕುಮಾರ್, ಎಸ್‌ಐಗಳಾದ ಕೆ.ವಿಶ್ವನಾಥ್, ಕೆ.ನಾರಾಯಣ, ಕೆ.ಎನ್.ಮಂಜುನಾಥ್, ಸಂಜಯ್ ಪವಾರ್ ಹಾಗೂ ಅಪ್ಪಣ್ಣ ದೇವಡಿಗಾ ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಮೈಸೂರು, ನ.20– ರಾಜ್ಯದಾದ್ಯಂತ ಡಾ.ಬಾಬು ಜಗಜೀವನ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಪರಿಶಿಷ್ಟ ಜಾತಿ, ಆದಿ ಕರ್ನಾ ಟಕ, ಆದಿ ಮಾದಿಗ, ಚಮ್ಮಾರ, ಡೋರಾ, ಸಮಗಾರ, ಮೋಚಿ ಜನಾಂಗದವರಿಗೆ 2023–24ನೇ ಸಾಲಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳಿಗೆ ನವೆಂಬರ್ 20ರಿಂದ ಡಿ.19ರವರೆಗೆ ಅರ್ಜಿ ಸಲ್ಲಿಸಬಹುದು. ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಡಾ.ಬಾಬು ಜಗಜೀವನ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಜಿಲ್ಲಾ ಸಂಯೋಜಕರನ್ನು (9480886258, 9886020 499) ಸಂಪರ್ಕಿಸಬಹುದು.

ಸಾರ್ವಜನಿಕ ಗ್ರಂಥಾಲಯಗಳು ಇಲ್ಲದಿದ್ದಲ್ಲಿ ಲೇಖಕರ ಜೀವನ ಬೀದಿಗೆ ಬೀಳುತ್ತಿತ್ತು

- ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್ ಅಭಿಮತ
- ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ–2023



ಮೈಸೂರು,ನ.20(ಎಸ್‌ಪಿಎನ್)–ಸಾರ್ವಜನಿಕ ಗ್ರಂಥಾಲಯಗಳು ಲೇಖಕರ ಹೊಟ್ಟೆ ತುಂಬಿಸುವ ಹಾಗೂ ಅವರ ಕನಸುಗಳನ್ನು ನನಸು ಮಾಡುವ ಕೇಂದ್ರಗಳಾಗಿವೆ ಎಂದು ಹಿರಿಯ ಸಾಹಿತಿ, ಡಾ.ಕೆ.ಕೃಷ್ಣಮೂರ್ತಿ ಸಂಶೋಧನ ಪ್ರತಿಷ್ಠಾನದ ನಿರ್ದೇಶಕಿ ಡಾ.ಕೆ.ಲೀಲಾಪ್ರಕಾಶ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಕುವೆಂಪುನಗರ ಶಾಖಾ ಗ್ರಂಥಾಲಯ ಆವರಣದಲ್ಲಿ ನಗರ ಕೇಂದ್ರ ಗ್ರಂಥಾಲಯ ಮತ್ತು ಕುವೆಂಪುನಗರ ಶಾಖಾ ಗ್ರಂಥಾಲಯ ಸಹಯೋಗದೊಂದಿಗೆ 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ–2023'ರ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಲೇಖಕರು ಬರೆದ ಪುಸ್ತಕಗಳನ್ನು ಖರೀದಿಸಿ, ಸಾರ್ವಜನಿಕರ ಗ್ರಂಥಾಲಯಗಳು ಲೇಖಕರಿಗೆ ಸಹಾಯ ಮಾಡುತ್ತಿವೆ ಎಂದರು.

ಸಾರ್ವಜನಿಕ ಗ್ರಂಥಾಲಯಗಳು ಇಲ್ಲದಿದ್ದರೆ, ಬಡಪಾಯಿ ಲೇಖಕರ ಜೀವನ ಬೀದಿಗೆ ಬರುತ್ತಿತ್ತು. ಅಂತಹ ಲೇಖಕರು ಬರೆದ ಪುಸ್ತಕಗಳು ಮನೆಯಲ್ಲಿಟ್ಟುಕೊಂಡು ಕೊಳೆಸಬೇಕಿತ್ತು. ಹಾಗಾಗಿ ಸಾರ್ವಜನಿಕ ಗ್ರಂಥಾಲಯಗಳು ಹಿರಿಯ, ಯುವ ಲೇಖಕರನ್ನು ಪ್ರೋತ್ಸಾಹಿಸುವ ಕೇಂದ್ರಗಳಾಗಿವೆ. ಆದರೆ, ಕೊರೊನಾ ನಂತರ ಅನೇಕ ಲೇಖಕರ ಪುಸ್ತಕಗಳನ್ನು ಸರ್ಕಾರ ಖರೀದಿಸಲು ಮುಂದಾಗುತ್ತಿಲ್ಲ. ಇದರಿಂದ ಅನೇಕ ಲೇಖಕರು ಬರೆದಿರುವ ಪುಸ್ತಕಗಳು ಅವರವರ ಮನೆಯಲ್ಲಿಯೇ ಕೊಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಎಸ್.ಆರ್.ರಂಗನಾಥನ್ ಅವರು 1892ರ ಆ.2ರಂದು ಜನಿಸಿದರು. ಭಾರತದ ಗ್ರಂಥ ಪಾಲಕ ಮತ್ತು ಗಣಿತಶಾಸ್ತ್ರಜ್ಞರಾಗಿ ಕೆಲಸ ಮಾಡಿದ್ದು, ಗ್ರಂಥಾಲಯ ಕ್ಷೇತ್ರಕ್ಕೆ ಅತ್ಯಂತ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅಲ್ಲದೆ ವಿವಿಗಳಲ್ಲಿ ಗ್ರಂಥಾಲಯ ವಿಜ್ಞಾನ ವಿಭಾಗ ಏಳಿಗೆಗೆ ಅವರು ರಚಿಸಿದ ಐದು ನಿಯಮಗಳು ಕಾರಣವಾಗಿವೆ. ಅಂತೆಯೇ ಭಾರತೀಯ ಗ್ರಂಥಾಲಯಕ್ಕೆ ಹೊಸ ರೂಪಕೊಟ್ಟ ಪಿತಾಮಹ ಎಂದು ಕರೆಯುತ್ತಾರೆ ಎಂದರು.

ಗ್ರಂಥಾಲಯ ಕ್ಷೇತ್ರದ ಉಳಿವಿಗಾಗಿ ಅವರ ಚಿಂತನೆಗಳು ಪ್ರಪಂಚದಾದ್ಯಂತ ಹೆಸರುವಾಸಿಯಾಗಿವೆ. ಹಾಗಾಗಿ ರಂಗನಾಥನ್ ಅವರ ಜನ್ಮದಿನವನ್ನು ಪ್ರತಿವರ್ಷ ಭಾರತದಲ್ಲಿ 'ರಾಷ್ಟ್ರೀಯ ಗ್ರಂಥಾಲಯ ದಿನ'ವನ್ನಾಗಿ ಆಚರಿಸುತ್ತಿರುವುದು ಉತ್ತಮ ಸಂಗತಿ ಎಂದರು.

ರಂಗನಾಥನ್ ಅವರು, 2 ದಶಕಗಳ ಕಾಲ ಮದ್ರಾಸ್‌ನಲ್ಲಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿ, ನಂತರ ಬನಾರಸ್ ಹಿಂದೂ ವಿವಿ (1945–47) ಮತ್ತು ದೆಹಲಿ ವಿವಿಯಲ್ಲಿ (1947–55) ಗ್ರಂಥಾಲಯ ವಿಜ್ಞಾನದ ಪ್ರಾಧ್ಯಾಪಕರಾಗಿದ್ದರು. 1944ರಿಂದ 1953ರವರೆಗೆ ಇಂಡಿಯನ್ ಲೈಬ್ರರಿ ಅಸೋಸಿಯೇಷನ್‌ನ ಅಧ್ಯಕ್ಷರಾಗಿದ್ದರು. 1957ರಲ್ಲಿ ಅವರು ಇಂಟರ್ ನ್ಯಾಷನಲ್ ಫೆಡರೇಷನ್ ಫಾರ್ ಇನ್ಫಾರ್ಮೇಶನ್ ಅಂಡ್ ಡಾಕ್ಯುಮೆಂಟೇಶನ್ (ಎಫ್‌ಐಡಿ) ಗೌರವ ಸದಸ್ಯರಾಗಿಯೂ ಆಯ್ಕೆಯಾದರು ಮತ್ತು ಗ್ರೇಟ್ ಬ್ರಿಟನ್ ಲೈಬ್ರರಿ ಅಸೋಸಿಯೇಷನ್ ಉಪಾಧ್ಯಕ್ಷರಾಗಿದ್ದರು.

ಈ ವೇಳೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಆಯೋಜಿಸಿದ್ದ ರಸಪ್ರಶ್ನೆ ಸ್ಪರ್ಧೆಯಲ್ಲಿ ದಯಾನಂಧ ಪ್ರಥಮ, ಕೆ.ರಾಣಿ ದ್ವಿತೀಯ, ರೂಪ ತೃತೀಯ ಬಹುಮಾನ ಪಡೆದರು. ವೇದಿಕೆಯಲ್ಲಿ ಕುವೆಂಪುನಗರ ಶಾಖಾ ಗ್ರಂಥಾಲಯ ಸಮಿತಿ ಸದಸ್ಯ ಎ.ಜಿ.ದೇವರಾಜು, ಕುವೆಂಪುನಗರ ಶಾಖಾ ಗ್ರಂಥಾಲಯ ಪ್ರಭಾರಿ ಗ್ರಂಥಪಾಲಕ ಹೆಚ್.ವಿ.ರಮೇಶ್ ಉಪಸ್ಥಿತರಿದ್ದರು.

ಮಿಶ್ರತಳಿ ಹಸು ಘಟಕ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ನ.20– ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ 2023–24ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗದ ರೈತಾಪಿ ವರ್ಗದವರಿಗೆ ಹೈನು ಘಟಕ ಒಂದು ಮಿಶ್ರತಳಿ ಹಸು ಘಟಕದ ಮೊತ್ತ ರೂಪಾಯಿ 65,000 ಗಳಾಗಿದ್ದು, ಇದರಲ್ಲಿ ಸಹಾಯಧನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಫಲಾನು ಭವಿಗಳಿಗೆ ಶೇ.90ರಷ್ಟು ಇರುತ್ತದೆ. ಆಸಕ್ತಿ ಯುಳ್ಳ ರೈತಾಪಿ ವರ್ಗದವರು ನ.27ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಡಾ.ಜನಾರ್ಧನ್ ಮುಖ್ಯ ಪಶುವೈದ್ಯಾಧಿಕಾರಿ, ಉಪನಿರ್ದೇಶಕರ ಕಚೇರಿ, ಪಶುಪಾಲನಾ ಇಲಾಖೆ ಮೈಸೂರು (ದೂ.ಸಂ: 0812420606 ಮೊ.ಸಂ: 7975140996), ಡಾ.ಪೂರ್ಣಾನಂದ ಮುಖ್ಯ ಪಶುವೈದ್ಯಾಧಿಕಾರಿ ನಗರ ಪಶು ಆಸ್ಪತ್ರೆ, ಮೈಸೂರು, 0821–2423451, 9448754996), ಡಾ.ಮಲ್ಲಿಕಾರ್ಜುನ ಸ್ವಾಮಿ ಮುಖ್ಯ ಪಶುವೈದ್ಯಾಧಿಕಾರಿ ಪಶು ಆಸ್ಪತ್ರೆ, ನಂಜನಗೂಡು ದೂ.ಸಂ: 08221–226742, 9141644694, ಡಾ.ಬಿ.ಮಂಜುನಾಥ ಮುಖ್ಯ ಪಶುವೈದ್ಯಾಧಿಕಾರಿ ಪಶುಆಸ್ಪತ್ರೆ ಕೆ.ಆರ್.ನಗರ 08223–262617, 9448739118, ಡಾ.ಚೆನ್ನಬಸಪ್ಪ ಮುಖ್ಯ ಪಶುವೈದ್ಯಾಧಿಕಾರಿ ಪಶು ಆಸ್ಪತ್ರೆ ಹುಣಸೂರು, 0832–2252098, 9164969898, ಡಾ.ಸೋಮಯ್ಯ ಮುಖ್ಯ ಪಶುವೈದ್ಯಾಧಿಕಾರಿ ಪಶು ಆಸ್ಪತ್ರೆ ಪಿರಿಯಾಪಟ್ಟಣ 08223–273112, 9449391811, ಡಾ.ಲಿಂಗರಾಜು ಮುಖ್ಯ ಪಶುವೈದ್ಯಾಧಿಕಾರಿ ಪಶು ಆಸ್ಪತ್ರೆ ಟಿ.ನರಸೀಪುರ 08227–261467, 9900429993, ಡಾ. ಪ್ರಸನ್ನ ಮುಖ್ಯ ಪಶುವೈದ್ಯಾಧಿಕಾರಿ ಪಶು ಆಸ್ಪತ್ರೆ ಹೆಚ್.ಡಿ.ಕೋಟೆ 08228255241, 9980001187, ಡಾ.ವೈ.ಡಿ.ರಾಜಣ್ಣ ಮುಖ್ಯ ಪಶುವೈದ್ಯಾಧಿಕಾರಿ ಪಶು ಆಸ್ಪತ್ರೆ ಸರಗೂರು ಮೊ.ಸಂ: 8892580150 ಇವರನ್ನು ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಬಾಸ್ : "ನೋಡಿ ಇವ್ರೆ, ನಮ್ಮ ಆಫೀಸ್‌ನಲ್ಲಿ ನಿಮ್ಗೆ ಕೊಡೋಕೆ ಯಾವ ಕೆಲ್ಸಾನೂ ಇಲ್ಲ. ಬೇರೆ ಕೆಲ್ಸ ನೋಡ್ಕೊಳ್ಳಿ"

ಆತ : "ದಯವಿಟ್ಟು ನನ್ನನ್ನು ಅಪಾಯಿಂಟ್ ಮಾಡ್ಕೊಳ್ಳಿ ಸಾರ್, ನಾನು ಯಾವತ್ತು ಯಾವ ಕೆಲ್ಸಾನೂ ಕೇಳಲ್ಲ...!"

ಮೈಸೂರು ಮಿತ್ರ

ಮಂಗಳವಾರ, 21 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಎಲ್ಲಾ ಮಹತ್ಕಾರ್ಯಗಳ ಸಾಧನೆಗೂ ಮೂಲಭೂತವಾದ ಸಾಧನವೊಂದಿದೆ. ಅದೇ ಧೈರ್ಯ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೊಡುವವರಿಗೆ ಕೊಟ್ಟರೆ ನನಗೇನುಳಿಯಿತು? ಅಂದರಂತೆ

ನಿಮ್ಮ ಪತ್ರಗಳು

ಪ್ರಾಣಿಗಳನ್ನು ಪ್ರೀತಿಸೋಣ !

ಮಾನ್ಯರೆ,

ನಾಯಿ ಕಾಣೆಯಾಗಿರುವ ಬಗ್ಗೆ ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ಜಾಹೀರಾತನ್ನು ನೋಡಿ ಆಶ್ಚರ್ಯವಾಯಿತು. ಸಾಮಾನ್ಯವಾಗಿ ಕಾಣೆಯಾಗುವ ವ್ಯಕ್ತಿಗಳ ಬಗೆಗಿನ ಜಾಹೀರಾತು ಪ್ರಕಟವಾಗುವುದು ಸಾಮಾನ್ಯ ಸಂಗತಿ. ಆದರೆ ಪ್ರಾಣಿಗಳು ಕಾಣೆಯಾಗುವ ಬಗ್ಗೆ ಬರುವ ಜಾಹೀರಾತುಗಳು ತುಂಬಾ ಕಡಿಮೆ ಅಥವಾ ವಿರಳ ಎನ್ನಬಹುದು. ಯಾವುದಾದರೂ ಸಾಕು ಪ್ರಾಣಿ ಕಾಣೆಯಾದರೆ, ಅದರ ಮಾಲೀಕರು ಆ ಪೀಡೆ ಹೋದದ್ದೇ ಒಳ್ಳೆಯದಾಯಿತು ಎಂದು ಹೇಳುವುದುಂಟು. ಸಾಮಾನ್ಯವಾಗಿ ಮನೆಗಳಲ್ಲಿ ಇರುವ ಬೆಕ್ಕುಗಳ ಉಪದ್ರವದಿಂದ ಮನೆಯ ಮಾಲೀಕರು ಸಾಕಷ್ಟು ಉಪಟಳ ಅನುಭವಿಸಿರಲು ಸಾಧ್ಯ. ಆದ್ದರಿಂದಲೇ ಅನೇಕರು ಪ್ರಾಣಿಗಳನ್ನು ತಮ್ಮ ಮನೆಗಳಲ್ಲಿ ಸಾಕಲು ಇಷ್ಟಪಡುವುದಿಲ್ಲ. ಆದರೆ ಕೆಲವು ಮಹಾನುಭಾವರು ತಾವು ಪ್ರೀತಿಯಿಂದ ಸಾಕಿದ ನಾಯಿ, ಬೆಕ್ಕು ಮುಂತಾದ ಸಾಕು ಪ್ರಾಣಿಗಳು ಕಾಣೆಯಾದರೆ ಅತೀವ ದುಃಖ ಪಡುತ್ತಾರೆ. ಕಡೆಗೆ ಪತ್ರಿಕೆಯಲ್ಲಿ ಜಾಹೀರಾತು ಕೂಡ ನೀಡುತ್ತಾರೆ. ಅದೆಷ್ಟೋ ಜನ ಪ್ರಾಣಿಗಳ ಬಗ್ಗೆ ವಿಶೇಷವಾದ ಪ್ರೀತಿ ಮತ್ತು ಕಾಳಜಿ ಹೊಂದಿರುತ್ತಾರೆ. ಅವರಲ್ಲಿ ಕೆಲವರು ತಾವು ಪ್ರೀತಿಯಿಂದ ಸಾಕಿದ ಪ್ರಾಣಿಗಳು ನಿಧನ ಹೊಂದಿದರೆ, ಅಂತ್ಯಸಂಸ್ಕಾರ ಕೂಡ ನಡೆಸಿ ತಮ್ಮ ಗೌರವ ಸೂಚಿಸುತ್ತಾರೆ. ಕೆಲವು ಕ್ರೂರ ಮೃಗಗಳನ್ನು ಹೊರತುಪಡಿಸಿ, ಅನೇಕ ಪ್ರಾಣಿಗಳು ಮನುಷ್ಯನಿಗೆ ಒಂದಲ್ಲಾ ಒಂದು ರೀತಿಯಲ್ಲಿ ನೆರವಾಗುತ್ತವೆ. ಮನುಷ್ಯ ಮತ್ತು ಪ್ರಾಣಿ ಪಕ್ಷಿಗಳ ಸಂಬಂಧ ಯುಗಯುಗಾಂತರಗಳಿಂದಲೂ ಸಾಗಿ ಬಂದಿದೆ. ಎಲ್ಲಾ ಪ್ರಾಣಿಗಳನ್ನು ಪ್ರೀತಿಸೋಣ, ರಕ್ಷಿಸೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಭಾರತದ ಆಟಗಾರರಿಗೆ ಮಾನಸಿಕ ಕ್ಷಮತೆ ತುಂಬಬೇಕಿದೆ

ಮಾನ್ಯರೆ,

ಯಾವುದೇ ಕಾರ್ಯ ಸಾಧಿಸಬೇಕಾದರೆ ಇಚ್ಛಾಶಕ್ತಿ ಅವಶ್ಯಕತೆ ಹೆಚ್ಚಾಗಿ ರುತ್ತದೆ. ಇತ್ತೀಚೆಗೆ ಮುಕ್ತಾಯವಾದ ಕ್ರಿಕೆಟ್ ವಿಶ್ವಕಪ್ 2023ರ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ಸೋತಿರುವುದು ನಿರ್ಣಾಯಕ ಪಂದ್ಯಗಳಲ್ಲಿ ಭಾರತ ಕ್ರಿಕೆಟ್ ತಂಡ ಸೋಲುವ ಪರಂಪರೆಯನ್ನು ಮುಂದುವರೆಸಿದಂತಾಗಿದೆ.

ಇದರ ಪ್ರಾರಂಭ 2000ನೇ ಸಾಲಿನ ಚಾಂಪಿಯನ್ ಟ್ರೋಫಿ ಫೈನಲ್, 2003ರ ವಿಶ್ವಕಪ್ ಫೈನಲ್, 2015ರ ವಿಶ್ವಕಪ್ ಸೆಮಿಫೈನಲ್, 2017 ರ ಚಾಂಪಿಯನ್ ಟ್ರೋಫಿ ಫೈನಲ್, 2020 ಮತ್ತು 2022ರ ವಿಶ್ವ ಟೆಸ್ಟ್ ಚಾಂಪಿಯನ್ ಟ್ರೋಫಿ ಫೈನಲ್ ಹೀಗೆ ನಿರ್ಣಾಯಕ ಪಂದ್ಯಗಳಲ್ಲಿ ಆತ್ಮವಿಶ್ವಾಸದ ಕೊರತೆ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಆಟ ಪ್ರದರ್ಶನ ಮಾಡದೆ ಇರುವುದು ಸೋಲಿಗೆ ಮುಖ್ಯ ಕಾರಣವಾಗಿದೆ.

ಸತತ ಸೋಲುಗಳಿಂದ ಪಾಠ ಕಲಿಯದ ಭಾರತ ಕ್ರಿಕೆಟ್ ತಂಡ ಫೈನಲ್ ಪಂದ್ಯಗಳನ್ನು ಗೆಲ್ಲುವ ಕಲೆಯನ್ನು ಕಲಿಯಬೇಕಾಗಿದೆ. ಇತ್ತೀಚಿನ ಫೈನಲ್ ಪಂದ್ಯದಲ್ಲಿ ಟಾಸ್ ಮುಖ್ಯ ಪಾತ್ರ ವಹಿಸಿದೆ. ಮೊದಲು ಫೀಲ್ಡ್ ಮಾಡಿದ ಆಸ್ಟ್ರೇಲಿಯಾ ತಂಡದ ಬೌಲರ್‌ಗಳಿಗೆ ಪಿಚ್‌ನಿಂದ ಉತ್ತಮ ಸಹಕಾರ ದೊರೆಯಿತು. ಮತ್ತು ಕ್ಷೇತ್ರ ರಕ್ಷಣೆಯಲ್ಲಿ ಆಸ್ಟ್ರೇಲಿಯಾ ಆಟಗಾರರಿಗೆ ಅವರೇ ಸರಿಸಾಟಿ.

ಭಾರತ ಹಲವಾರು ಶ್ರೇಷ್ಠ ಬ್ಯಾಟ್ಸ್‌ಮನ್‌ಗಳನ್ನು ಹೊಂದಿದ್ದರೂ ನಿನ್ನೆಯ ಫೈನಲ್ ಪಂದ್ಯದಲ್ಲಿ ಮುನ್ನುಗ್ಗುವ ಮನೋಭಾವನೆಯನ್ನು ಪ್ರದರ್ಶಿಸುವಲ್ಲಿ ಎಲ್ಲರೂ ವಿಫಲವಾದರು. ರೋಹಿತ್ ಶರ್ಮಾರ ಧೈರ್ಯದ ಆಟ ಬೇರೆ ಆಟಗಾರರಿಗೆ ಪಾಠವಾಗಬೇಕಿತ್ತು. ಆದರೆ ಬ್ಯಾಟಿಂಗ್ ಮರೆತವರಂತೆ ಆಡಿದ ಭಾರತೀಯ ಕ್ರಿಕೆಟ್ ತಂಡಕ್ಕೆ ವಿಶ್ವಕಪ್ ಒಂದು ಕನಸಾಯಿತು. ಭಾರತ ಕ್ರಿಕೆಟ್ ತಂಡ ವಿಶ್ವಕಪ್ ಸೋತಿದ್ದು ಆತ್ಮಾವಲೋಕನದ ಅವಶ್ಯಕತೆಯಿದೆ ಬಿಸಿಸಿಐ ಭಾರತ ಕ್ರಿಕೆಟ್ ತಂಡ ನಿರ್ಣಾಯಕ ಪಂದ್ಯಗಳಲ್ಲಿ ಸೋಲುವುದರ ಬಗ್ಗೆ ಆಟಗಾರರ ಮಾನಸಿಕ ಕ್ಷಮತೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಸೋತರೂ ಭಾರತೀಯ ತಂಡಕ್ಕೆ ಎಲ್ಲಾ ಭಾರತೀಯರ ಪರವಾಗಿ ಅಭಿನಂದನೆಗಳು.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ಶ್ರಮ ಸಂಸ್ಕೃತಿಯ ಪ್ರತೀಕ ಪೇಪರ್ ಸುಬ್ಬಣ್ಣ



ಮಾನ್ಯರೆ,

ನಗರದ ಐತಿಹಾಸಿಕ ಲ್ಯಾನ್ಸ್‌ಡೌನ್ ಕಟ್ಟಡದ ಮಳಿಗೆಯ ರಸ್ತೆ ಬದಿಯಲ್ಲಿ ಸುಮಾರು 5–6 ದಶಕಗಳಿಂದಲೂ ದಿನ ಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಮಾರಾಟ ಮಾಡುತ್ತಾ ಓದುಗರ ಹಸಿವನ್ನು ತಣಿಸುತ್ತಾ ಇದನ್ನೇ ಕಾಯಕ ತಪಸ್ವಿಯಂತೆ ಆಚರಿಸಿಕೊಂಡು ಬಂದಿದ್ದ ಕಾಯಕ ಜೀವಿ, ಶ್ರಮಜೀವಿ, ಶ್ರಮ ಸಂಸ್ಕೃತಿಯ ಪ್ರತೀಕವಾಗಿದ್ದ, ಸ-ಹೃದಯಿ, ಸಂಯಮಿ ಪೇಪರ್ ಸುಬ್ಬಣ್ಣನವರ ಸಾವು ನಿಜಕ್ಕೂ ಅತೀವ ನೋವು ತಂದಿದೆ.

ಲ್ಯಾನ್ಸ್‌ಡೌನ್ ಕಟ್ಟಡದ ರಸ್ತೆ ಬದಿಯಲ್ಲಿ ಪೇಪರ್ ಮತ್ತು ನಿಯತಕಾಲಿಕೆಗಳನ್ನು ಹರಡಿಕೊಂಡು ಸದಾ ನಗುಮೊಗದಿಂದ ಇರುತ್ತಿದ್ದ ಸುಬ್ಬಣ್ಣನ ಹತ್ತಿರ ಪೇಪರ್ ತೆಗೆದುಕೊಳ್ಳಲು ಬರುತ್ತಿದ್ದರೆ ಸಂತಸದಿಂದ ವಿತರಿಸುತ್ತಿದ್ದರು. ಹಾಗೆಯೇ ಮೈಸೂರಿನ ಪತ್ರಕರ್ತರಿಗೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ತೀರಾ ಹತ್ತಿರದಲ್ಲಿದ್ದರು. ಖಾಯಂ ಓದುಗರಂತೂ ಬೇರೆಲ್ಲೂ ಪೇಪರ್ ಖರೀದಿಸದೆ ಸುಬ್ಬಣ್ಣನವರ ಹತ್ತಿರವೇ ಕೊಂಡು ಓದಬೇಕೆಂಬ ಹಂಬಲದಿಂದ ದೂರದಿಂದ ಹುಡುಕಿ ಬರುತ್ತಿದ್ದುದ್ದುಂಟು. ಇದಕ್ಕೆ ಅವರ ಸ–ಹೃದಯವಂತಿಕೆಯೇ ಕಾರಣ.

ಅಪ್ಪಟ ಕನ್ನಡಾಭಿಮಾನಿಯಾಗಿದ್ದ ಸುಬ್ಬಣ್ಣ ನಾಡಿನ ನುಡಿ, ನೆಲ, ಜಲಕ್ಕೆ ಧಕ್ಕೆಯಾದರೆ ಅದರ ವಿರುದ್ಧ ಹೋರಾಟ ಮಾಡುತ್ತಿದ್ದರು. ಇವರ ಬಹುಮುಖ ಸಾಧನೆಯನ್ನು ಗುರುತಿಸಿ ಹಲವು ಪ್ರಶಸ್ತಿಗಳು, ಗೌರವಗಳು ಪ್ರಾಪ್ತಿಯಾಗಿವೆ. ನಾನು ಪೇಪರ್‌ಕೊಳ್ಳಲು ಹೋದಾಗಲೆಲ್ಲಾ ಎದುರುಗಡೆ ಇರುವ ಚಹಾ ಅಂಗಡಿಯಲ್ಲಿ ಬಿಸಿ ಚಹಾ ಹೀರುತ್ತಾ ಉಭಯ ಕುಶಲೋಪರಿ ವಿಚಾರಿಸುತ್ತಿದ್ದರು. ಈ ನೆನಪು ನನ್ನಲ್ಲಿ ಸದಾ ಜೀವಂತ. ಸುಬ್ಬಣ್ಣನವರ ಕಾಯಕ ನಿಷ್ಠೆಯಿಂದ ಮೈಸೂರಿನ ಜನತೆಯಲ್ಲಿ ಸದಾ ಅಮರರಾಗಿರುತ್ತಾರೆ ಸುಬ್ಬಣ್ಣ ತಾತಾ.

–ಸಾಲುಂಡಿ ಎಸ್.ದೊರೆಸ್ವಾಮಿ, ಮೈಸೂರು.

ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಲಿ

ಮಾನ್ಯರೆ,

ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರವಿರುವ ನಾಮಫಲಕವನ್ನು ಕಿಡಿಗೇಡಿಗಳು ಹರಿದು ವಿಕೃತಿ ಮೆರೆದಿರುವುದು ತಲೆತಗ್ಗಿಸುವ ವಿಚಾರ. ರಾಷ್ಟ್ರನಾಯಕರ ಭಾವಚಿತ್ರಕ್ಕೆ ಅಪಮಾನಿಸಿರುವುದು ಅತ್ಯಂತ ಖಂಡನೀಯ. ವಿಶ್ವವೇ ಮೆಚ್ಚುವಂತಹ ನಾಯಕ, ಜ್ಞಾನದ ಸಂಕೇತ. ಸಂವಿಧಾನ ಶಿಲ್ಪಿಯು ಆಗಿರುವ ಅಂಬೇಡ್ಕರ್ ಅವರನ್ನು ಅಪಮಾನಿಸುವುದು ಎಂದರೆ ದೇಶದ್ರೋಹದ ಕೆಲಸವೇ ಸರಿ. ಇದಕ್ಕೆ ಯಾರೇ ಕಾರಣರಾಗಿದ್ದರೂ ಸರಿ ಅಂತಹವರಿಗೆ ದೇಶ ದ್ರೋಹದಡಿ ಕಠಿಣ ಕಾನೂನು ಕ್ರಮ ಕೈಗೊಂಡು ಶಿಕ್ಷೆಯಾಗಬೇಕು. ಈ ಕ್ರಮ ನೀಚ ಮನಸ್ಸುಳ್ಳವರಿಗೆ ಎಚ್ಚರಿಕೆಯ ಗಂಟೆಯಾಗಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ



ಜೆ.ಬಿ. ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ: 94490–10009

ಕಸ್ಪಡಿ

ಸುಸ್ತಾಗಿ ಬಿದ್ದವರಿಗೆ ಸುಳ್ಳು ದಾರಿ ತೋರುವವರು!

ಹಿಶಿರಾ ಅಕ್ಸಿಡೆಂಟ್



ಡಾ.ಹಿ.ಶಿ.ರಾಮಚಂದ್ರೇಗೌಡ

ಆ ದಿನ ಮಧ್ಯಾಹ್ನ ಅಪಘಾತದ ಸುದ್ದಿ ಬಂತು. ಅದು ಜಾನಪದ ತಜ್ಞ ಡಾ.ಹಿ.ಶಿ. ರಾಮಚಂದ್ರೇಗೌಡರಿಗೆ (ಹಿಶಿರಾ) ಬಸ್ ಅಪಘಾತವಾಗಿದೆ. ಬಲಗಾಲು ಮುರಿದಿದೆ ಎಂಬ ಸುದ್ದಿ. ಹಿಶಿರಾ ನನ್ನ ಬಹುಕಾಲದ ಸ್ನೇಹಿತರು. ರೈತ ಚಳುವಳಿಯಲ್ಲಿ ಪ್ರಮುಖವಾಗಿ ಗುರುತಿಸಿಕೊಂಡವರು.

ಆ ಕಾಲದ ಜನಪ್ರಿಯ ರೈತಗೀತೆಗಳಾಗಿದ್ದ 'ಹೊಂಬಾಳೆಗೆ' ಸ್ಪೂರ್ತಿದಾಯಕ ಗೀತೆಗಳನ್ನು ಬರೆದ ಕವಿ. ತಕ್ಷಣ ಕೆ.ಆರ್.ಆಸ್ಪತ್ರೆಗೆ ಓಡಿದೆ. ಪ್ಲಾಸ್ಟರ್ ಹಾಕಿಸಿಕೊಂಡಿದ್ದ ಗೌಡರು ಗಾಢ ನಿದ್ದೆಯಲ್ಲಿದ್ದರು.

ಮೂರು ದಿನ ಬಿಟ್ಟು ಮತ್ತೆ ಆಸ್ಪತ್ರೆಗೆ ಹೋದೆ. ನೋವಿನಿಂದ ಕೊಂಚ ಚೇತರಿಸಿಕೊಂಡಂತಿತ್ತು.

ರಷ್ ಇದ್ದ ಸಿಟಿ ಬಸ್ಸಿನಲ್ಲಿ ಫುಟ್ ಬೋರ್ಡ್ ಮೇಲೆ ನಿಂತು ಬರುತ್ತಿದ್ದಾಗ ಗಂಗೋತ್ರಿಯ JCE ಸರ್ಕಲ್ ಬಂದಿದೆ. ಆಗಿನ ಕೆಂಪು ಬಸ್ಸಿನ ಡ್ರೈವರುಗಳು ಅಂದ್ರೆ ಕೇಳಬೇಕೇ? ಅಡ್ಡಾದಿಡ್ಡಿ ಸ್ಪೀಡು. ಅತಿವೇಗ ಮತ್ತು ನಿರ್ಲಕ್ಷ್ಯದಿಂದ ರೊಯ್ಯನೆ ತಿರುಗಿಸಿದ್ದಾನೆ. ಫುಟ್‌ಬೋರ್ಡ್ ತುದಿಯಲ್ಲಿ ನಿಂತಿದ್ದ ಹಿಶಿರಾ ಅವರು ಬಸ್ಸಿನಿಂದ ಒಮ್ಮೆಲೇ ಒಗೆಯಲ್ಪಟ್ಟಿದ್ದಾರೆ. ಬಲ ತೊಡೆಯ ಮೂಳೆ ಮುರಿದಿದೆ. ವೃಷ್ಠ ಭಾಗಕ್ಕೆ ಬಲವಾದ ಏಟಾಗಿದೆ.

'ಟ್ರಾಫಿಕ್ ಪೊಲೀಸರು ಬಂದಿದ್ರಾ?'

'ಹ್ಞೂಂ ಬಂದಿದ್ರು. ಬಸ್ಸು ಹತ್ತಲು ಹೋಗಿ ನಾನೇ ಜಾರಿಬಿದ್ದೆ. ಯಾರದೂ ತಪ್ಪಿಲ್ಲ ಅಂತ ಬರೆದುಕೊಟ್ಟೆ'


'ಅಲ್ಲಾ ಸಾರ್, ಹಾಗೇಕೆ ಬರೆದು ಕೊಟ್ರೀ? ಇರೋದು ಏನಿತ್ತೋ ಹಾಗೇ ಹೇಳಿದ್ರೆ ಆಗಿತ್ತಲ್ವಾ?'

'ಫುಟ್ ಬೋರ್ಡ್ ಮೇಲೆ ನಿಂತು ಬರ್ತಿದ್ದೆ ಅಂದ್ರೆ ನಿಮ್ಮದೇ ತಪ್ಪಾಗುತ್ತೆ. ಅದು offence! ನಿಮ್ಮ ಮೇಲೇ ಕೇಸಾಗುತ್ತೆ ಅಂದ್ರು. ನಾನೇ ಬಿದ್ದೆ. ಕೇಸೇನೂ ಬೇಡ ಅಂತ ಅವರೇ ಬರೆದಿದ್ದರು. ಸೈನು ಹಾಕಿಕೊಟ್ಟೆ' ಎಂದರು.

'ಯಾಕ್ ಸಾರ್ ಹಾಗೆ ಮಾಡಿದ್ರೀ. ಕಾಲಿನ ಮೂಳೆ ಮುರಿದಿದೆ ಅಂದ್ರೆ ಮಿನಿಮಮ್ ಆರು ತಿಂಗಳು ಎಲ್ಲೂ ಹೋಗೋದಿಕ್ಕೆ ಆಗೋದಿಲ್ಲ. ರಜೆಯೂ ಸೆಟಲ್ ಆಗೋದಿಲ್ಲ. ಬಸ್ಸಿಗೆ ಇನ್ಷ್ಯೂರೆನ್ಸ್ ಇದ್ದೇ ಇರುತ್ತೆ. ಅದಾದ್ರೂ ಬರ್ತಿತ್ತು. ಯಾರವನು ನಿಮ್ಮಿಂದ ಹೇಳಿಕೆ ತಗಂಡೋನು' ಎಂದೆ.

'ಅವರು ಯಾರೋ ಟ್ರಾಫಿಕ್ ASI. ಹೆಸರು ಗೊತ್ತಿಲ್ಲ' ಎಂದು ಗೊತ್ತಿದ್ದಷ್ಟು ಚಹರೆ ಹೇಳಿದರು.

ತಕ್ಷಣ ಗೊತ್ತಾಯಿತು. ಅವನೊಬ್ಬ ಆರೂ ಕಾಲಡಿ ಎತ್ತರವಿದ್ದ ಶುದ್ಧ ದಂಡಪಿಂಡ. ಹುಟ್ಟಾ ಮೈಗಳ್ಳ. ಡ್ರ್ಯಾಕುಲಾ ಎಂಬ ಅಡ್ಡ ಹೆಸರಿತ್ತು. ಚಲಿಸುತ್ತಿದ್ದ ಬಸ್ಸಿನಿಂದ ಪ್ರಯಾಣಿಕ ಒಗೆಯಲ್ಪಟ್ಟ ಅಂದರೆ ಡ್ರೈವರು, ಕಂಡಕ್ಟರುಗಳ ವಿರುದ್ಧ



ಡಾ. ಹಿಶಿರಾ ರೈತ ಚಳುವಳಿಯಲ್ಲಿ ಪ್ರಮುಖವಾಗಿ ಗುರುತಿಸಿಕೊಂಡವರು. ಆ ಕಾಲದ ಜನಪ್ರಿಯ ರೈತಗೀತೆಗಳಾಗಿದ್ದ 'ಹೊಂಬಾಳೆಗೆ' ಸ್ಫೂರ್ತಿದಾಯಕ ಗೀತೆಗಳನ್ನು ಬರೆದ ಕವಿ. **'ಬಾ ತಂಗಿ ಬಾರವ್ವಾ ಬಾರೇ ರೈತನ ಮಗಳೇ,**
ಹುಟ್ಟುಟ್ಟೋ ರೀಗಂಜಿ
ಉಸಿರೊಡೆದ ಹೊಂಬಾಳೆ'!

ಇನ್ನೊಂದು ಗೀತೆ: **'ಎಲ್ಲವನೆಲ್ಲವನೆ**
ನಮ್ಮ ಭತ್ತ ರಾಗೀಯ ತಿಂದ ಕತ್ತೇ
ಸೂಳೆಮಗ ಎಲ್ಲವನೆಲ್ಲವನೆ... !'

ಈ ಪದ್ಯಗಳನ್ನು ರೈತರು ರಾಜ್ಯಾದ್ಯಂತ ಹೇಳಿಕೊಂಡು ಚಳುವಳಿಗೆ ಕಾವು ತಂದುಕೊಂಡರು. ಅವರ ಹೊಂಬಾಳೆ, ಡಂಗುರ, ನಮ್ಮ ನಾಯಕ ಮುಂತಾದ ರೈತ ಗೀತೆಗಳ ಕ್ಯಾಸೆಟ್‌ಗಳು ಮನೆ ಮನೆಯ ಗೀತೆಗಳಾದವು. ಅವುಗಳನ್ನು ಹಾಡದ, ಗುನುಗದ ರೈತರೇ ಇರಲಿಲ್ಲ. ರೈತ ಚಳುವಳಿಯನ್ನು ಆಧರಿಸಿದ ಹೊಸ ಚಿಂತನೆಯನ್ನು ಜನರು ಹೊಸ ರುಚಿಯಾಗಿ ಸ್ವೀಕರಿಸಿದರು. ಆದರೇನು? ಈ ಅಪಘಾತ, ಮುಂದಿನ ರೈತ ಗೀತೆಗಳೇ ಅರಳದಂತೆ ಮಾಡಿಬಿಟ್ಟಿತು.

ಕೇಸು ರಿಜಿಸ್ಟರ್ ಮಾಡಬೇಕಾಗುತ್ತೆ. ಅವರ ಅರೆಸ್ಟು, ಬಸ್ ಸೀಜ಼್ ಹೀಗೆ ನೂರೆಂಟು ಕೆಲಸಗಳು. ಚಾರ್ಜ್ ಷೀಟು ಹಾಕುವ ತನಕ ಅವನದೇ ಜವಾಬ್ದಾರಿ. ನಾನೇ ಬಿದ್ದೆ ಎಂದರೆ ಕೇಸೂ ಇಲ್ಲ. ತನಿಖೆಯ ಓಡಾಟವೂ ಇಲ್ಲ! ಹಿಶಿರಾ ಹೇಳಿಕೆಯನ್ನು ಬುಡದಡಿ ಇಟ್ಟುಕೊಂಡರೆ ಕೆಲಸವೇ ಮುಗಿಯಿತು!

ನಂತರ ಹೋಗಿ ASIಗೆ ತರಾಟೆ ತೆಗೆದುಕೊಂಡೆ.

ಇರೋದು, as it is ಮಾಡಿದ್ರೆ, ನಿನ್ನ ಗಂಟೇನು ಹೋಗುತ್ತಿತ್ತಯ್ಯ?.

ಆದರೇನು, ಹಿಶಿರಾ ಬರೆದು ಕೊಟ್ಟದ್ದು ರೆಕಾರ್ಡ್ ಆಗಿ ಎಷ್ಟೋ ದಿನವಾಗಿತ್ತು. ಏನೂ ಮಾಡಲಾಗಲಿಲ್ಲ. ಕೆಲಸ ಕಡಿಮೆಯಾಗಲಿ ಎಂದು ಸರ್ಕಾರಿ ನೌಕರರು ಆಡದ ಆಟವಿಲ್ಲ, ಹೂಡದ ಲಗ್ಗೆಯಿಲ್ಲ. ಎಲ್ಲ ಇಲಾಖೆಗಳಲ್ಲೂ ಇದೇ ಪಿಡುಗು. ಅನುಭವಿಗಳು ಎಂದು ಯಾರಾದ್ರೂ ಸರ್ಕಾರಿ ನೌಕರರ ಸಲಹೆ ಕೇಳಿದರೆ ಕೇಳಿದಾತ ಮಠ ಹತ್ತಿದ ಎಂದೇ ಅರ್ಥ.

ಇದಾದ ಮೇಲೆ ಏನೇನೋ ಸಮಸ್ಯೆಗಳಾಗಿ ಎರಡು ಬಾರಿ ಬೆಂಗಳೂರಿಗೆ ಹೋಗಿ ಹಿಶಿರಾ ಆಪರೇಷನ್ ಮಾಡಿಸಿಕೊಂಡರು. ಕೆಲಸಕ್ಕೂ ಹೋಗಲಾಗಲಿಲ್ಲ. ಮೂರು ವರ್ಷಗಳ ಕಾಲ ಸಂಬಳ ಇತ್ಯರ್ಥವಾಗದೆ ದಿನ ದೂಡಿದರು. ಇಡೀ ಸಂಸಾರ ಆರ್ಥಿಕವಾಗಿ ನಲುಗಿತು. ಮಾನಸಿಕವಾಗಿ ಕೊರಗಿತು. ಅದಕ್ಕಿಂತ ದೊಡ್ಡ ನಷ್ಟವೆಂದರೆ ಅವರ ಬರವಣಿಗೆಯೇ ನಿಂತದ್ದು. ಆ ದಿನಗಳಲ್ಲಿ ಡಾ. ಹಿಶಿರಾ ಜಾನಪದ ಸಂಶೋಧನೆ, ಕಥೆ, ಕವನ ಬರೆಯುವ ಹುಮ್ಮಸ್ಸಿನಲ್ಲಿದ್ದರು. ಅವೆಲ್ಲ ನಿಂತು ಹೋದವು. ನ್ಯಾಯವಾಗಿ ಪಡೆಯ ಬಹುದಾಗಿದ್ದ ಸೌಲಭ್ಯಗಳಿಂದಲೂ ವಂಚಿತರಾದರು. ಅವರ ಆಯುಷ್ಯದಲ್ಲಿ ಮೂರು ವರ್ಷ ಅಳಿಸಿ ಹೋಗಿತ್ತು. 35 ವರ್ಷ ಕಳೆದರೂ ಈಗಲೂ ನರಕ ತಪ್ಪಿಲ್ಲ. ನಾಲ್ಕಾರು ವರ್ಷಗಳ ಹಿಂದೆ ಅದೇ ಸಮಸ್ಯೆಗಾಗಿ ಇನ್ನೊಂದು ಆಪರೇಷನ್‌ಗೆ ಒಳಗಾದರು.

ಜಾನಪದ ತಜ್ಞ, ಸಾಹಿತಿ ಹಿ.ಶಿ.ರಾಮಚಂದ್ರೇಗೌಡ ಅವರು ದೇಸೀ–ಸಂಸ್ಕೃತಿಯ ಬಹುಮುಖ್ಯ ಚಿಂತಕರು. ರೈತ ಚಳುವಳಿ ಮುಂತಾದ ಎಲ್ಲ ಬಗೆಯ ಜನಪರ ಹೋರಾಟಗಳಲ್ಲಿ ಪಾಲ್ಗೊಂಡವರು. ಎಲ್ಲಾ ತರಹದ ಜೀವವಿರೋಧಿ ಸಿದ್ಧಾಂತಗಳನ್ನು ಸಾರಾಸಗಟಾಗಿ ಓಡಿಸಬೇಕು ಎಂಬ ಸಾತ್ವಿಕ ಸಿಟ್ಟಿನ ಕುಲುಮೆಯಲ್ಲಿ ಅವರ ಬರಹಗಳು ಹುಟ್ಟುತ್ತವೆ. 'ಭೂಮಿ ಮತ್ತು ಹಿಂಸೆ, ರಾಮ ಅಳುತ್ತಿದ್ದಾನೆ, ಕ್ಲಿಂಟನ್ ನಗು, ಜಾನಪದ ಸಾಂಸ್ಕೃತಿಕ ಆಯಾಮಗಳು, ಜಾನಪದ ತಡಕಾಟ, ಪುರದ ಪುಣ್ಯ, ಜಾನಪದದ ನ್ಯಾಯ, ಜಾನಪದ ಪ್ರಕೃತಿ' ಮುಂತಾದ 25ಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ. ಅವರಿಗೀಗ ಎಪ್ಪತ್ತೈದು ವರ್ಷ ತುಂಬಿದೆ. (15–11–1947).

ಇದೇ ರೀತಿಯ ಮತ್ತೊಂದು ಟ್ರಾಫಿಕ್ ಪ್ರಸಂಗ

ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಸವಾರನಿಗೆ ಹಿಂದಿನಿಂದ ವೇಗವಾಗಿ ಬಂದ ಕಾರೊಂದು ಗುದ್ದಿತು. ಸ್ಥಳದಲ್ಲೇ ಸವಾರ ಸತ್ತ. ಈ ಘಟನೆಯನ್ನು ನೋಡಿದವರು ಯಾರೂ ಇಲ್ಲ. ನಿರ್ಜನವಾದ ರಸ್ತೆ. ಜನ ಸಂಚಾರ ಇಲ್ಲದಂತಹ ಸ್ಥಳ. ಓಡಾಡುವ ಅಂಗಡಿ ಮುಂಗಟ್ಟುಗಳು ಅನತಿ ದೂರದಲ್ಲಿವೆ.

ಪೊಲೀಸರೇನೋ ಕಾರನ್ನು ಸೀಜ಼್ ಮಾಡಿ ಡ್ರೈವರನ್ನು ಬಂಧಿಸಿದ್ದರು. ಚಾರ್ಜ್‌ಷೀಟು ಹಾಕುವುದಷ್ಟೇ ಬಾಕಿ.

ಪೊಲೀಸನೊಬ್ಬ ಮೃತ ಸವಾರನ ಪತ್ನಿಯ ಬಳಿ ಬಂದ. ಅಮ್ಮಾ ತಾವೇನೂ ಯೋಚನೆ ಮಾಡಬೇಡಿ. ಅಪರಾಧಿ ಅರೆಸ್ಟ್ ಆಗಿದ್ದಾನೆ. ಆದರೆ ಅಪಘಾತವನ್ನು ಕಣ್ಣಾರೆ ಕಂಡವರು ಒಬ್ಬರೂ ಇಲ್ಲ. ನಾವು ನೋಡಿದೋ ಎಂದು ಹೇಳುವ ಇಬ್ಬರು ಸಾಕ್ಷಿಗಳು ಬೇಕು. ಅವರಿವರ ಕೈಲಿ ಸಾಕ್ಷಿ ಹೇಳಿಸುತ್ತೇವೆ ಅಂದ್ರೆ ಅವರು ಹೇಳಿದ್ರೆ ಹೇಳಿದ್ರು, ಇಲ್ಲದಿದ್ದರೆ ಇಲ್ಲ. 'ಒಂದು ಕೆಲಸ ಮಾಡಿ. ನಿಮ್ಮ ಕಡೆಯ ಯಾರಾದ್ರೂ ಇಬ್ಬರನ್ನು ಸಾಕ್ಷಿಗಳಾಗಿ ಕೊಡಿ. ಅವರು ದಾರಿಯಲ್ಲಿ ಹೋಗುತ್ತಿರುವಾಗ ಇದೇ ಕಾರು ಗುದ್ದಿತು. ನಾನದನ್ನು ನೋಡಿದೆ ಎಂದು ಹೇಳಿದರೆ ಸಾಕು. ಕೇಸು ಬಿಗಿಯಾಗಿ ನಿಲ್ಲುತ್ತೆ' ಅಂತಾ ಅಪಘಾತದಲ್ಲಿ ಪ್ರಯೋಜನವಾಗುವ ಉಪಾಯ ಹೇಳಿದ.

ಆಕೆ ಮಕ್ಕಳಿಲ್ಲದ ವಿಧವೆ. ಅರವತ್ತರ ಆಸುಪಾಸು. ನೆಂಟರಿಷ್ಟರೆಲ್ಲಾ ಬೇರೆ ಊರಲ್ಲಿದ್ದಾರೆ. ಈ ಊರಿನಲ್ಲೇ ಪರಿಚಯದ ಅವರಿವರನ್ನು ಹೋಗಿ ಕೇಳಿದರು. ಸಹಾಯ ಅಂದ್ರೆ ಸಾಕು ಎಲ್ಲರೂ ಸತ್ಯ ಹರಿಶ್ಚಂದ್ರರೇ?. ನಮ್ಮತ್ರ ಮಾತ್ರ ಸುಳ್ಳು ಸಾಕ್ಷಿ ಹೇಳಿಸಬೇಡಿ ಎಂದು ಕೈಮುಗಿದರು.

ಸಾಕ್ಷಿ ಹುಡುಕುವ ಪರದಾಟದಲ್ಲಿ ತಿಂಗಳುಗಳೇ ಕಳೆಯಿತು. ಆಕೆಗೆ ಬೇರೆ ಜೀವನಾಧಾರವಿಲ್ಲ. ಪರಿಹಾರ ಧನವಾದರೂ ಬಂದರೆ ದುಸ್ಥಿತಿ ಕಡಿಮೆಯಾದೀತು. ಬೇಗ ಕೇಸು ಮುಗಿಸಿ ಕೊಡಿ ಎಂದರೆ ಸಾಕ್ಷಿಗಳನ್ನು ಕರೆತನ್ನಿ ಎಂಬ ಮಂತ್ರವನ್ನು ಪೊಲೀಸರು ಜಪಿಸುತ್ತಿದ್ದಾರೆ.

ಆಕೆ ತಮ್ಮ ದೂರದ ಸಂಬಂಧಿ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರನ್ನು ಕಂಡು ಕಷ್ಟ ಹೇಳಿಕೊಂಡರು. ಅವರು ನನಗೆ ಫೋನ್ ಮಾಡಿ, 'ಸಾಕ್ಷಿಗೀಕ್ಷಿ ಕರೆತರಲು ಆ ಮಹಿಳೆಯಿಂದ ಸಾಧ್ಯವಾಗೋದಿಲ್ಲ. ಹೇಗೂ ಕಾರಿನ ಡ್ರೈವರ್ ಅರೆಸ್ಟ್ ಆಗಿದ್ದಾನೆ. ಅಷ್ಟು ಸಾಕು. ಆಕೆಗೆ ಪರಿಹಾರ ಸಿಕ್ಕಲಿ. ಸಂಬಂಧಿಸಿದ ಇನ್ಸ್‌ಪೆಕ್ಟರ್‌ಗೆ ಹೇಳ್ತೀರಾ?' ಎಂದರು. ಅವರು ಪೊಲೀಸ್ ಇಲಾಖೆಯವರು ಅತ್ಯುನ್ನತ ಹುದ್ದೆ ಡಿಜಿಪಿಯಾಗಿ ನಿವೃತ್ತರಾದವರು.

'ಹೇಳ್ತೀನಿ. ಆದರೆ ಸಾಕ್ಷಿಗಳಿದ್ದರೆ ಒಳ್ಳೆಯದಲ್ವಾ ಸಾರ್' ಎಂದೆ.

'ನಿಮಗೇ ಗೊತ್ತಿದೆಯಲ್ಲಾ, ಈ ಮಹಿಳೆ ತನ್ನ ಕಡೆಯ ಸಾಕ್ಷಿಗಳನ್ನು ಕರೆತಂದು ಪೊಲೀಸರ ಎದುರು ನಿಲ್ಲಿಸಿದರೂ, ಅವರು ಸರಿಯಾಗಿ ಹೇಳಿಕೊಟ್ಟಿದ್ದನ್ನು ಕೋರ್ಟಿನಲ್ಲಿ ಹೇಳೋದಿಕ್ಕೆ ಬರೋದಿಲ್ಲ. Court birds ಅಂತ ಇರ್ತಾರೆ ಅವರನ್ನೇ ಫಿಕ್ಸ್ ಮಾಡಿಸೋಣ್ವಾ ಅಂತಾರೆ. ಆ ಕೋರ್ಟ್ ಬರ್ಡುಗಳು ಚೆನ್ನಾಗಿ ಸಾಕ್ಷಿ ಹೇಳ್ತಾರೆ ಅಂತ ಒಪ್ಪಿಸಿ ಆ ವಿಧವೆಯಿಂದ ಹತ್ತಿಪ್ಪತ್ತು ಸಾವಿರ ಅಡ್ವಾನ್ಸ್ ಕಕ್ಕಿಸುತ್ತಾರೆ. ಆಮೇಲೂ ಬಿಡೋದಿಲ್ಲ. ಅದೂ ಇದೂ ಅಂತ ಹೂ ಪೀಕುತ್ತಲೇ ಇರ್ತಾರೆ. ಬರೋ ಪರಿಹಾರದ ಹಣದಲ್ಲೂ ಪಾಲು ಕೇಳ್ತಾರೆ. ಪಾಪ ಆ ಒಂಟಿ ಹೆಂಗಸು ಎಲ್ಲಿಗೆ ಹೋಗ್ಬೇಕು. ಸುಳ್ಳು ಸಾಕ್ಷಿ ಅನ್ನೋದೇ un ethical ? ಅದೆಲ್ಲಾ ಬೇಡ. ಡ್ರೈವರಿಗೆ ಶಿಕ್ಷೆ ಮಾಡಿಸಿ ಯಾರಿಗೆ ಏನು ಪ್ರಯೋಜನ. ಕುಟುಂಬಕ್ಕೆ ಆಧಾರವಾಗಿದ್ದ ನಮ್ಮ ಮನುಷ್ಯನೇ ತೀರಿಕೊಂಡಿದ್ದಾನೆ. ಹೇಗೂ ಎರಡೂ ವಾಹನಗಳಿಗೂ ಇನ್ಸೂರೆನ್ಸ್ ಇದೆ. ಅದಷ್ಟು ಬಂದ್ರೆ ಸಾಕು. ಪಾಪ ಆ ಹೆಣ್ಮಗಳಿಗೆ ಎಷ್ಟೋ ಅನುಕೂಲವಾಗುತ್ತೆ. ಅದನ್ನು ಹೇಗೂ ನಮ್ಮ ಲಾಯರ್ ಕೊಡಿಸುತ್ತಾರೆ. ಬೇಗ ಚಾರ್ಜ್ ಷೀಟು ಹಾಕಿಸಿಕೊಡಿ' ಅಂದರು.

ಹೌದಲ್ಲವೇ? ಅಪಘಾತದ ಪರಿಹಾರ ಬಂದ್ರೆ ಸಾಕು. ಆ ಅಸಹಾಯಕ ಮಹಿಳೆಗೆ ಅನುಕೂಲವಾಗುತ್ತೆ. Legal battle ನಲ್ಲಿ ಡ್ರೈವರ್ ಹೇಗೂ ಬಿಡುಗಡೆಯಾಗೋದು ಖಂಡಿತ. ಹೀಗೇ ಆಗಲಿ! ಮಧ್ಯದ ಬಕಪಕ್ಷಿಗಳು ಕುಕ್ಕಿ ಮುಕ್ಕುವುದು ಬೇಡ!

ಇವರ ಕೈಲಿ ಆಗೋದಿಲ್ಲ. ಇವರು ಅಸಹಾಯಕರು. ಆದರಿದು ಕಾಸು ಬರೋ ಕೇಸು ಅಂತ ಗೊತ್ತಾದರೆ ಸಾಕು. ಆಪತ್ಬಾಂಧವರು ತಾವಾಗಿ ಹುಟ್ಟಿಕೊಳ್ಳುತ್ತಾರೆ. ಯಾರಾದರೂ ಬಿಟ್ಟಿ ಸಹಾಯ ಮಾಡ್ತೀನಿ ಅಂದ್ರೆ ಯಾರನ್ನೂ ನಂಬುವ ಸ್ಥಿತಿ ಈಗಿಲ್ಲ. ಯಾವುದೂ ಉಚಿತವಾಗಿ ಸಿಕ್ಕೋದಿಲ್ಲ. ಎಲ್ಲಕ್ಕೂ prize tag ಇದ್ದೇ ಇರುತ್ತದೆ.

ಅನುಭವಿ ಅಧಿಕಾರಿ ಹೇಳಿದ್ದೇ ಸರಿ ಅನ್ನಿಸಿತು.

ಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರ ಹತ್ತಿಕ್ಕಲು ಕಠಿಣ ಕ್ರಮ

• ಆರು ತಿಂಗಳಲ್ಲಿ 350ಕ್ಕೂ ಅಧಿಕ ಭ್ರಷ್ಟ ಅಧಿಕಾರಿಗಳ ಕಡತ ವಿಲೇವಾರಿ • ನೂರಾರು ಕೋಟಿ ಮೌಲ್ಯದ ಸರ್ಕಾರಿ ಆಸ್ತಿ ರಕ್ಷಣೆ • ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಬಳಿ ಬಾಕಿ ಇದ್ದ ತಕರಾರು ಅರ್ಜಿಗಳಲ್ಲಿ ಸಾವಿರಾರು ಇತ್ಯರ್ಥ • ಕಂದಾಯ ಸಚಿವ ಕೃಷ್ಣ ಭೈರೇಗೌಡ ಭರವಸೆ



ಬೆಂಗಳೂರು, ನ. 20(ಕೆಎಂಶಿ)– ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ ಭ್ರಷ್ಟ ಅಧಿಕಾರಿಗಳಿಗೆ ಕಾನೂನಿನ ರುಚಿ ತೋರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಇಂದಿಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಅಕ್ರಮ ಎಸಗಿ, ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದರೂ ಕಳೆದ ಐದು ವರ್ಷಗಳಿಂದ ಶಿಕ್ಷೆಗೆ ಒಳಗಾಗದ, ಸುಮಾರು 350ಕ್ಕೂ ಹೆಚ್ಚು ಮಂದಿ ಭ್ರಷ್ಟ ಅಧಿಕಾರಿಗಳ ಕಡತಗಳನ್ನು ಕಳೆದ ಆರು ತಿಂಗಳಲ್ಲಿ ವಿಲೇವಾರಿ ಮಾಡಲಾಗಿದೆ ಎಂದರು.

ಬೆಂಗಳೂರಿನಲ್ಲಿ ಖಾಸಗಿ ಹಾಗೂ ಭೂಗಳ್ಳರ ಪಾಲಾಗಿರುವ ಕೋಟ್ಯಾಂತರ ರೂಪಾಯಿ ಮೌಲ್ಯದ ಸರ್ಕಾರಿ ಆಸ್ತಿ (ಭೂಮಿ) ಮರಳಿ ಸರ್ಕಾರದ ವಶಕ್ಕೆ ಪಡೆಯಲು ಜಿಲ್ಲಾಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿ, ಪ್ರತಿ ವಾರಾಂತ್ಯದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಗೆ ಸೂಚಿಸಲಾಗಿದೆ. ತಂಡ ಈಗಾಗಲೇ ಬೆಂಗಳೂರಿನಲ್ಲಿ ನೂರಾರು ಕೋಟಿ ಮೌಲ್ಯದ ಕನಿಷ್ಠ 60 ಎಕರೆಗೂ ಅಧಿಕ ಸರ್ಕಾರಿ ಭೂಮಿಯಲ್ಲಿ ಖಾಸಗಿ ಒತ್ತುವರಿಯನ್ನು ತೆರವುಗೊಳಿಸಿದೆ.

ಈ ಕಾರ್ಯಾಚರಣೆ ಮುಂದಿನ ದಿನಗಳಲ್ಲೂ ಮುಂದುವರೆಯಲಿದ್ದು, ಸರ್ಕಾರಿ ಭೂಮಿಗಳನ್ನು ಗುರುತಿಸಿ, ರಕ್ಷಿಸುವ ಅಧಿಕಾರಿಗಳ "ಬೀಟ್" ವ್ಯವಸ್ಥೆಗೂ ಈಗಾಗಲೇ ಚಾಲನೆ ನೀಡಲಾಗಿದೆ.

ಬಗರ್‌ಹುಕುಂ ಅರ್ಜಿಗಳ ವಿಲೇವಾರಿ, ಕಂದಾಯ ಗ್ರಾಮಗಳ ಶೀಘ್ರ ಘೋಷಣೆ, ರೈತರಿಗೆ ಬರ ಪರಿಹಾರ ಮತ್ತು ಅಗತ್ಯ ಸೇವೆಗಳನ್ನು ನೀಡುವ ಹಾಗೂ ಕುಡಿಯುವ ನೀರಿನ ಸಮಸ್ಯೆಗಳು ಕಂಡು ಬರುವ ಭಾಗದಲ್ಲಿ ಅಗತ್ಯವಾಗಿ ಕ್ರಮಗಳನ್ನು ಜರುಗಿಸಲು ಅಧಿಕಾರಿಗಳಿಗೆ ವಿಶೇಷ ಸೂಚನೆಗಳನ್ನು ನೀಡಲಾಗಿದೆ.

ಐದು ವರ್ಷಕ್ಕೂ ಹಳೆಯ ಸಾವಿರಾರು ತಕರಾರು ಅರ್ಜಿಗಳನ್ನು ತ್ವರಿತ ಗತಿಯಲ್ಲಿ ವಿಲೇವಾರಿ ಮಾಡಲಾಗಿದೆ.

ಕಳೆದ ಆರು ತಿಂಗಳಲ್ಲಿ ಉಪ ವಿಭಾಗಾಧಿಕಾರಿ (ಎಸಿಕೋರ್ಟ್) ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಸುಮಾರು 62,000 ತಕರಾರು ಅರ್ಜಿಗಳನ್ನು ಶೀಘ್ರ ವಿಲೇವಾರಿಗೆ ಸೂಚಿಸಲಾಗಿದೆ, ಇದರ ಪರಿಣಾಮವಾಗಿ ಇದುವರೆಗೆ ಸುಮಾರು 30,000 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ರಾಜ್ಯಾದ್ಯಂತ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ತಕರಾರು ಅರ್ಜಿಗಳ ಪೈಕಿ ಶೇಕಡಾ 60ರಷ್ಟು ವಿಲೇವಾರಿ ಮಾಡಲಾಗಿದೆ. ಈ ಮೂಲಕ ರೈತರ ದಶಕಗಳ ಸಮಸ್ಯೆಗೆ ಪರಿಹಾರ ನೀಡಲಾಗಿದೆ ಎಂದಿದ್ದಾರೆ.



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಇಂದಿಗೆ ಆರು ತಿಂಗಳಾಗಿವೆ, ಜನರಿಗೆ ಉತ್ತಮ ಸರ್ಕಾರ ಮತ್ತು ಆಡಳಿತ ನೀಡುವ ಜವಾಬ್ದಾರಿ ನಮ್ಮ ಮೇಲಿದೆ.

ಕಳೆದ ಆರು ತಿಂಗಳಲ್ಲಿ ಬೀದರ್, ದಕ್ಷಿಣ ಕನ್ನಡ, ಶಿವಮೊಗ್ಗ, ತುಮಕೂರು, ಧಾರವಾಡ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಚಾಮರಾಜನಗರ, ಯಾದಗಿರಿ, ಹಾವೇರಿ, ದಾವಣಗೆರೆ, ಬಾಗಲಕೋಟೆ, ಕೊಪ್ಪಳ, ಗದಗ, ರಾಮನಗರ, ಹಾಸನ ಸೇರಿದಂತೆ 16 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗಿದೆ.

ಇಲಾಖೆ ಕೆಲಸಗಳು ಜನರಿಗೆ ಮತ್ತಷ್ಟು ಹತ್ತಿರವಾಗಲು ಅಗತ್ಯ ಕ್ರಮಗಳ ಬಗ್ಗೆ ಅಧಿಕಾರಿಗಳ ಜೊತೆಗೆ ಚರ್ಚಿಸಲಾಗಿದೆ, ಜನರ ದಶಕಗಳ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರೆತಿದೆ.

ಬರ ಪರಿಹಾರ ನೀಡಿಕೆಗೆ ಸಂಬಂಧಿಸಿದಂತೆ "ಫ್ರೂಟ್ಸ್" ತಂತ್ರಾಂಶದಲ್ಲಿ ರೈತರ ಸಂಪೂರ್ಣ ಮಾಹಿತಿಯನ್ನು ಶೇಕಡಾವಾರು ನಮೂದಿಸಲಾಗಿದೆ. ಕಂದಾಯ ಇಲಾಖೆಯ ಕಾರ್ಯ ವೈಖರಿಯನ್ನು ಬದಲಿಸಿ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುವಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಕುಮಾರಸ್ವಾಮಿ ಜೊತೆ ದತ್ತಮಾಲೆ ಧರಿಸಲಿದ್ದಾರೆ ಜೆಡಿಎಸ್ ಶಾಸಕರು

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯ ತಮ್ಮ ಪಕ್ಷದ ಕೈಹಿಡಿಯಲಿಲ್ಲ ಎಂಬ ಕಾರಣಕ್ಕೆ ಬೇಸತ್ತಿದ್ದ ಮಾಜಿ ಸಿಎಂ ಕುಮಾರಸ್ವಾಮಿ ಇತ್ತೀಚೆಗೆ ಬಿಜೆಪಿ ಜೊತೆ ಅಧಿಕೃತವಾಗಿ ಮೈತ್ರಿ ಮಾಡಿಕೊಂಡಿದ್ದರು. ಬಿಜೆಪಿ ಸಖ್ಯದ ಪರಿಣಾಮವೋ ಏನೋ ಇದೀಗ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಿಂದುತ್ವದ ಹಾದಿ ಹಿಡಿದಿದ್ದಾರೆ. ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯದ ಜೊತೆಗೆ ಎಲ್ಲಾ ಹಿಂದೂಗಳ ಮತಗಳು ಲಭಿಸಿದರೆ ಚುನಾವಣೆಯಲ್ಲಿ ಲಾಭವಾಗಬಹುದು ಎಂಬ ಲೆಕ್ಕಾಚಾರದೊಂದಿಗೆ ದತ್ತಮಾಲೆ ಧರಿಸುವ ಸುಳಿವನ್ನು ಭಾನುವಾರ ಕುಮಾರಸ್ವಾಮಿ ನೀಡಿದ್ದರು. ಈಗ ಕುಮಾರಸ್ವಾಮಿ ಅಷ್ಟೇ ಅಲ್ಲ, ಜೆಡಿಎಸ್ ಶಾಸಕರೆಲ್ಲಾ ದತ್ತಮಾಲೆ ಧರಿಸುವುದು ಖಚಿತವಾಗಿದೆ.

ಡಿ.6 ರಂದು ದತ್ತಮಾಲೆ ಧರಿಸಲಿರುವ ಜೆಡಿಎಸ್ ಶಾಸಕರು ದತ್ತಪೀಠಕ್ಕೆ ಭೇಟಿ ನೀಡಲು ಪ್ಲಾನ್ ಮಾಡಿದ್ದಾರೆ. ಇತ್ತೀಚೆಗೆ ಪಕ್ಷದ ಶಾಸಕರೊಂದಿಗೆ ಕುಮಾರಸ್ವಾಮಿ ಹಾಸನಾಂಬೆಯ ದರ್ಶನ ಪಡೆದಿದ್ದರು.

ಕುಮಾರಸ್ವಾಮಿಯ ಹಿಂದುತ್ವ ಜಪ ಈಗ ಭಾರೀ ಚರ್ಚೆಗೆ ಗ್ರಾಸವಾಗಿದೆ. ಈ ವಿಚಾರ ಕಾಂಗ್ರೆಸ್‌ಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಇದನ್ನು ವಿರೋಧಿಸುವಂತೆಯೂ ಇಲ್ಲ, ವಿರೋಧಿಸದೇ ಇರುವಂತೆಯೂ ಇಲ್ಲ ಎಂಬ ಪರಿಸ್ಥಿತಿಗೆ ಬಂದಿದೆ. ಕುಮಾರಸ್ವಾಮಿ ದತ್ತಮಾಲೆ ಧರಿಸುವ ನಿಲುವನ್ನು ಬಿಜೆಪಿ ಜೊತೆಗೆ ವಿಶ್ವಹಿಂದೂ ಪರಿಷತ್, ಬಜರಂಗದಳ ಸ್ವಾಗತಿಸಿವೆ. ಬಜರಂಗದಳ ಮತ್ತು ವಿಹೆಚ್‌ಪಿ ಅಧಿಕೃತವಾಗಿ ದತ್ತಮಾಲಾ ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಕುಮಾರಸ್ವಾಮಿಗೆ ಆಹ್ವಾನ ನೀಡುವ ಸಂಭವ ಇದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದಿನ ಶಿಕ್ಷಣ ವ್ಯವಸ್ಥೆ ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಹಣ ಸಂಪಾದನೆ, ವೃತ್ತಿ ಸಂಪಾದನೆಗೆ ಪ್ರೇರೇಪಿಸುತ್ತೆ

- ಆಧ್ಯಾತ್ಮಿಕ ಚಿಂತಕ ಶಂಕರದೇವನೂರು ಬೇಸರ
- ಉತ್ತಮ ಮೌಲ್ಯ, ವ್ಯಕ್ತಿತ್ವ ನಿರ್ಮಾಣದತ್ತ ಗಮನಹರಿಸಿಲ್ಲ



ಮೈಸೂರು, ನ.20(ಎಸ್‌ಪಿಎನ್) – ಇಂದಿನ ಶಿಕ್ಷಣ ಪದ್ಧತಿಯಲ್ಲಿ ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಹಣ ಸಂಪಾದನೆ ಮತ್ತು ವೃತ್ತಿ ಸಂಪಾದನೆ ಕಡೆಗೆ ಮಾತ್ರ ಗಮನಹರಿಸುವ ಪದ್ಧತಿಯಾಗಿದ್ದು, ಉತ್ತಮ ಮೌಲ್ಯ, ವ್ಯಕ್ತಿತ್ವ ನಿರ್ಮಾಣ ಕಡೆ ಗಮನ ಹರಿಸುತ್ತಿಲ್ಲ ಎಂದು ಆಧ್ಯಾತ್ಮಿಕ ಚಿಂತಕ ಶಂಕರದೇವನೂರು ಅಭಿಪ್ರಾಯಪಟ್ಟರು.

ಮೈಸೂರು ಲಕ್ಷ್ಮೀಪುರಂನಲ್ಲಿರುವ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ವತಿಯಿಂದ ನಡೆದ ಮೌಲ್ಯಧಾರಿತ ಶಿಕ್ಷಣ ಮತ್ತು ವಚನ ಸಾಹಿತ್ಯ ಕುರಿತು ಒಂದು ಸಂವಾದ ಕಾರ್ಯಕ್ರಮ (ದತ್ತಿ ಕಾರ್ಯಕ್ರಮ)ದಲ್ಲಿ ಭಾಗವಹಿಸಿ ಮಾತನಾಡಿದರು,

ಚಿಕ್ಕ ವಯಸ್ಸಿನ ಮಕ್ಕಳಿಗೆ ಅವರು ಬೆಳೆಯುವ ಪರಿಸರದಲ್ಲಿಯೇ ಸಂಸ್ಕಾರವಂತರನ್ನಾಗಿ ಬೆಳೆಸಬೇಕು. ಆ ಕಾರ್ಯ ವಚನ ಸಾಹಿತ್ಯದಿಂದ ಮಾತ್ರ ಸಾಧ್ಯ. ವಚನಗಳು ವ್ಯಕ್ತಿತ್ವವನ್ನು ಬೆಳೆಸಿ, ಬೆಳಗಿಸುತ್ತವೆ. ಈ ನಿಟ್ಟಿನಲ್ಲಿ ಪ್ರಾಧ್ಯಾಪಕರು ಕಾರ್ಯಪ್ರವೃತ್ತರಾಗಬೇಕು ಎಂದು ಕಿವಿಮಾತು ಹೇಳಿದರು.

ಇಂದಿನ ವಿದ್ಯಾರ್ಥಿಗಳು ಮೊದಲು ಪಾಶ್ಚಿಮಾತ್ಯ ಶಿಕ್ಷಣದ ವೌಢ್ಯದ ಭ್ರಮೆಯಿಂದ ಹೊರಬರಬೇಕು. ಅಲ್ಲದೆ, ತಾವು ಓದಿದ ದೇವನೂರು ಶ್ರೀ ಗುರುಮಲ್ಲೇಶ್ವರ ಮಠದ ವಿದ್ಯಾಸಂಸ್ಥೆಯಲ್ಲಿ ಜ್ಞಾನ ದಾಸೋಹ ಕುರಿತು ವಿವರಿಸಿದರು. ನಂತರ ಸುತ್ತೂರು ಮಠದಲ್ಲಿ ಗ್ರಾಮೀಣ ಮಕ್ಕಳಿಗೆ ನೀಡುತ್ತಿರುವ ಸೇವಾ ಕಾರ್ಯ ಅನನ್ಯ ಎಂದರು.

12ನೇ ಶತಮಾನದ ವಚನ ಸಾಹಿತ್ಯ ಮೌಲ್ಯಾಧಾರಿತ ಶಿಕ್ಷಣಕ್ಕೆ ಬೇಕಾದ ಅಂಶಗಳನ್ನು ಒದಗಿಸುತ್ತದೆ. ಇದು ಇಂದಿನ ವಿದ್ಯಾರ್ಥಿಗಳಿಗೆ ಅತ್ಯವಶ್ಯಕ. ಅಲ್ಲದೆ, ಶಿಕ್ಷಣದ ಮೂಲ ಉದ್ದೇಶ ಕೇವಲ ಮಾಹಿತಿಯನ್ನು ಒದಗಿಸುವುದಲ್ಲ. ಬದಲಾಗಿ ಬದುಕುವ ಕಲೆಯನ್ನು ರೂಪಿಸುವುದಾಗಿದೆ. ವಚನ ಸಾಹಿತ್ಯದ ಸಾರವನ್ನು ಇಂದಿನ ಶಿಕ್ಷಕರು ವಿದ್ಯಾರ್ಥಿಗಳಿಗೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅಕ್ಷರ ಜ್ಞಾನದ ಜೊತೆಜೊತೆಗೆ ಮಕ್ಕಳಲ್ಲಿ ಗುರು–ಶಿಷ್ಯ ಶ್ರೇಷ್ಠ ಪರಂಪರೆ ಕುರಿತು ಪರಿಚಯಿಸಬೇಕು ಎಂದು ತಿಳಿಸಿದರು.

ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ ಮಾತನಾಡಿ, ನಮ್ಮ ಪೀಳಿಗೆಗೆ ನಾವು ನೀಡಬೇಕಾಗಿರುವುದು ಕೇವಲ ಮಾಹಿತಿ ಒದಗಿಸುವ, ಹಣ ಗಳಿಸುವ ಶಿಕ್ಷಣವನ್ನಲ್ಲ. ಅವರ ಬದುಕಿನ ಬಗ್ಗೆ ಪೋಷಕರು ವೃಥಾ ಚಿಂತಿಸುತ್ತ ಕಾಲ ಕಳೆಯುವ ಬದಲು ಮೌಲ್ಯ ಶಿಕ್ಷಣವನ್ನು ಮಕ್ಕಳಿಗೆ ದೊರಕುವಂತೆ ಮಾಡಬೇಕು. ಈ ಜವಾಬ್ದಾರಿಯಿಂದ ಹಿಂದೆ ಸರಿಯಬಾರದು. ಅದು ವಚನ ಸಾಹಿತ್ಯದ ಮೂಲಕ ಸಾಧ್ಯವಿದೆ. ಈ ನಿಟ್ಟಿನಲ್ಲಿ ಶಿಕ್ಷಕರು–ಪೋಷಕರು ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದರು.

ಮೌಲ್ಯಯುತ ಶಿಕ್ಷಣ ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಕುಸಿಯುತ್ತಿದೆ. ಇದಕ್ಕೆ ಪರಿಹಾರ ಮಾರ್ಗದಲ್ಲಿ ವಚನ ಸಾಹಿತ್ಯದ ಮಾರ್ಗವೊಂದೇ ಇದಕ್ಕೆ ಪರಿಹಾರ. ಅಲ್ಲದೆ, ಕಾಯಕ ಸಂಸ್ಕೃತಿಯ ಧ್ಯೇಯವನ್ನು ಮನಗಾಣಬೇಕಿದೆ, ವಚನ ಸಾಹಿತ್ಯದ ಬೆಳಕಿನಲ್ಲಿ ನಡೆಯುವ ಸ್ಫೂರ್ತಿಯನ್ನು ಒದಗಿಸುವ ಪ್ರಯತ್ನ ಶಿಕ್ಷಣದ ಮೂಲಕ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ರಂಗಾಯಣ ನಿವೃತ್ತ ಉಪನಿರ್ದೇಶಕ ಮ.ಗು.ಸದಾನಂದಯ್ಯ, ರಾಮಕೃಷ್ಣ ವಿದ್ಯಾಶಾಲೆಯ ವಿಶ್ರಾಂತ ಪ್ರಾಧ್ಯಾಪಕ ಎಸ್.ಎಸ್.ರಮೇಶ್, ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ಎಸ್.ಮಲ್ಲೇಶ್, ಡಾ.ಹೆಚ್.ಟಿ.ಶೈಲಜಾ, ಬಿಜಿಎಸ್ ಬಿ.ಇಡಿ ಕಾಲೇಜಿನ ಪ್ರಾಧ್ಯಾಪಕ ಡಾ.ಬೆಟ್ಟಸ್ವಾಮಿ, ಪ್ರೊ.ಸದಾಶಿವಮೂರ್ತಿ ಇದ್ದರು.



ಮೈಸೂರು ಪ್ರವಾಸ ಕೈಗೊಂಡಿದ್ದ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ ಅವರನ್ನು ಸನ್ಮಾನಿಸಿ, ಆಶೀರ್ವಾದ ಪಡೆದರು. ಈ ವೇಳೆ ಶಾಸಕ ಶ್ರೀವತ್ಸ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಮಾಜಿ ಮೇಯರ್ ಶಿವಕುಮಾರ್, ಮಾಜಿ ಕಾರ್ಪೋರೇಟರ್‌ಗಳಾದ ಎಂ.ಸಿ. ರಮೇಶ್, ಜಗದೀಶ್, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಘು ಕೌಟಿಲ್ಯ, ಪಕ್ಷದ ಉಪಾಧ್ಯಕ್ಷ ರಾಜೇಂದ್ರ, ಹಿರಿಯ ಮುಖಂಡ ಹಾಗೂ ಚಿತ್ರನಟ ಜಯಪ್ರಕಾಶ್ (ಜೆಪಿ) ಇನ್ನಿತರರು ಇದ್ದರು.



ಕಾರ್ತಿಕ ಮಾಸದ ಮೊದಲ ಕಾರ್ತಿಕ ಸೋಮವಾರದಂದು ಜಗತ್ಪ್ರಸಿದ್ಧ ಶ್ರೀ ತಿರುಮಲ ತಿರುಪತಿ ದೇವಾಲಯದ ಆಡಳಿತ ಭವನದ ಮೈದಾನದಲ್ಲಿ ಕುರ್ತಾಳದ ಅಧ್ಯಕ್ಷ ಶ್ರೀ ಸಿದ್ದೇಶ್ವರಾನಂದ ಭಾರತೀ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸೋಮವಾರ ರಾತ್ರಿ ಅದ್ಧೂರಿ ಕಾರ್ತಿಕ ಮಹಾ ದೀಪೋತ್ಸವ ಭಕ್ತಿಭಾವದಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ದೀಪಾರಾಧನೆ ನೆರವೇರಿಸಿ, ಭಕ್ತಿಪರವಶರಾದರು.

ಪುಟ್ಗೋಸಿ ಕರೆಂಟ್‌ಗೆ ಸಿಎಂ, ಡಿಸಿಎಂ ಕಾಂಪಿಟೇಷನ್ ಮೇಲೆ ಅಧಿಕಾರಿಗಳನ್ನು ಕಳುಹಿಸಿದ್ರು: ಹೆಚ್‌ಡಿಕೆ

ಹಾಸನ: ಪುಟ್ಗೋಸಿ ಕರೆಂಟ್ ಎಳೆದಿದ್ದಕ್ಕೆ ಸಿಎಂ ಹಾಗೂ ಡಿಸಿಎಂ ಕಾಂಪಿಟೇಷನ್ ಮೇಲೆ ಅಧಿಕಾರಿಗಳನ್ನು ಕಳುಹಿಸಿದ್ದಾರೆ ಎಂದು ಡಿ.ಕೆ ಶಿವಕುಮಾರ್ ಹಾಗೂ ಸಿದ್ದರಾಮಯ್ಯ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಚನ್ನರಾಯಪಟ್ಟಣದ ಅತ್ತಿಹಳ್ಳಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವರ ದುಡ್ಡಿಗೆ, ಪೊಗರಿಗೆ ಹಾಗೂ ರೌಡಿಸಂಗೆ ನಾನು ಹೆದರುವವನಲ್ಲ. ಯಾವನೋ ಕರೆಂಟ್ ಕನೆಕ್ಷನ್ ಕೊಟ್ಟಿದ್ದಾನೆ. ನಾನು ನಿಂತು ವಿದ್ಯುತ್ ಸಂಪರ್ಕ ಕೊಡಿಸಿದ್ನಾ? ನನ್ನ ಮನೇಲಿ ಆಗಿದೆ ಎಂದು ವಿಷಾದ ವ್ಯಕ್ತಪಡಿಸಿದೆ. ಸಿಎಂ ಹಾಗೂ ಡಿಸಿಎಂ ಅಧಿಕಾರಿಗಳಿಗೆ ಆದೇಶ ಮಾಡಿ ಕೇಸ್ ಹಾಕಬೇಕು ಎಂದು ನನ್ನ ಮನೆಗೆ ಕಳಿಸಿದ್ದರು. 17 ಯೂನಿಟ್‌ಗೆ 2,000 ರೂ. ಬಿಲ್ ಆಗಿದೆ. 68 ಸಾವಿರ ಕಟ್ಟಿ ಎಂದು ಬಿಲ್ ಕಳಿಸಿದ್ದರು. ಆ ಹಣವನ್ನು ನಾನು ಕಟ್ಟಿದ್ದೇನೆ. ನನ್ನ ಸ್ಥಿತಿಯೇ ಹೀಗಾದರೆ ಜನಸಾಮಾನ್ಯರ ಪರಿಸ್ಥಿತಿ ಏನು ಎಂದು ಕಿಡಿಕಾರಿದ್ದಾರೆ.



ಇದರಿಂದ ಇಲಾಖೆಗಳು ಯಾವ ರೀತಿ ನಡೆಯುತ್ತಿವೆ ಎಂದು ನನಗೊಂದು ಅನುಭವ ವಾಯಿತು. ನಾನು ಈ ಬಗ್ಗೆ ಕೇಸ್ ಹಾಕ್ತೇನೆ. ಮುಂದೆ ಏನು ಮಾಡ್ಬೇಕೋ ಅದನ್ನು ಮಾಡ್ತೇನೆ. ಕಾಲ ಹೀಗೆ ಇರುವುದಿಲ್ಲ ಎಂದು ಅವರು ಎಚ್ಚರಿಸಿದ್ದಾರೆ.

ಸಿಎಂ ಮಗನಿಗೆ ಕ್ಷೇತ್ರದಲ್ಲಿ ದರ್ಬಾರ್ ಮಾಡಲು ಸಂವಿಧಾನದ ವ್ಯವಸ್ಥೆಯೊಳಗೆ ಅವಕಾಶ ಇದೆಯೇ? ನಮ್ಮ ಅಪ್ಪನೂ ಮುಖ್ಯಮಂತ್ರಿ, ಪ್ರಧಾನ ಮಂತ್ರಿಯೂ ಆಗಿದ್ದರು. ನಮಗೆ ಆ ರೀತಿಯ ಅಧಿಕಾರ ಕೊಟ್ಟಿರಲಿಲ್ಲ. ನಾನು ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ದೂರಿನ ಬಗ್ಗೆ ಮಾತನಾಡುವುದಿಲ್ಲ ಎಂದಿದ್ದಾರೆ. ಈಗಲೂ ನಾನೇ ರಾಜ್ಯಾಧ್ಯಕ್ಷ ಎಂಬ ಸಿ.ಎಂ ಇಬ್ರಾಹಿಂ ಹೇಳಿಕೆ ವಿಚಾರವಾಗಿ, ಅವರಿಗೆ ಬೋರ್ಡ್ ಹಾಕಿಕೊಂಡು ಓಡಾಡಲು ಹೇಳಿ ಎಂದಿದ್ದಾರೆ. ನೂತನ ವಿಪಕ್ಷ ನಾಯಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆ ಬಗ್ಗೆ ಜನರಿಗೆ ಹೊಸ ಶಕ್ತಿ ಬಂದಿದೆ ಎಂಬ ಭಾವನೆ ಮೂಡಿದೆ. ನೂತನ ರಾಜ್ಯಾಧ್ಯಕ್ಷರು ಯುವಕರಿದ್ದು, ರಾಜ್ಯದೆಲ್ಲೆಡೆ ಓಡಾಡುತ್ತಿದ್ದಾರೆ. ಅವರಿಗೆ ಸಂಘಟನೆಯಲ್ಲಿ ಎಲ್ಲಾ ರೀತಿಯ ಅನುಭವ ಇದೆ. ಮುಂದಿನ ದಿನಗಳಲ್ಲಿ ಜನ ಏನು ತೀರ್ಮಾನ ಮಾಡ್ತಾರೆ ಎಂದು ನೋಡೋಣ. ನಾವೆಲ್ಲ ಒಟ್ಟಾಗಿ ಸೇರಿ ಕೆಲಸ ಮಾಡುತ್ತೇವೆ ಎಂದು ಹೇಳಿದ್ದಾರೆ.

ಪೆನ್‌ಡ್ರೈವ್ ಬಗ್ಗೆ ಕೈ ನಾಯಕರ ಮಾರ್ಮಿಕ ಹೇಳಿಕೆ ವಿಚಾರವಾಗಿ, ನಾನು ಪೆನ್‌ಡ್ರೈವ್ ತೋರಿಸಿದಾಗ ಎಷ್ಟು ಜನ ಮಂತ್ರಿಗಳು ನನಗೆ ಫೋನ್ ಮಾಡಿದ್ದರು. ಎಷ್ಟು ಜನ ನನ್ನ ಹತ್ತಿರ ಬಂದಿದ್ದರು. ಅಣ್ಣಾ ನಿನ್ನ ಋಣದಲ್ಲಿದ್ದೇವೆ ನಿಮ್ಮಿಂದ ಬೆಳೆದಿದ್ದೇವೆ ಎಂದು ಏಕೆ ಹೇಳಿದ್ದರು? ಅವರೆಲ್ಲ ನಿದ್ರೆಗೆಟ್ಟಿದ್ದೇಕೆ? ಹಾವು ಬಿಡದೆ ಇಷ್ಟೆಲ್ಲಾ ನಿದ್ದೆಗೆಟ್ಟಿದ್ದೀರಿ, ಬೆಚ್ಚಿದ್ದೀರಿ ಹಾವು ಬಿಟ್ಟರೆ ಏನಾಗ್ತೀರಾ? ಬಿಡುಗಡೆ ಮಾಡುವವರೆಗೆ ಕಾಯಿರಿ ಎಂದಿದ್ದಾರೆ.

ಡಾ.ಯತೀಂದ್ರ ಮುಂದೆ ಸಮಸ್ಯೆಗಳ ಸರಮಾಲೆಯನ್ನೇ ಬಿಚ್ಚಿಟ್ಟ ಉತ್ತನಹಳ್ಳಿ ಗ್ರಾಮಸ್ಥರು



ಮೈಸೂರು,ನ.20–ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಉತ್ತನಹಳ್ಳಿಯಲ್ಲಿ ಕುಡಿಯುವ ನೀರು ಸೇರಿದಂತೆ ಹಲವು ಸಮಸ್ಯೆಗಳ ಸರಮಾಲೆಯನ್ನೇ ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ, ಮಾಜಿ ಶಾಸಕ ಡಾ.ಯತೀಂದ್ರ ಮುಂದೆ ಬಿಚ್ಚಿಟ್ಟರು.

ಅಹವಾಲು ಸ್ವೀಕಾರ ಸಭೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ಗ್ರಂಥಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಸ್ಮಶಾನ ಅಭಿವೃದ್ಧಿ, ರಿಂಗ್ ರಸ್ತೆಯಿಂದ ದೇವಸ್ಥಾನದವರೆಗೆ ಜೋಡಿ ರಸ್ತೆ, ಪಶು ಆಸ್ಪತ್ರೆ ಸ್ಥಳಾಂತರ, ಹೈಸ್ಕೂಲ್, ಕುಂಬಾರ ಭವನ ಮತ್ತು ವಿಶ್ವಕರ್ಮ ಭವನಕ್ಕೆ ಹಣ, ಪ್ರಸಾದ್ ಯೋಜನೆಯಡಿ ದೇವಸ್ಥಾನ ಅಭಿವೃದ್ಧಿ, ಕನಕ ಭವನಕ್ಕೆ ಆರ್‌ಟಿಸಿ, ಆಶ್ರಯ ಮನೆಗಳ ಸಕ್ರಮ ಹೀಗೆ ಹಲವು ಬೇಡಿಕೆಗಳು, ಸಮಸ್ಯೆಗಳನ್ನು ಮಂಡಿಸಿ, ನಿವಾರಣೆಗೆ ಆಗ್ರಹಿಸಿದರು.

ಅಹವಾಲು ಸ್ವೀಕರಿಸಿದ ಬಳಿಕ ಡಾ.ಯತೀಂದ್ರ ಮಾತನಾಡಿ, ಈ ಗ್ರಾಮದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳು ಬಹಳಷ್ಟಿದ್ದು, ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಜೊತೆ ಸಮಾಲೋಚಿಸಿ ಪರಿಹಾರ ಕ್ರಮ ಕೈಗೊಳ್ಳಲಾಗುವುದು. ಕುಡಿಯುವ ನೀರು ಸೇರಿದಂತೆ ಎಲ್ಲಾ ಸಮಸ್ಯೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತಂದು ಆದ್ಯತೆ ಮೇಲೆ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಕೆ.ಎನ್.ವಿಜಯ್, ತಹಸೀಲ್ದಾರ್ ಜೆ.ಮಹೇಶ್‌ಕುಮಾರ್, ಬಿಇಓ ವಿವೇಕಾನಂದ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ತಾಪಂ ಮಾಜಿ ಅಧ್ಯಕ್ಷೆ ಮಂಜುಳ ಮಂಜುನಾಥ್, ಸಬ್‌ಇನ್ಸ್‌ಪೆಕ್ಟರ್ ಚೇತನ್, ಆರ್‌ಐ ಶಂಕರ್, ಶಿವಸ್ವಾಮಿ, ಪ್ರದೀಪ್‌ಕುಮಾರ್, ನಾಗರಾಜು, ಬುಲೆಟ್ ರೇವಣ್ಣ, ರಂಗಸ್ವಾಮಿ, ಶಿವಬೀರ, ಬಸಪ್ಪ, ರಾಜು, ಶಿವಣ್ಣ, ಬೀರಪ್ಪ, ಗಿರೀಶ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ವಿಶ್ವಕಪ್ ಸೋಲು: ಮೊಹಮ್ಮದ್ ಶಮಿಯನ್ನು ತಬ್ಬಿ ಸಂತೈಸಿದ ಪ್ರಧಾನಿ ನರೇಂದ್ರ ಮೋದಿ

ಅಹಮದಾಬಾದ್: 2023ರ ವಿಶ್ವಕಪ್ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನದ ಹೊರತಾಗಿಯೂ ಟೀಂ ಇಂಡಿಯಾ ವಿಶ್ವಕಪ್ 2023 ಟ್ರೋಫಿಯನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಫೈನಲ್ ಪಂದ್ಯದಲ್ಲಿ ಭಾರತ ತಂಡಕ್ಕೆ ಹೀನಾಯ ವಾಗಿ ಸೋಲಿಸುವ ಮೂಲಕ ಆಸ್ಟ್ರೇ ಲಿಯಾ 2015ರ ಬಳಿಕ ಮತ್ತೊಮ್ಮೆ ವಿಶ್ವಕಪ್ ಟ್ರೋಫಿಯನ್ನು ಗೆದ್ದು ಬೀಗಿತು.

ಪಂದ್ಯದ ಬಳಿಕ ಟೀಂ ಇಂಡಿಯಾದ ವೇಗದ ಬೌಲರ್ ಮೊಹಮ್ಮದ್ ಶಮಿ ಪ್ರಧಾನಿ ಮೋದಿ ಜೊತೆಗಿರುವ ಚಿತ್ರವನ್ನು ಹಂಚಿಕೊಂಡಿದ್ದಾರೆ. ಈ ಚಿತ್ರದಲ್ಲಿ, ಮೋದಿ ಅವರನ್ನು ತಬ್ಬಿಕೊಂಡು ಸಮಾಧಾನ ಮಾಡುತ್ತಿರುವುದನ್ನು ಕಾಣಬಹುದು.



6ನೇ ಬಾರಿಗೆ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ: ಫೈನಲ್‌ನಲ್ಲಿ ಟೀಂ ಇಂಡಿಯಾವನ್ನು 6 ವಿಕೆಟ್‌ಗಳಿಂದ ಸೋಲಿಸುವ ಮೂಲಕ ಆಸ್ಟ್ರೇಲಿಯಾ ಪ್ರಶಸ್ತಿ ಗೆದ್ದಿದೆ. ಆಸ್ಟ್ರೇಲಿಯಾ ಗೆಲುವಿಗೆ 241 ರನ್‌ಗಳ ಗುರಿ ಇತ್ತು. ಆಸ್ಟ್ರೇಲಿಯಾ 43 ಓವರ್‌ಗಳಲ್ಲಿ 4 ವಿಕೆಟ್‌ಗೆ 241 ರನ್ ಗಳಿಸುವ ಮೂಲಕ 6ನೇ ಬಾರಿಗೆ ವಿಶ್ವಕಪ್ ಟ್ರೋಫಿಯನ್ನು ಗೆದ್ದುಕೊಂಡಿತು. ಆರಂಭಿಕ ಆಟಗಾರ ಟ್ರಾವಿಸ್ ಹೆಡ್ ಆಸ್ಟ್ರೇಲಿಯಾದ ಗೆಲುವಿನ ಹೀರೋ ಆಗಿದ್ದರು. ಟ್ರಾವಿಸ್ ಹೆಡ್ 120 ಎಸೆತಗಳಲ್ಲಿ 137 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿದರು.

ಭಾರತೀಯ ಕ್ರಿಕೆಟ್‌ನಲ್ಲಿ ಮೀಸಲಾತಿ ಅಗತ್ಯವಿದೆ

ಬೆಂಗಳೂರು: ಆಗಾಗ್ಗೆ ತಮ್ಮ ಸೈದ್ಧಾಂತಿಕ, ಸಾಮಾಜಿಕ ಹೇಳಿಕೆಗಳಿಂದ ಸುದ್ದಿ ಹಾಗೂ ವಿವಾದ ಕ್ಕೊಳಗಾಗುವ ನಟ ಚೇತನ್ ಅಹಿಂಸಾ ಇದೀಗ ಐಸಿಸಿ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ಸೋಲಿಗೂ ಕಾರಣ ತಿಳಿಸಿದ್ದಾರೆ.



ಭಾರತೀಯ ಕ್ರಿಕೆಟ್‌ನಲ್ಲಿ ಮೀಸಲಾತಿ ಅಗತ್ಯವಿದೆ ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಚೇತನ್, ನಾನು ಮತ್ತೆ ಹೇಳುತ್ತಿದ್ದೇನೆ, ಭಾರತಕ್ಕೆ ಕ್ರಿಕೆಟ್‌ನಲ್ಲಿ ಮೀಸಲಾತಿ ಅಗತ್ಯವಿದ್ದು, ಮೀಸಲಾತಿ ಇದ್ದಿದ್ದರೆ ಭಾರತ ಸುಲಭವಾಗಿ ಈ ವಿಶ್ವಕಪ್ ಗೆಲ್ಲುತ್ತಿತ್ತು ಎಂದಿದ್ದಾರೆ.

ಜಗತ್ತಿನಲ್ಲಿ ಒಬ್ಬರಿಂದ ಅತ್ಯಾಚಾರ ಸಾಧ್ಯವಿಲ್ಲ

ಕಾಂಗ್ರೆಸ್ ಮಾಜಿ ಶಾಸಕನ ವಿವಾದಾತ್ಮಕ ಹೇಳಿಕೆ

ಕೊಪ್ಪಳ: ಕುಷ್ಟಗಿ ಕ್ಷೇತ್ರದ ಕಾಂಗ್ರೆಸ್ ಮಾಜಿ ಶಾಸಕ ಅಮರೇಗೌಡ ಬಯ್ಯಾಪುರ ಅವರ ವಿರುದ್ಧ ವಿವಾದಾತ್ಮಕ ಹೇಳಿಕೆಯೊಂದರ ಆರೋಪ ಕೇಳಿಬಂದಿದೆ. ಒಂದೇ ಕೈಯಲ್ಲಿ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲ. ಹಾಗೆ ಜಗತ್ತಿನಲ್ಲಿ ಒಬ್ಬರಿಂದ ಅತ್ಯಾಚಾರ ಮಾಡಲು ಸಾಧ್ಯವಿಲ್ಲ ಎಂಬ ಅವರ ಫೋನ್ ಸಂಭಾಷಣೆಯ ಆಡಿಯೋ ವೈರಲ್ ಆಗಿದೆ.



ಕಾಂಗ್ರೆಸ್ ಮುಖಂಡ ಸಂಗನಗೌಡ ನನ್ನ ಮೇಲೆ ಅತ್ಯಾಚಾರವೆಸಗಿದ್ದಾನೆ ಎಂದು ಆರೋಪಿಸಿ ಸಂತ್ರಸ್ತೆಯೊಬ್ಬರು ಅಕ್ಟೋಬರ್ 10ರಂದು ಎಂ.ಗುಡದೂರು ಗ್ರಾಮದ ಕೊಪ್ಪಳ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆದರೆ, ದೂರು ದಾಖಲಿಸಿಕೊಂಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದರಿಂದಾಗಿ ಎಷ್ಟಿಗೆ ದೂರು ನೀಡಿದ್ದ ಸಂತ್ರಸ್ತೆಯ ಮಾವ ಯಮನೂರಪ್ಪ, ನೊಂದ ಸಂತ್ರಸ್ತೆಗೆ ನ್ಯಾಯ ಒದಗಿಸುವಂತೆ ಅಮರೇಗೌಡ ಬಯ್ಯಾಪುರ ಬಳಿಯೂ ಮನವಿ ಮಾಡಿದ್ದರು ಎನ್ನಲಾಗಿದೆ.

ಆದರೆ, ಆರೋಪಿ ಪರವಾಗಿಯೇ ನಿಲುವು ತಾಳಿರುವ ಮಾಜಿ ಶಾಸಕರು, ಎಸ್‌ಪಿಗೆ ದೂರು ನೀಡಬಾರದಿತ್ತು. ನಿಮ್ಮ ಮರ್ಯಾದೆಯನ್ನು ನೀವೆ ಕಳೆದುಕೊಳ್ಳುತ್ತಿದ್ದೀಯಾ, ಒಬ್ಬರಿಂದ ಹೇಗೆ ಅತ್ಯಾಚಾರ ಮಾಡಲು ಸಾಧ್ಯ? ನೀನು ಒಬ್ಬನನ್ನು ಕರೆದುಕೊಂಡು ಬಾ, ನಾನು ಓರ್ವ ಮಹಿಳೆಯನ್ನು ಕಳುಹಿಸುತ್ತೇನೆ. ಆ ವ್ಯಕ್ತಿ ಆಕೆಯನ್ನು ಅತ್ಯಾಚಾರ ಮಾಡಲಿ ನೋಡೋಣ, ಒಬ್ಬನಿಂದ ಅತ್ಯಾಚಾರ ಮಾಡಲು ಸಾಧ್ಯವಿಲ್ಲ. ಸೂಕ್ಷ್ಮ ವಿಚಾರ ಇದು, ಮರ್ಯಾದೆ ಪ್ರಶ್ನೆ ಇದೆ. ಯೋಚಿಸು ಎಂದು ಸಂತ್ರಸ್ತೆ ಮಾವನಿಗೆ ಹೇಳುವ ಫೋನ್ ಸಂಭಾಷಣೆ ಆಡಿಯೋ ವೈರಲ್ ಆಗಿದ್ದು, ಅಮರೇಗೌಡ ಬಯ್ಯಾಪುರ ವಿರುದ್ಧ ಟೀಕೆಗಳು ವ್ಯಕ್ತವಾಗುತ್ತಿವೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.20–ವಿ.ವಿ.ಮೊಹಲ್ಲಾ ವಿಭಾಗ ವ್ಯಾಪ್ತಿ 3ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ನ.21ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಜನತಾನಗರ, ಬೋಗಾದಿ 2ನೇ ಹಂತ ನಾರ್ತ್ & ಸೌತ್, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿ ಕ್ವಾಟ್ರಸ್, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ರೂಪನಗರ, ದೀಪಾನಗರ, ಬೋಗಾದಿ, ಪ್ರೀತಿ ಲೇಔಟ್, ಆರ್.ಎಂ.ಪಿ ಲೇಔಟ್, ವಿಜಯನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿ.ಎಫ್.ಟಿ.ಆರ್.ಐ ಲೇಔಟ್, ಯುನಿವರ್ಸಿಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಲೈಂಗಿಕ ಕಿರುಕುಳ ಪ್ರಕರಣ: ಮುರುಘಾಶ್ರೀ ಬಂಧನದ ಆದೇಶಕ್ಕೆ ಹೈಕೋರ್ಟ್ ತಡೆ, ಬಂಧನವಾದ ಕೆಲ ಗಂಟೆಗಳಲ್ಲೇ ಬಿಡುಗಡೆ

ಬೆಂಗಳೂರು/ಚಿತ್ರದುರ್ಗ: ಬಂಧಿತರಾಗಿರುವ ಚಿತ್ರದುರ್ಗ ಮುರುಘಾ ಮಠದ ಮಠಾಧೀಶ ಡಾ.ಶಿವಮೂರ್ತಿ ಶರಣರನ್ನು ಕೂಡಲೇ ಬಿಡುಗಡೆ ಮಾಡುವಂತೆ ಕರ್ನಾಟಕ ಹೈಕೋರ್ಟ್ ಚಿತ್ರದುರ್ಗದ ಜೈಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಅವರು ಮತ್ತೆ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಚಿತ್ರದುರ್ಗದ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ಬಿಕೆ ಕೋಮಲಾ ಅವರು ಇಂದು ಬೆಳಗ್ಗೆ ಮುರುಘಾ ಶ್ರೀಗಳ ವಿರುದ್ಧದ ಎರಡನೇ ಪೋಕ್ಸೊ ಪ್ರಕರಣದಲ್ಲಿ ಅವರಿಗೆ ಜಾಮೀನು ರಹಿತ ವಾರಂಟ್ ಹೊರಡಿಸಿದ್ದರು. ಮೊದಲ ಪೋಕ್ಸೋ ಪ್ರಕರಣದಲ್ಲಿ 5 ದಿನಗಳ ಹಿಂದೆ ಹೈಕೋರ್ಟ್‌ನಿಂದ ಜಾಮೀನು ಪಡೆದು ದಾವಣಗೆರೆಯ ವಿರಕ್ತ ಮಠದಲ್ಲಿ ತಂಗಿದ್ದ ಮುರುಘಾ ಶ್ರೀಗಳನ್ನು ಬಂಧಿಸಿದ್ದ ಪೊಲೀಸರು ಚಿತ್ರದುರ್ಗಕ್ಕೆ ಕರೆತಂದು ವಿಚಾರಣಾ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, 14 ದಿನಗಳ ನ್ಯಾಯಾಂಗ ಬಂಧನಕ್ಕೆ ಕೋರ್ಟ್ ಒಪ್ಪಿಸಿತ್ತು.

ಇದನ್ನು ಪ್ರಶ್ನಿಸಿ ಮುರುಘಾ ಶ್ರೀಗಳ ಪರ ವಕೀಲರು ಸಂಜೆ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರ ಪೀಠದ ಮುಂದೆ ವಾದಿಸಿದರು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್(ಎಸ್‌ಪಿಪಿ) ವಿಚಾರಣಾ ಕೋರ್ಟ್‌ಗೆ ಮುರುಘಾ ಶ್ರೀಗಳ ವಿರುದ್ಧ ಎನ್‌ಬಿಡಬ್ಲ್ಯೂ ಕೋರಿ ಮೆಮೊ ಸಲ್ಲಿಸಿದ್ದಾರೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಈ ಮೆಮೊದಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಹಾಜರಾಗಲು ಯಾವುದೇ ಹೈಕೋರ್ಟ್ ಆದೇಶವಿಲ್ಲ ಎಂದು ತಿಳಿಸಲಾಗಿದೆ. ಇದು ಸಂವೇದನಾಶೀಲ ಪ್ರಕರಣವಾಗಿದೆ ಎಂಬ ಕಾರಣಕ್ಕೆ ನೀವು ಹೈಕೋರ್ಟ್ ಆದೇಶವನ್ನು ತಪ್ಪಾಗಿ ಅರ್ಥೈಸಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಗೋವಿಂದ ರಾಜ್ ಎನ್‌ಬಿಡಬ್ಲ್ಯೂಗೆ ತಡೆನೀಡಿ, ಶ್ರೀಗಳ ಬಿಡುಗಡೆಗೆ ನಿರ್ದೇಶನ ನೀಡಿದರು.



ಅಷ್ಟೇ ಅಲ್ಲದೆ, 8–11–23ರ ಹೈಕೋರ್ಟ್ ಆದೇಶದ ಬಗ್ಗೆ ಎಸ್‌ಪಿಪಿಗೆ ತಿಳಿದಿಲ್ಲದಿರುವುದು ಆಶ್ಚರ್ಯಕರವಾಗಿದೆ. ಪ್ರಕರಣ ಪ್ರಮುಖ ಆರೋಪಿಯಾಗಿರುವ ಶ್ರೀಗಳು ಚಿತ್ರದುರ್ಗಕ್ಕೆ ಪ್ರವೇಶಿಸದಂತೆ ಮತ್ತು ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ನ್ಯಾಯಾಲಯದ ವಿಚಾರಣೆಗೆ ಹಾಜರಾಗಬೇಕು ಎಂದು ನ್ಯಾಯಾಲಯವು ಸ್ಪಷ್ಟವಾಗಿ ಆದೇಶಿಸಿದೆ ಎಂದು ನ್ಯಾಯಮೂರ್ತಿಗಳು ಹೇಳಿದರು.

ಮುರುಘಾ ಶ್ರೀಗೆ ಚಿತ್ರದುರ್ಗ ಜಿಲ್ಲೆಗೆ ಪ್ರವೇಶಿಸದಂತೆ ನಿರ್ಬಂಧವನ್ನು ವಿಧಿಸಿದರೆ ಅದು ಚಿತ್ರದುರ್ಗ ಜಿಲ್ಲೆಯ ಎಲ್ಲಾ ಪ್ರಕ್ರಿಯೆಗಳಿಗೂ ಅನ್ವಯಿಸುತ್ತದೆ ಎಂದು ನಾನು ಪರಿಗಣಿಸುತ್ತೇನೆ. ಜಿಲ್ಲೆಗೆ ಪ್ರವೇಶಿಸದಂತೆ ಕೋರ್ಟ್ ವಿಚಾರಣೆಗೆ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಹಾಜರಾಗಲು ಅನುಮತಿ ನೀಡಲಾಗಿದೆ ಎಂದು ಹೈಕೋರ್ಟ್ ಹೇಳಿದೆ.

ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶಗಳು ಹೈಕೋರ್ಟ್ ನೀಡಿದ ಆದೇಶಗಳಿಗೆ ವಿರುದ್ಧವಾಗಿದೆ. ಹೀಗಾಗಿ ಹೈಕೋರ್ಟ್ ತನ್ನ ಅಂತರ್ಗತ ಅಧಿಕಾರವನ್ನು ಚಲಾಯಿಸಬೇಕು ಎಂದು ನಾನು ಪರಿಗಣಿಸಿದ್ದು ವಿಚಾರಣಾ ನ್ಯಾಯಾಲಯ ನೀಡಿದ್ದ ಜಾಮೀನು ರಹಿತ ಬಂಧನ ವಾರಂಟ್‌ಗೆ ತಡೆಯಾಜ್ಞೆ ನೀಡಿದ್ದೇನೆ ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

2022ರ ಸೆಪ್ಟೆಂಬರ್ 1ರಂದ ಬಂಧನದಲ್ಲಿದ್ದ ಮುರುಘಾ ಶ್ರೀಗಳ ವಿರುದ್ಧ ಎರಡು POCSO ಪ್ರಕರಣಗಳು ದಾಖಲಾಗಿದೆ. ಇದರಲ್ಲಿ ಮೊದಲ ಪ್ರಕರಣದಲ್ಲಿ ನವೆಂಬರ್ 8ರಂದು ಹೈಕೋರ್ಟ್ ಜಾಮೀನು ನೀಡಿದ್ದರಿಂದ ನವೆಂಬರ್ 16ರಂದು ಶ್ರೀಗಳು ಜೈಲಿನಿಂದ ಬಿಡುಗಡೆಯಾಗಿದ್ದರು.

ಬಿಡುಗಡೆಯಾದ ನಂತರ ದಾವಣಗೆರೆಯ ವಿರಕ್ತ ಮಠದಲ್ಲಿ ತಂಗಿದ್ದ ಶ್ರೀಗಳನ್ನು ಚಿತ್ರದುರ್ಗ ಪೊಲೀಸರು ಇಂದು ಬಂಧಿಸಿದ್ದಾರೆ. ಮಠಾಧೀಶರ ವಿರುದ್ಧದ ಎರಡು ಪೋಕ್ಸೊ ಪ್ರಕರಣಗಳಲ್ಲಿ ಒಂದರಲ್ಲಿ ಜಾಮೀನಿಗೆ ಹೈಕೋರ್ಟ್ ಹಲವು ಷರತ್ತುಗಳನ್ನು ವಿಧಿಸಿದ್ದು, ಪ್ರಕರಣಗಳ ತನಿಖೆ ಪೂರ್ಣಗೊಳ್ಳುವವರೆಗೆ ಚಿತ್ರದುರ್ಗ ಜಿಲ್ಲೆಗೆ ಪ್ರವೇಶ ನಿರಾಕರಿಸಿದೆ.

ಎರಡು ಲಕ್ಷ ರೂಪಾಯಿಗಳ ವೈಯಕ್ತಿಕ ಬಾಂಡ್ ಮತ್ತು ಸಮಾನ ಮೊತ್ತಕ್ಕೆ ಇಬ್ಬರ ಶ್ಯೂರಿಟಿಯ ಮೇಲೆ ಅವರಿಗೆ ಜಾಮೀನು ನೀಡಲಾಯಿತು. ಸಾಕ್ಷಿಗಳನ್ನು ಹಾಳು ಮಾಡದಂತೆ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರದಂತೆ ಎಚ್ಚರಿಕೆ ನೀಡಿದರು.

ಮಠಾಧೀಶರು ಮತ್ತು ಇತರ ನಾಲ್ವರ ವಿರುದ್ಧ ಮೈಸೂರಿನ 'ಒಡನಾಡಿ ಸೇವಾ ಸಂಸ್ಥೆ' ಎಂಬ ಎನ್‌ಜಿಒ, ಮಠದ ಶಾಲೆಯಲ್ಲಿ ಓದುತ್ತಿರುವ ಮತ್ತು ಚಿತ್ರದುರ್ಗದ ಹಾಸ್ಟೆಲ್‌ನಲ್ಲಿ ವಾಸಿಸುತ್ತಿರುವ ಅಪ್ರಾಪ್ತ ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ಮೊದಲ ದೂರು ದಾಖಲಿಸಿತ್ತು.

ಮೈಸೂರಿನ ನಜರ್‌ಬಾದ್ ಪೊಲೀಸರು ಪೋಕ್ಸೊ ಮತ್ತು ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದರು. ನಂತರ ಪ್ರಕರಣವನ್ನು ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ವರ್ಗಾಯಿಸಲಾಗಿತ್ತು 2019 ಮತ್ತು 2022ರ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದಾಗ ಇಬ್ಬರು ಅಪ್ರಾಪ್ತ ಬಾಲಕಿಯರ ತಾಯಿ ತನ್ನ ಇಬ್ಬರು ಹೆಣ್ಣುಮಕ್ಕಳು ಮತ್ತು ಇತರ ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಶ್ರೀಗಳು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ದೂರು ನೀಡಿದ ನಂತರ ಪೋಕ್ಸೊ ಅಡಿಯಲ್ಲಿ 2ನೇ ಪ್ರಕರಣ ದಾಖಲಾಗಿತ್ತು.

ಕಿರಿಯ ಪೀಠಾಧಿಪತಿ ಬಸವಾದಿತ್ಯ ಹಾಗೂ ಪರಮಶಿವಯ್ಯ, ಗಂಗಾಧರ್, ಮಹಾಲಿಂಗ, ಕರಿಬಸಪ್ಪ ಸೇರಿದಂತೆ ಇತರರು ಭಾಗಿಯಾಗಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ನಂತರ ಎರಡನೇ ಪ್ರಕರಣದಲ್ಲಿ ಪರಮಶಿವಯ್ಯ ಅವರ ಹೆಸರನ್ನು ಚಾರ್ಜ್‌ಶೀಟ್‌ನಿಂದ ಕೈಬಿಡಲಾಗಿತ್ತು.

ರಾಜಕೀಯವಾಗಿ ಗುರುತಿಸಿದ ಮಂಡ್ಯದಿಂದಲೇ ಪಕ್ಷ ಸಂಘಟನೆ

ಎಲ್ಲರನ್ನೂ ಒಗ್ಗೂಡಿಸಿ ಪಕ್ಷ ಕಟ್ಟಲು ಪ್ರಾಮಾಣಿಕ ಪ್ರಯತ್ನ: ವಿಜಯೇಂದ್ರ



ಮಂಡ್ಯ, ನ.20– ರಾಜಕೀಯವಾಗಿ ನನ್ನನ್ನು ಗುರುತಿಸಿದ ಮಂಡ್ಯ ಜಿಲ್ಲೆಯಿಂದಲೇ ಪಕ್ಷ ಸಂಘಟನೆಗೆ ಆದ್ಯತೆ ನೀಡಲಾಗುವುದು. ಪಕ್ಷದಿಂದ ಹೊರಗುಳಿದಿರುವ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ವಿಕಾಸ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್.ಪೇಟೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಕೆ.ಸಿ.ನಾರಾಯಣಗೌಡರನ್ನು ಗೆಲ್ಲಿಸುವ ಮೂಲಕ ಮಂಡ್ಯ ಜಿಲ್ಲೆಯಲ್ಲೇ ಮೊದಲ ಬಾರಿಗೆ ಕಮಲ ಅರಳಿಸಲಾಗಿತ್ತು. ಅದು ನನಗೆ ರಾಜಕೀಯವಾಗಿ ಗಮನ ಸೆಳೆಯುವಂತೆ ಮಾಡಿದ್ದರ ಹಿನ್ನೆಲೆಯಲ್ಲಿ ಈ ಜಿಲ್ಲೆಯಿಂದಲೇ ನಾನು ಪಕ್ಷ ಸಂಘಟನೆ ಮಾಡುವುದಾಗಿ ಸ್ಪಷ್ಟಪಡಿಸಿದರು.

ಕಳೆದ ಬಾರಿ ನಮ್ಮ ಸರ್ಕಾರವಿದ್ದಾಗ ಹಳೇ ಮೈಸೂರು ಭಾಗದಲ್ಲಿ ಜನರ ಬಳಿಗೆ ಹೋಗದೆ ಪಕ್ಷ ಸಂಘಟಿಸುವಲ್ಲಿ ನಾವು ವಿಫಲರಾಗಿದ್ದೇವೆ. ಇದು ಸಹ ವಿಧಾನಸಭಾ ಚುನಾವಣೆಯಲ್ಲಿ ಸೋಲಾಗಲು ಕಾರಣವಾಯಿತು ಎಂದರು. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರ ಜನವಿರೋಧಿ ನೀತಿ ಅನುಸರಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತವರ ಸಚಿವರಿಗೆ ರೈತರ ಬಗ್ಗೆ ಕಾಳಜಿ ಇಲ್ಲವಾಗಿದೆ. ರಾಜ್ಯದಲ್ಲಿ ಬರ ಪರಿಸ್ಥಿತಿ ತಾಂಡವವಾಡುತ್ತಿದೆ. ಇಂತಹ ಸಂದರ್ಭದಲ್ಲಿ ಸಂಪುಟದ ಸಚಿವರು ಹುಡುಗಾಟ ಆಡುತ್ತಿದ್ದಾರೆ. ಕನಿಷ್ಠ ಅಧಿಕಾರಿಗಳ ಸಭೆ ಕರೆದು ಚರ್ಚಿಸಿ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ಬರ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ 350 ಕೋಟಿ ರೂ. ಬಿಡುಗಡೆ ಮಾಡಿರುವುದಾಗಿ ಸ್ವತಃ ಮುಖ್ಯಮಂತ್ರಿಗಳೇ ಹೇಳುತ್ತಾರೆ. ಆದರೆ ಅದಕ್ಕೆ ಕ್ರಿಯಾ ಯೋಜನೆ ರೂಪಿಸದೆ ನಿರ್ಲಕ್ಷ್ಯ ವಹಿಸಿದೆ ಎಂದು ಕಿಡಿಕಾರಿದರು.

ಚುನಾವಣೆಯಲ್ಲಿ ಜಾರಿಗೆ ತಂದ ಐದು ಗ್ಯಾರಂಟಿಗಳನ್ನು ಸರಿಯಾಗಿ ಜನತೆಗೆ ತಲುಪಿಸುತ್ತಿಲ್ಲ. ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯಡಿ ನೀಡಲಾಗುತ್ತಿದ್ದ 2 ಸಾವಿರ ರೂ.ಗಳನ್ನು ಕಳೆದ ತಿಂಗಳಿನಿಂದ ನಿಲ್ಲಿಸುವ ಮೂಲಕ ಜನರ ಕಣ್ಣಿಗೆ ಮಣ್ಣೆರಚಿದ್ದಾರೆ. ಯಾವ ಗ್ಯಾರಂಟಿಗಳೂ ಸರಿಯಾಗಿ ಜಾರಿಯಾಗಿಲ್ಲ ಎಂದರು.

ರೈತರಿಗಾಗಿ ಕೇಂದ್ರ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆಯಡಿ 6 ಸಾವಿರ ರೂ.ಗಳನ್ನು ನೀಡುತ್ತಿದೆ. ಹಿಂದಿನ ನಮ್ಮ ಬಿಜೆಪಿ ಸರ್ಕಾರ 4 ಸಾವಿರ ರೂ. ಸೇರಿಸಿ ಒಟ್ಟು 10 ಸಾವಿರ ರೂ. ನೀಡುತ್ತಿತ್ತು. ಆದರೆ ಈಗಿನ ಕಾಂಗ್ರೆಸ್ ಸರ್ಕಾರ 4 ಸಾವಿರ ರೂಗಳನ್ನು ನಿಲ್ಲಿಸಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ವಿದ್ಯಾಸಿರಿ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಅವರು ಮೈಸೂರು ಪ್ರವಾಸದಲ್ಲಿದ್ದ ಸಂದರ್ಭ ರೈತರು ಕಬ್ಬಿನ ದರ ಹೆಚ್ಚಳ ಮಾಡುವಂತೆ ಮನವಿ ಸಲ್ಲಿಸಲು ಬಂದರೆ, ಮುಖ್ಯಮಂತ್ರಿಗಳು ತಮ್ಮ ಅಧಿಕಾರ ಚಲಾಯಿಸಿ ರೈತರನ್ನು ಬಂಧಿಸಿದ್ದಾರೆ. ಇಂತಹ ಬೆಳವಣಿಗೆ ಸರಿಯಲ್ಲ. ಇದಕ್ಕೆ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದು ಗುಡುಗಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಮಾಜಿ ಸಚಿವ ಎನ್.ಮಹೇಶ್, ಬಿಜೆಪಿ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಮುಖಂಡರಾದ ಸಚ್ಚಿದಾನಂದ, ಅಶೋಕ್ ಜಯರಾಂ, ಡಾ.ಇಂದ್ರೇಶ್, ಮುನಿರಾಜು, ವಿದ್ಯಾನಾಗೇಂದ್ರ ಇತರರಿದ್ದರು.

ಇದಕ್ಕೂ ಮುನ್ನ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಪೂಜಾ ಕುಣಿತ, ಡೊಳ್ಳು ಕುಣಿತ, ಜಾನಪದ ಕಲಾತಂಡ ಹಾಗೂ ಪೂರ್ಣಕುಂಭ ಕಳಸದೊಂದಿಗೆ ಅದ್ದೂರಿ ಮೆರವಣಿಗೆ ಮೂಲಕ ವಿಜಯೇಂದ್ರ ಅವರನ್ನು ಬಿಜೆಪಿ ಕಚೇರಿಗೆ ಕರೆತರಲಾಯಿತು.

ಕಳೆದ ಲೋಕಸಭಾ ಚುನಾವಣೆಯಲ್ಲಿ 25 ಸ್ಥಾನಗಳನ್ನು ಗೆದ್ದಿದ್ದೆವು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ 28ಕ್ಕೆ 28 ಸ್ಥಾನಗಳನ್ನು ಗೆಲ್ಲುವ ಮೂಲಕ ಮತ್ತೊಮ್ಮೆ ಕೇಂದ್ರದಲ್ಲಿ ನರೇಂದ್ರ ಮೋದಿ ಅವರನ್ನು ಪ್ರಧಾನಮಂತ್ರಿಯನ್ನಾಗಿ ಮಾಡುವುದೇ ನಮ್ಮ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆ ಮತ್ತು ಕಾರ್ಯಕರ್ತರ ಚುನಾವಣೆಯಾಗಿರುವ ಜಿಲ್ಲಾ ಮತ್ತು ತಾಪಂ ಚುನಾವಣೆಗಳಲ್ಲೂ ಸಹ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪಕ್ಷವನ್ನು ಸದೃಢಗೊಳಿಸಲು ಉದ್ದೇಶಿಸಲಾಗಿದೆ. – ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಬೈಕ್‌ನಿಂದ ಬಿದ್ದು ಯುವಕ ಸಾವು



ಭಾರತೀನಗರ, ನ.20– ಬೈಕ್‌ನಿಂದ ಬಿದ್ದು ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಗುಡಿಗೆರೆ ಗ್ರಾಮದ ಬಳಿ ನಡೆದಿದೆ.

ಭಾರತೀನಗರದ ಎಜಿ ಕಾಲೋನಿ ನಿವಾಸಿ ಶೋಭ ಮಹದೇವ ಅವರ ಪುತ್ರ ಹರ್ಷಗೌಡ (19) ಸಾವನ್ನಪ್ಪಿದ ಯುವಕ. ಈತ ತನ್ನ ಸ್ನೇಹಿತನನ್ನು ಗುಡಿಗೆರೆಯಲ್ಲಿರುವ ವಸತಿ ನಿಲಯಕ್ಕೆ ಬಿಟ್ಟು ಬೈಕ್‌ನಲ್ಲಿ ಹಿಂತಿರುಗುತ್ತಿದ್ದಾಗ ಆಯತಪ್ಪಿ ಬಿದ್ದ ಪರಿಣಾಮ ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದ ಸ್ಥಳಕ್ಕಾಗಮಿಸಿದ ಕೆ.ಎಂ.ದೊಡ್ಡಿ ಪೊಲೀಸರು ಪರಿಶೀಲಿಸಿ ಶವವನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವೈಭವದ ರಾಜಮುಡಿ ಕಿರೀಟಧಾರಣಾ ಮಹೋತ್ಸವ



ಮೇಲುಕೋಟೆ, ನ.20– ಕಾರ್ತಿಕ ಮಾಸದ ಬ್ರಹ್ಮೋತ್ಸವದ 4ನೇ ತಿರುನಾಳ್ ಅಂಗವಾಗಿ ಸೋಮವಾರ ರಾತ್ರಿ ಶ್ರೀ ಚೆಲುವನಾರಾಯಣಸ್ವಾಮಿಗೆ ರಾಜಮುಡಿ ಕಿರೀಟಧಾರಣಾ ಮಹೋತ್ಸವ ವೈಭವದಿಂದ ನೆರವೇರಿತು. ಆಡಂಬರವಿಲ್ಲದೆ ನಡೆದ ಐತಿಹಾಸಿಕ ಮಹೋತ್ಸವದಲ್ಲಿ ನೂರಾರು ಭಕ್ತರು ಭಾಗವಹಿಸಿದ್ದರು.

ಮೈಸೂರು ದೊರೆ ರಾಜ ಒಡೆಯರ್ ಭಕ್ತಿಪೂರ್ವಕವಾಗಿ ಸಮರ್ಪಿಸಿದ ಅಮೂಲ್ಯವಾದ ಕೆಂಪು ಮತ್ತು ಗುಲಾಬಿ ಬಣ್ಣದ ವಜ್ರಗಳಿಂದ ಕೂಡಿದ ರಾಜಮುಡಿ ಕಿರೀಟವನ್ನು ಶ್ರೀದೇವಿಭೂದೇವಿ ಸಮೇತನಾದ ಶ್ರೀಚೆಲುವನಾರಾಯಣಸ್ವಾಮಿಗೆ ತೊಡಿಸಿ ಮಹಾಮಂಗಳಾರತಿ ನೆರವೇರಿಸಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾ ಖಜಾನೆಯಿಂದ ಪೊಲೀಸ್ ಭದ್ರತೆಯಲ್ಲಿ ತಂದ ರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ಸಂಜೆ 6.30ರ ವೇಳೆಗೆ ಉಪವಿಭಾಗಾಧಿಕಾರಿ ನಂದೀಶ್ ನೇತೃತ್ವದಲ್ಲಿ ಸ್ಥಾನೀಕರು, ಅರ್ಚಕ, ಪರಿಚಾರಕರ ಸಮಕ್ಷಮ ಪರ್ಕಾವಣೆ ಮಾಡಲಾಯಿತು. ನಂತರ ವಿಶೇಷ ಪುಷ್ಪಾಲಂಕೃತನಾದ ಚೆಲುವನಾರಾಯಣ ಸ್ವಾಮಿಗೆ ವಜ್ರ ಖಚಿತ ರಾಜಮುಡಿ ಕಿರೀಟ ಮತ್ತು ಗಂಡಭೇರುಂಡ ಪದಕವನ್ನು ತೊಡಿಸಿ 7.30ಕ್ಕೆ ಮಹಾಮಂಗಳಾರತಿ ನೆರವೇರಿಸಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ತಮಿಳುನಾಡು ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಮುಜರಾಯಿ ಇಲಾಖೆ ಕಾಂಚೀಪುರಂ ವಿಭಾಗದ ಜಂಟಿ ಆಯುಕ್ತೆ ವಾಗ್ಮತಿ, ಪಾಂಡವಪುರ ತಹಸೀಲ್ದಾರ್ ಶ್ರೇಯಸ್, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್, ಪಾರುಪತ್ತೇಗಾರರಾದ ಸ್ಥಾನೀಕಂ ಶ್ರೀನಿವಾಸನರಸಿಂಹನ್ ಗುರೂಜಿ, ಎಂ.ಎನ್.ಪಾರ್ಥಸಾರಥಿ ಮೇಲುಕೋಟೆ ಇನ್ಸ್‌ಪೆಕ್ಟರ್ ಸಿದ್ದಪ್ಪ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಬರ ಅಧ್ಯಯನ ಹೆಸರಲ್ಲಿ ಜೆಡಿಎಸ್ ನಾಯಕರಿಂದ ರಾಜಕೀಯ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಕಿಡಿ



ಕೆ.ಆರ್.ಪೇಟೆ, ನ.20– ಬರ ಅಧ್ಯಯನ ಹೆಸರಲ್ಲಿ ಜಿಲ್ಲೆಯ ಜೆಡಿಎಸ್ ನಾಯಕರು ರಾಜಕೀಯ ಮಾಡುತ್ತಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಕಿಡಿಕಾರಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ತಾಲೂಕು ಕಾಂಗ್ರೆಸ್ ಘಟಕದ ಪದಾಧಿಕಾರಿಗಳು ಹಾಗೂ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬರ ಅಧ್ಯಯನ ಹೆಸರಿನಲ್ಲಿ ರಾಜಕೀಯ ವಿಚಾರ ಮಾತನಾಡುತ್ತಿರುವ ಜೆಡಿಎಸ್ ನಾಯಕರ ನಡವಳಿಕೆ ವಿರುದ್ಧ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ರೈತರ ಪರ ಚಿಂತಿಸುತ್ತಾ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಚಲುವರಾಯಸ್ವಾಮಿ ಅಭಿವೃದ್ಧಿ ರಾಜಕಾರಣ ಮಾಡುತ್ತಿದ್ದಾರೆಯೇ ಹೊರತು ಕಲೆಕ್ಷನ್ ರಾಜಕಾರಣ ಮಾಡುತ್ತಿಲ್ಲ. ಸಚಿವರ ಯಶಸ್ಸನ್ನು ಸಹಿಸದ ಮಾಜಿ ಶಾಸಕ ಸುರೇಶ್‌ಗೌಡ ಸಚಿವರ ವಿರುದ್ಧ ಸಲ್ಲದ ಹೇಳಿಕೆಗಳನ್ನು ಬರ ಅಧ್ಯಯನ ವೇಳೆ ನೀಡುತ್ತಿದ್ದಾರೆ. ಜೆಡಿಎಸ್‌ನವರ ಸುಳ್ಳಿನ ರಾಜಕಾರಣಕ್ಕೆ ನಾವು ಬಗ್ಗುವುದಿಲ್ಲ. ಜಿಲ್ಲೆಯ ಜನರ ಹಿತ ಕಾಯಲು ಕಾಂಗ್ರೆಸ್ ಪಕ್ಷ ಕಟಿಬದ್ಧವಾಗಿದೆ ಎಂದರು.

ನಾರಾಯಣಗೌಡರ ಅಗತ್ಯ ಕಾಂಗ್ರೆಸ್ಗಿಲ್ಲ: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತಿರುವ ಮಾಜಿ ಸಚಿವರೊಬ್ಬರು ತಮ್ಮ ಬೆಂಬಲಿಗರ ಮೂಲಕ ಕಾಂಗ್ರೆಸ್ ಸೇರುತ್ತಿರುವುದಾಗಿ ಗುಲ್ಲು ಎಬ್ಬಿಸುತ್ತಿದ್ದಾರೆ. ಇದರಲ್ಲಿ ಯಾವುದೇ ಹುರುಳಿಲ್ಲ ಎಂದು ಮಾಜಿ ಸಚಿವ ಕೆ.ಸಿ.ನಾರಾಯಣಗೌಡರ ಕಾಂಗ್ರೆಸ್ ಸೇರ್ಪಡೆ ವಿಚಾರ ತಳ್ಳಿ ಹಾಕಿದ ಅವರು, ಕಳೆದ ಚುನಾವಣೆ ಪೂರ್ವದಲ್ಲೂ ನಾರಾಯಣಗೌಡರು ಇದೇ ರೀತಿಯ ವದಂತಿ ಹಬ್ಬಿಸುತ್ತಿದ್ದರು. ಕ್ಷೇತ್ರದಲ್ಲಿ ಕಾಂಗ್ರೆಸ್ ಸದೃಢವಾಗಿದೆ. ನಮಗೆ ನಾಯಕತ್ವದ ಕೊರತೆ ಇಲ್ಲ. ಪ್ರತಿ ಚುನಾವಣೆಯಲ್ಲೂ ಪಕ್ಷ ಬದಲಿಸುವ ಮಾಜಿ ಸಚಿವರ ಅಗತ್ಯ ನಮಗಿಲ್ಲ. ಈ ವಿಚಾರದಲ್ಲಿ ಕಾರ್ಯಕರ್ತರು ಗೊಂದಲಗೊಳ್ಳುವ ಅಗತ್ಯವಿಲ್ಲ ಎಂದರು.

25ಕ್ಕೆ ಅಧಿಕಾರ ಸ್ವೀಕಾರ: ತಾಲೂಕು ಕಾಂಗ್ರೆಸ್ ಗ್ರಾಮಾಂತರ ಘಟಕದ ನೂತನ ಅಧ್ಯಕ್ಷ ವಿಶ್ವನಾಥ್ ನ.25ರಂದು ಮಧ್ಯಾಹ್ನ 1 ಗಂಟೆಗೆ ಪಟ್ಟಣದ ಜಯಮ್ಮ ಶಿವಲಿಂಗೇಗೌಡ ಸಮುದಾಯ ಭವನದಲ್ಲಿ ನಡೆಯುವ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ. ಕಾರ್ಯಕ್ರಮಕ್ಕೆ ಸಚಿವ ಎನ್.ಚಲುವರಾಯಸ್ವಾಮಿ ಆಗಮಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಿ, ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಪಿಸಿಸಿ ಸದಸ್ಯ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ಬಿ.ನಾಗೇಂದ್ರ ಕುಮಾರ್, ಪ್ರಧಾನ ಕಾರ್ಯದರ್ಶಿ ಚೇತನಾ ಮಹೇಶ್, ಮುಖಂಡರಾದ ಎ.ಬಿ. ಕುಮಾರ್, ಕೆ.ಕೆ.ರಮೇಶ್, ಇಲಿಯಾಜ್ ಅಹಮದ್, ನಯಾಜ್, ಆಯಾಜ್ ಸೇರಿದಂತೆ ಇನ್ನಿತರರಿದ್ದರು. ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮಾಜಿ ಪ್ರಧಾನಿ ದಿ.ಇಂದಿರಾ ಗಾಂಧಿ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನದ ಮೂಲಕ ಗೌರವ ಸಲ್ಲಿಸಲಾಯಿತು.

ಸಕಾಲಕ್ಕೆ ಬಾರದ ಬಸ್: ವಿದ್ಯಾರ್ಥಿಗಳಿಂದ ರಸ್ತೆ ತಡೆ

ಮಂಡ್ಯ, ನ.20– ಸಕಾಲಕ್ಕೆ ಬಸ್ ಬಾರದ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ವಿದ್ಯಾರ್ಥಿಗಳು ಗ್ರಾಮಸ್ಥರ ಜೊತೆಗೂಡಿ ಶ್ರೀರಂಗಪಟ್ಟಣ ತಾಲೂಕಿನ ಕೊಡಿಯಾಲ ಗ್ರಾಮದಲ್ಲಿ ರಸ್ತೆತಡೆ ನಡೆಸಿದರು. ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಕೊಡಿಯಾಲ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ವಿದ್ಯಾರ್ಥಿಗಳು ಶಾಲಾ ಕಾಲೇಜಿಗೆ ತೆರಳಲು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರತಿನಿತ್ಯ ಪ್ರಯಾಣ ಮಾಡುತ್ತಾರೆ. ಆದರೆ ಸಕಾಲದಲ್ಲಿ ಬಸ್‌ಗಳು ಬಾರದ ಹಿನ್ನೆಲೆಯಲ್ಲಿ ನಿಗದಿತ ಸಮಯಕ್ಕೆ ಶಾಲೆಗೆ ತೆರಳಲು ಸಾಧ್ಯವಾಗುತ್ತಿಲ್ಲ. ಬಸ್‌ಗಳು ಬಂದರೂ ವಿದ್ಯಾರ್ಥಿಗಳು ಮತ್ತು ಇತರೆ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಮುಂದಾಗುತ್ತಿಲ್ಲ. ನಿರ್ವಾಹಕರು ಉಡಾಫೆಯಾಗಿ ವರ್ತಿಸುತ್ತಾರೆ. ಚಾಲಕರು ಬಸ್‌ಗಳನ್ನು ನಿಲ್ದಾಣಗಳಲ್ಲಿ ನಿಲುಗಡೆ ಮಾಡದೆ ಸ್ವಲ್ಪ ದೂರ ಮುಂದೆ ಹೋಗಿ ನಿಲ್ಲಿಸುತ್ತಾರೆ ಅಲ್ಲದೆ ಬಸ್‌ಗಳಲ್ಲಿ ಪ್ರಯಾಣಿಕರು ತುಂಬಿದ್ದಾರೆ ಎಂದು ನಿಲ್ಲಿಸದೆ ಹೋಗುತ್ತಾರೆ ಎಂದು ಅಳಲು ತೋಡಿಕೊಂಡರು.

ಇದೇ ವೇಳೆ ಪೊಲೀಸರು ಸ್ಥಳಕ್ಕಾಗಮಿಸಿ ವಿದ್ಯಾರ್ಥಿಗಳ ಮನವೊಲಿಕೆಗೆ ಮುಂದಾದರೂ ಪ್ರತಿಭಟನೆ ಮುಂದುವರಿಸಿದ ಹಿನ್ನೆಲೆಯಲ್ಲಿ ನಿಗಮದ ವಿಭಾಗೀಯ ನಿಯಂತ್ರಣ ಅಧಿಕಾರಿ ಭೇಟಿ ನೀಡಿ ಬಸ್‌ಗಳು ಸಕಾಲಕ್ಕೆ ಬರುವಂತೆ ನೋಡಿಕೊಳ್ಳಲಾಗುವುದು. ಅಷ್ಟೇ ಅಲ್ಲದೆ ಹೆಚ್ಚುವರಿ ಬಸ್‌ಗಳನ್ನು ಸಂಚರಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ರಸ್ತೆ ತಡೆ ವಾಪಸ್ ಪಡೆಯಲಾಯಿತು.



ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ ಸಹ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಪಿಎಚ್.ಡಿ, ಕೆ–ಸೆಟ್, ನೆಟ್ ಪರೀಕ್ಷೆ ಉತ್ತೀರ್ಣಗೊಂಡಿರುವ ಮಾಹಿತಿ ನೀಡುವ ವಿಚಾರವಾಗಿ ಉಂಟಾಗಿರುವ ಗೊಂದಲ ಪರಿಹರಿಸಿಕೊಟ್ಟು ಸ್ಪಷ್ಟ ನಿರ್ದೇಶನ ನೀಡುವಂತೆ ಕೋರಿ ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ಅವರಿಗೆ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ನೇತೃತ್ವದಲ್ಲಿ ನೂರಾರು ಮಂದಿ ಸಹಾಯಕ ಪ್ರಾಧ್ಯಾಪಕರು ಮನವಿ ಸಲ್ಲಿಸಿದರು.

ಒಂದನೇ ಪುಟದಿಂದ

ಒಬ್ಬರಿಗೂ ಪ್ರಧಾನಿಯಾಗುವ ಅರ್ಹತೆ ಇಲ್ಲ

ತಮ್ಮ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವ ಮುಖಂಡರಿಗೆ ವಿಜಯೇಂದ್ರ ತಿರುಗೇಟು ನೀಡಿದರು. ಮುಂದಿನ ಲೋಕಸಭಾ ಚುನಾವಣೆ ಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು. ಎಲ್ಲಾ 28 ಕ್ಷೇತ್ರಗಳಲ್ಲಿ ಗೆಲುವು ಸಾಧಿಸ ಬೇಕು. ಇದಕ್ಕಾಗಿ ರಾಜ್ಯಾದ್ಯಂತ ಸಂಚರಿಸಿ ಪಕ್ಷವನ್ನು ಮತ್ತಷ್ಟು ಬಲಗೊಳಿಸುತ್ತೇನೆ ಎಂದು ಹೇಳಿದರು. ನಾನು ಬಿಜೆಪಿ ರಾಜ್ಯಾಧ್ಯಕ್ಷನಾದ ನಂತರ ಮೊದಲು ಬೆಂಗಳೂರಿನಲ್ಲಿ ಬೂತ್ ಅಧ್ಯಕ್ಷರ ಮನೆಗೆ ಭೇಟಿ ನೀಡಿದ್ದೆ. ಮೈಸೂರಿನಲ್ಲಿ ಕೂಡ ಬೂತ್ ಅಧ್ಯಕ್ಷರ ಮನೆಗೆ ಭೇಟಿ ನೀಡಿರುವೆ. ಈ ಮೂಲಕ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆ ಮಾಡುತ್ತೇನೆ ಎಂದರು. ಈ ವೇಳೆ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ ಸೇರಿದಂತೆ ಬಹಳಷ್ಟು ಯೋಜನೆಗಳು ನರೇಂದ್ರ ಮೋದಿ ಅವರ ಆಡಳಿತಾವಧಿಯಲ್ಲಿ ಆಗಿವೆ. ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿರುವುದು ನಮಗೆ ಮತ್ತಷ್ಟು ಬಲ ಬಂದಂತಾಗಿದೆ. ನಾವು ಮಾಡಿರುವ ಅಭಿವೃದ್ಧಿ ಕೆಲಸವನ್ನು ಜನರ ಮುಂದಿಟ್ಟು ಚುನಾವಣೆಗೆ ಹೋಗೋಣ ಎಂದು ಹೇಳಿದರು. ವಿಜಯೇಂದ್ರ ಕೆ.ಆರ್.ಪೇಟೆ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಿದರು. ಉಪಾಧ್ಯಕ್ಷರಾಗಿದ್ದ ವಿಜಯೇಂದ್ರರು ತಮ್ಮ ಸಾಮರ್ಥ್ಯದಿಂದಲೇ ಈಗ ರಾಜ್ಯಾಧ್ಯಕ್ಷರಾಗಿದ್ದಾರೆ. ವಿಜಯೇಂದ್ರ ನೇಮಕದಿಂದ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ಮತ್ತಷ್ಟು ಹೆಚ್ಚಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ನುಡಿದರು.

ವಿಜಯೇಂದ್ರ ಆಗಮನಕ್ಕೆ ಸ್ವಾಗತ ಕೋರುವ ಫ್ಲೆಕ್ಸ್‌ಗಳನ್ನು ಜಿಲ್ಲಾಡಳಿತ ತೆರವು ಮಾಡಿ ಸಣ್ಣತನ ತೋರಿದೆ. ಇದೆಲ್ಲದರ ವಿರುದ್ಧ ನಾವು ಹೋರಾಟ ಮಾಡಬೇಕು ಎಂದು ಶ್ರೀವತ್ಸ ಕರೆ ನೀಡಿದರು. ವಿಜಯೇಂದ್ರ ಅವರಿಗೆ ಹೂಗುಚ್ಛ ನೀಡಲು, ಹಾರ ಹಾಕಲು ಕಾರ್ಯಕರ್ತರಲ್ಲಿ ನೂಕು ನುಗ್ಗಲು ಉಂಟಾಯಿತು. ಬಹಳಷ್ಟು ಮುಖಂಡರು ಹಾಗೂ ಕಾರ್ಯಕರ್ತರು ವಿಜಯೇಂದ್ರಗೆ ಮೈಸೂರು ಪೇಟ ತೊಡಿಸಿ, ಹಾರ ಹಾಕಿ ಅಭಿನಂದಿಸಿದರು. ಮಾಜಿ ಸಚಿವರಾದ ಎಸ್.ಎ. ರಾಮದಾಸ್, ಸಿ.ಹೆಚ್.ವಿಜಯಶಂಕರ್, ಎಂ.ಶಿವಣ್ಣ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಹರ್ಷವರ್ಧನ್, ನಿರಂಜನ್‌ಕುಮಾರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಿಕೆಶಿ ಕಟ್ಟಿ ಹಾಕಲು ಸಿದ್ದರಾಮಯ್ಯ...!

ಜನರು 135 ಸ್ಥಾನ ನೀಡಿದ್ದಾರೆ. ಆದರೆ ಜನರಿಗೆ ಕೊಟ್ಟ ಭರವಸೆ ಈಡೇರಿಸಿದ್ದೀರಾ ಎಂದು ಪ್ರಶ್ನಿಸಿದ ವಿಜಯೇಂದ್ರ, ಅಭಿವೃದ್ಧಿಗೆ ಹಣ ನೀಡದ ಕಾರಣ ಕಾಂಗ್ರೆಸ್ ಶಾಸಕರೇ ಅವರ ಕ್ಷೇತ್ರಗಳಲ್ಲಿ ತಲೆ ಎತ್ತಿ ಓಡಾಡದ ಪರಿಸ್ಥಿತಿ ಎದುರಾಗಿದೆ. ಯಾವ ಅಭಿವೃದ್ಧಿಯನ್ನು ಮಾಡದೆ ಮಾತೆತ್ತಿದರೆ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರು ಬರಗಾಲದಿಂದ ಸಂಕಷ್ಟಕ್ಕೊಳಗಾಗಿದ್ದಾರೆ. ಆದರೆ ಜಿಲ್ಲಾ ಉಸ್ತುವಾರಿ ಸಚಿವರುಗಳು ಈ ತನಕ ಬರ ವೀಕ್ಷಣೆಗೆ ಹೋಗಿಲ್ಲ. ಅಧಿಕಾರದ ಅಮಲಿನಲ್ಲಿ ಸರ್ಕಾರ ತೇಲುತ್ತಿದೆಯೇ ಹೊರತು, ಕಿಂಚಿತ್ತೂ ಅಭಿವೃದ್ಧಿ ಮಾಡಿಲ್ಲ ಎಂದು ಆರೋಪಿದರು. ಸಚಿವ ಪ್ರಿಯಾಂಕ್ ಖರ್ಗೆ ಕ್ಷೇತ್ರದಲ್ಲಿ ಗೂಂಡಾಗಿರಿ ಜೋರಾಗಿದೆ. ನಮ್ಮ ಬಿಜೆಪಿ ಮುಖಂಡ ಮಣಿಕಂಠ ರಾಥೋಡ್ ಮೇಲೆ ಹಲ್ಲೆ ನಡೆಸಲಾಗಿದೆ ಇನ್ನು ಸಚಿವ ಜಮೀರ್ ಅಹಮ್ಮದ್ ಖಾನ್ ಸ್ಪೀಕರ್ ಹುದ್ದೆಗೆ ಅಗೌರವ ತರುವಂತೆ ಮಾತನಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಿಯಾಂಕ್ ಖರ್ಗೆ ಹಾಗೂ ಜಮೀರ್ ಅಹಮ್ಮದ್ ಅವರಿಂದ ಮುಖ್ಯಮಂತ್ರಿಗಳು ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದರು. ಶಾಸಕ ಗಾಲಿ ಜನಾರ್ಧನ ರೆಡ್ಡಿ ಅವರನ್ನು ಬಿಜೆಪಿಗೆ ಕರೆ ತರಲಾಗುತ್ತಿದೆಯೇ ಎಂಬ ಪ್ರಶ್ನೆಗೆ ವಿಜಯೇಂದ್ರ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.



ಬಿಜೆಪಿ ನೂತನ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ಅವರು ಮೈಸೂರಿಗೆ ಆಗಮಿಸಿದ್ದ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎ.ರಾಮದಾಸ್ ಅವರು ಭೇಟಿ ಮಾಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಮುಖಂಡರಾದ ಪ್ರಸಾದ್ ಬಾಬು, ಗಿರೀಶ್, ಎ.ಸಂತೋಷ್, ಪ್ರದೀಪ್ ಪ್ರಸಾದ್, ಸತೀಶ್, ಗೋಪಾಲ್, ಅನಿರುದ್ಧ್ ಇನ್ನಿತರರು ಇದ್ದರು.

ಗ್ಯಾರಂಟಿ ಕೊಟ್ಟಿದ್ದೇವೆ

ಸರ್ವರನ್ನೂ ಒಳಗೊಳ್ಳುವ ಸಮಾನ ಅವಕಾಶಗಳ ಸರ್ವತೋಮುಖ ಪ್ರಗತಿಯ ನಾಡು ಕಟ್ಟಲು ಇದು ನಮಗೆ ಬುನಾದಿ.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಜೊತೆಗೆ ಬರ ಪರಿಹಾರದ ಕೆಲಸ ಯುದ್ಧೋಪಾದಿಯಲ್ಲಿ ನಡೆದಿದೆ. ಕುಡಿಯುವ ನೀರು, ದನ–ಕರುಗಳಿಗೆ ಮೇವು, ಜನರಿಗೆ ಉದ್ಯೋಗ ಕೊಡುವ ಕೆಲಸವೂ ಆಗುತ್ತಿದೆ. ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡ ರಾಜ್ಯಕ್ಕೆ ಭೇಟಿ ನೀಡಿ ಒಂದು ತಿಂಗಳ ಮೇಲಾಗಿದ್ದರೂ ಇದುವರೆಗೂ ಒಂದು ನಯಾಪೈಸೆ ಪರಿಹಾರವನ್ನೂ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತ ಪಡಿಸಿದರು. ರಾಜ್ಯದಲ್ಲಿ ಬರ ಪರಿಹಾರ ಕಾಮಗಾರಿಗಳು ಪ್ರಾರಂಭವಾಗಿವೆ, ಕುಡಿಯುವ ನೀರು, ದನಕರುಗಳಿಗೆ ಮೇವು ಒದಗಿಸಲಾಗಿದೆ, ಮೇವಿಗೆ ಅಭಾವವಿಲ್ಲ, ಜನರಿಗೆ ಉದ್ಯೋಗ ನೀಡುವ ಕೆಲಸವೂ ಆಗುತ್ತಿದೆ.

ತಮ್ಮನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವ ಷಡ್ಯಂತ್ರದ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಮ್ಮ ಪಕ್ಷದ ವಿಚಾರ, ನಾವು ನೋಡಿಕೊಳ್ಳುತ್ತೇವೆ ಎಂದರು.

ಬಿಜೆಪಿ ನುಡಿದಂತೆ ನಡೆಯುವ ಪಕ್ಷ ಅಲ್ಲ, ಆದ್ದರಿಂದ ಅವರ ಯಾವುದೇ ಭರವಸೆಗಳನ್ನು ಜನತೆ ನಂಬುವುದಿಲ್ಲ.

ವಿಧಾನಸಭೆ ಚುನಾವಣೆ ಎದುರಿಸುತ್ತಿರುವ ಐದು ರಾಜ್ಯಗಳಲ್ಲಿ ಬಿಜೆಪಿ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡುತ್ತಿದೆ.

ಆ ಪಕ್ಷ ಬಹಳ ವರ್ಷಗಳಿಂದ ಮಧ್ಯಪ್ರದೇಶದಲ್ಲಿ ಅಧಿಕಾರದಲ್ಲಿದ್ದರೂ, ಯಾವುದೇ ಪ್ರಗತಿ ಸಾಧಿಸಿಲ್ಲ, ಈಗ ಪ್ರಗತಿ ಸಾಧಿಸುವುದಾಗಿ ಭರವಸೆಗಳನ್ನು ನೀಡುತ್ತಿದೆ, ಬಿಜೆಪಿ ಅವರ ಮಾತುಗಳನ್ನು ಜನತೆ ನಂಬುವುದಿಲ್ಲ ಎಂದರು. ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನಮ್ಮನ್ನು ಆಕ್ಷೇಪಿಸಲು ಯಾವ ನೈತಿಕತೆಯೂ ಇಲ್ಲ, ಮಾಜಿ ಶಾಸಕ ಯತೀಂದ್ರ ದುಡ್ಡಿನ ವ್ಯವಹಾರದ ಬಗ್ಗೆ ಮಾತನಾಡಿದ್ದಾರೆಯೇ, ಅವರ ಬಳಿ ಏನಾದರೂ ಪುರಾವೆ ಇದೆಯೇ ಎಂದು ಪ್ರಶ್ನಿಸಿದರು.

ಯತೀಂದ್ರ ಅವರು ಸಿಎಸ್‌ಆರ್ ಫಂಡ್ ಬಗ್ಗೆ ಮಾತನಾಡಿದರೆ, ವರ್ಗಾವಣೆ ಬಗ್ಗೆ ಮಾತನಾಡಿದ್ದಾರೆ ಎಂದು ಆರೋಪಿಸುತ್ತಾರೆ, ಕುಮಾರಸ್ವಾಮಿ ಕಾಲದಲ್ಲಿ ವರ್ಗಾವಣೆಗಳ ಮೂಲಕ ದುಡ್ಡು ಮಾಡಿರುವುದು ಜಗಜ್ಜಾಹೀರಾಗಿದೆ, ಅವರಿಗೆ ನಮ್ಮ ವಿರುದ್ಧ ಆರೋಪ ಮಾಡುವ ನೈತಿಕತೆ ಇಲ್ಲ ಎಂದರು.

ಕಾಂಗ್ರೆಸ್ ಅಸಮಾಧಾನ ಸ್ಫೋಟ

ಅವರನ್ನು ಶೀಘ್ರದಲ್ಲೇ ಭೇಟಿ ಮಾಡುತ್ತೇನೆ ಎಂದು ತಿಳಿಸಿದರು. ನಮ್ಮ ಪಕ್ಷದ ಆಂತರಿಕ ವಿಚಾರಗಳು ನಮಗೆ ಸೀಮಿತ. ಹೀಗಿರುವಾಗ ನಮ್ಮ ಪಕ್ಷದ ಚಿಂತೆ ಸಿದ್ದರಾಮಯ್ಯ ಅವರಿಗಾಗಲೀ ಅಥವಾ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಏಕೆ ಎಂದು ವಿಜಯೇಂದ್ರ ಪ್ರಶ್ನಿಸಿದರು. ಹಳೆ ಮೈಸೂರು ಭಾಗದಲ್ಲಿ ಡಿ.ಕೆ.ಶಿವಕುಮಾರ್ ಆಪರೇಷನ್ ಹಸ್ತ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ವಿಜಯೇಂದ್ರ, ಬಿಜೆಪಿ ಬಿಟ್ಟು ಯಾರೂ ಹೋಗುವುದಿಲ್ಲ. ಬಿಜೆಪಿಯಿಂದ ಹೋದವರು ಮತ್ತೆ ವಾಪಸು ಬರುತ್ತಾರೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿ ವರಿಷ್ಠರು ನನಗೆ ಜವಾಬ್ದಾರಿಯುತ ಸ್ಥಾನ ನೀಡಿದ್ದಾರೆ. ಅದನ್ನು ಅರ್ಥ ಮಾಡಿಕೊಂಡು ಹಿರಿಯರ ಮಾರ್ಗದರ್ಶನ ಹಾಗೂ ಕಾರ್ಯಕರ್ತರ ಸಹಕಾರದಿಂದ ಪಕ್ಷವನ್ನು ಮತ್ತಷ್ಟು ಸಂಘಟನೆಗೊಳಿಸುತ್ತೇನೆ. ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆಯಾಗಿ 28 ಸ್ಥಾನಗಳನ್ನು ಗೆಲ್ಲುವುದು ನನ್ನ ಮುಂದಿರುವ ಒಂದೇ ಗುರಿ ಎಂದು ಹೇಳಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮಗೆ ಹಿನ್ನಡೆ ಆಗಿದೆ. ಆದರೆ ಮುಂದೆ ಯಾವಾಗ ಚುನಾವಣೆ ಬಂದರೂ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತೇವೆ. ಲೋಕಸಭಾ, ವಿಧಾನಸಭಾ ಹಾಗೂ ವಿಧಾನ ಪರಿಷತ್ ಚುನಾವಣೆಯಷ್ಟೇ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳಿಗೂ ಮಹತ್ವ ನೀಡುತ್ತೇವೆ. ಈ ಮೂಲಕ ನಮಗಾಗಿ ದುಡಿಯುವ ಕಾರ್ಯಕರ್ತರ ಕೈ ಬಲಪಡಿಸುತ್ತೇವೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಗೂ ನನಗೂ ಅವಿನಾಭಾವ ಸಂಬಂಧವಿದೆ. ಈಗ ರಾಜ್ಯಾಧ್ಯಕ್ಷ ಸ್ಥಾನ ದೊರೆಯಲು ಮೈಸೂರು ಜಿಲ್ಲೆಯ ರಾಜಕಾರಣವೇ ನನಗೆ ಭದ್ರ ಬುನಾದಿ ಹಾಕಿಕೊಟ್ಟಿದೆ. ಅದರಲ್ಲೂ ವರುಣಾ ಹಾಗೂ ಚಾಮರಾಜನಗರ ಕ್ಷೇತ್ರದ ಜನತೆ ಕಾರಣರಾಗಿದ್ದಾರೆ. ಇದರಿಂದ ಹಳೆ ಮೈಸೂರು ಭಾಗಕ್ಕೆ ನನ್ನ ಮೊದಲ ಆದ್ಯತೆ ಎಂದು ವಿಜಯೇಂದ್ರ ಹೇಳಿದರು. ಸಂಸದ ಪ್ರತಾಪ್ ಸಿಂಹ, ಶಾಸಕ ಶ್ರೀವತ್ಸ, ಮಾಜಿ ಶಾಸಕರಾದ ನಾಗೇಂದ್ರ, ಹರ್ಷವರ್ಧನ್, ಮಾಜಿ ಸಚಿವರಾದ ಶಿವಣ್ಣ, ಸಿ.ಹೆಚ್. ವಿಜಯಶಂಕರ್, ಎನ್.ಮಹೇಶ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಚಿನ್ನಾಭರಣ ಕಳವು

ಮೈಸೂರು, ನ. 20–ಹಾಡಹಗಲೇ ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ಕಲ್ಯಾಣಗಿರಿಯಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಎಂ.ಹೆಚ್. ರೆಹಮಾನ್ (54) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ನವೆಂಬರ್ 18ರಂದು ಮಧ್ಯಾಹ್ನ ಪತ್ನಿಯೊಂದಿಗೆ ಫೈವ್‌ಲೈಟ್ ಸರ್ಕಲ್ ಬಳಿ ಇರುವ ಬ್ಯಾಂಕ್‌ಗೆ ಹೋಗಿದ್ದರು.

ಈ ಸಂದರ್ಭದಲ್ಲಿ ಇವರ ಪುತ್ರಿ ಮನೆಯ ಟೆರೇಸ್ ಮೇಲೆ ಬಟ್ಟೆ ಒಗೆಯಲು ಹೋಗಿದ್ದ ವೇಳೆ ಖದೀಮರು ಮನೆಯೊಳಗೆ ನುಗ್ಗಿ 98.8 ಗ್ರಾಂ ಚಿನ್ನಾಭರಣ ಹಾಗೂ 1.50 ಲಕ್ಷ ನಗದು ಕಳವು ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಸೇವಾ ಸಂಘದಿಂದ ಕನ್ನಡ ರಾಜ್ಯೋತ್ಸವ ಆಚರಣೆ



ಮೈಸೂರು, ನ. 20– ಶ್ರೀ ರಾಮಕೃಷ್ಣ ಸೇವಾ ಸಂಘದ ರಾಮಕೃಷ್ಣ ವಿದ್ಯಾಕೇಂದ್ರ ಮತ್ತು ಆರ್.ಕೆ.ವಿ.ಕೆ. ಪಿಯು ಕಾಲೇಜಿನ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಂ.ಚಂದ್ರಶೇಖರ್ ಕನ್ನಡಾಂಬೆಯ ಭಾವಚಿತ್ರಕ್ಕೆ ದೀಪ ಬೆಳಗಿ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಉಪಾಧ್ಯಕ್ಷ ಕೆ.ಕೆಂಪ ಲಿಂಗರಾಜು, ಖಜಾಂಚಿ ಹೆಚ್.ಜಿ.ರಮೇಶ್, ರಾಮಕೃಷ್ಣ ವಿದ್ಯಾಕೇಂದ್ರದ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್, ರಾಮಕೃಷ್ಣ ವಿದ್ಯಾ ಕೇಂದ್ರದ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್, ವೀಣಾ ಕೆ.ಹೆಗಡೆ ಹಾಗೂ ಪ್ರಣಮ್ಯ ಎಜುಕೇಷನಲ್ ಟ್ರಸ್ಟ್‌ನ ಸವಿತಾ ಉಪಸ್ಥಿತರಿದ್ದರು.

ಈ ವೇಳೆ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ.ಚಂದ್ರಶೇಖರ್ ಮಾತನಾಡಿ, ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಲ್ಲಿ ಮಾತ್ರ ಆಗದೆ, ಕನ್ನಡ ನಿತ್ಯೋತ್ಸವವಾಗಬೇಕು ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಕನ್ನಡ ಏಕೀಕರಣಕ್ಕಾಗಿ ನಡೆದ ಹೋರಾಟವನ್ನು ಮಹನೀಯರ ತ್ಯಾಗವನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯವನ್ನು ಕುರಿತು ತಿಳಿಸಿಕೊಟ್ಟರು. ಅಂದು ಅವರೆಲ್ಲರೂ ಕನ್ನಡಕ್ಕಾಗಿ ಹೋರಾಡಿದ ಕನಸು ಇಂದು ಸಾರ್ಥಕವಾಯಿತೆ? ಎಂದು ನಾವು ಯೋಚಿಸಬೇಕೆಂದು ಹೇಳಿದರು. ಇಂದು ಜಗತ್ತೇ ನಮ್ಮ ಕಡೆ ನೋಡುವ ರೀತಿಯಲ್ಲಿ ಕರ್ನಾಟಕ ಮತ್ತು ಕನ್ನಡ ಭಾಷೆ ಇದೆ. ಅದನ್ನು ಉಳಿಸಿ ಬೆಳೆಸಿ ಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ತಿಳಿಸಿಕೊಟ್ಟರು.

ಉಪಾಧ್ಯಕ್ಷ ಕೆ.ಕೆಂಪಲಿಂಗರಾಜು ಅವರು ಮೈಸೂರು ರಾಜ್ಯವು ಕರ್ನಾಟಕ ಎಂದು ನಾಮಕರಣವಾದ ಇತಿಹಾಸವನ್ನು ತಿಳಿಸಿಕೊಟ್ಟರು. ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಮಕ್ಕಳಿಗೆ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆ ಮತ್ತು ಕನ್ನಡ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಕೊನೆಯಲ್ಲಿ ಸಮೂಹ ಗಾಯನ, ಸಮೂಹ ನೃತ್ಯ ಮತ್ತು ಡೊಳ್ಳು ಕುಣಿತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ನಂತರ ಮಕ್ಕಳ ದಿನಾಚರಣೆ ಪ್ರಯುಕ್ತ ಮಕ್ಕಳಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು

ನಿರೂಪಣೆಯನ್ನು ಸಹಶಿಕ್ಷಕಿಯಾದ ಶ್ರೀಮತಿ ಸೌಮ್ಯ ಕೆ.ಆರ್. ಸ್ವಾಗತವನ್ನು ಮುಖ್ಯೋಪಾಧ್ಯಾಯರಾದ ಜಿ.ಎನ್.ವಿಶ್ವನಾಥ್‌ರವರು ಹಾಗೂ ವಂದನಾರ್ಪಣೆಯನ್ನು ಸಹಶಿಕ್ಷಕಿಯಾದ ಶ್ರೀಮತಿ ಶೃತಿ ಹೆಚ್.ಆರ್.ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಕಾಲೇಜಿನ ಶಿಕ್ಷಕ–ಶಿಕ್ಷಕೇತರರು, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು.

ನ.24, 25ರಂದು ಬಿ.ಎಸ್.ಪಂಡಿತ್ ಸ್ಮಾರಕ ಸಂಗೀತ ಗೋಷ್ಠಿ 'ಸರಸ್ವತಿ'

ಮೈಸೂರು, ನ. 20– ಮೈಸೂರಿನ ಗೀತಾ ಶಿಶು ಶಿಕ್ಷಣ ಸಂಘದ ವತಿಯಿಂದ ಶಿಕ್ಷಣ ತಜ್ಞರು ಮತ್ತು ಜಿಎಸ್‌ಎಸ್‌ಎಸ್ ಸ್ಥಾಪಕ ಕಾರ್ಯದರ್ಶಿಗಳಾದ ದಿವಂಗತ ಬಿ.ಎಸ್. ಪಂಡಿತ್ ಅವರ ಸ್ಮರಣಾರ್ಥ ನ. 24 ಮತ್ತು 25ರಂದು ಕೆ.ಆರ್.ಎಸ್. ರಸ್ತೆಯಲ್ಲಿರುವ ಜಿಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯದ ಎಂ. ಗೋವಿಂದರಾವ್ ಸ್ಮಾರಕ ಸಭಾಂಗಣದಲ್ಲಿ ಬಿ.ಎಸ್.ಪಂಡಿತ್ ಸ್ಮಾರಕ ಸಂಗೀತಗೋಷ್ಠಿ 'ಸರಸ್ವತಿ'ಯನ್ನು ಆಯೋಜಿಸಲಾಗಿದೆ.

ನ. 24 ರಂದು ಸಂಜೆ 6.30ಕ್ಕೆ ಖ್ಯಾತ ಕಲಾವಿದೆ ಪ್ರಿಯದರ್ಶಿನಿ ಗೋವಿಂದ್ ಅವರಿಂದ ಭರತನಾಟ್ಯ ಪ್ರದರ್ಶನವಿದೆ. ಇವರಿಗೆ ತಮಿಳುನಾಡು ಸರ್ಕಾರದಿಂದ ಪ್ರತಿಷ್ಠಿತ ಕಲೈಮಾಮಣಿ ಪ್ರಶಸ್ತಿ, ಶ್ರೀ ಕೃಷ್ಣ ಗಾನಸಭಾ ವತಿಯಿಂದ ನೃತ್ಯ ಚೂಡಾಮಣಿ ಪ್ರಶಸ್ತಿ, ಯುವಕಲಾ ಭಾರತಿ ಪ್ರಶಸ್ತಿ, ಭಾರತ ಸರ್ಕಾರದ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ವಿದ್ವಾನ್ ಎಸ್.ಶಕ್ತಿವೇಲ್ ಮುರುಗನಾಥಂ–ಮೃದಂಗ, ವಿದ್ವಾನ್ ಎನ್. ಸಿಗಮಣಿ –ಪಿಟೀಲು ಮತ್ತು ವಿದ್ವಾನ್ ಕೆ.ಆರ್. ಲೋಕೇಶ್ ರಾವ್ ನಟುವಂಗದಲ್ಲಿ ಸಹಕಾರ ನೀಡಲಿದ್ದಾರೆ.

ನ. 25 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 12.30ರವರೆಗೆ ಯುವ ಗಾಯಕಿ ಕು. ಸ್ಫೂರ್ತಿರಾವ್ ಅವರಿಂದ ಕರ್ನಾಟಕ ಸಂಗೀತ ಗಾಯನವಿದೆ. ಇವರು ವಿಜಯ್ ಟಿವಿಯ ಸಂಗೀತ ರಿಯಾಲಿಟಿ ಶೋ ವಿನ್ನರ್. ಕೆನಡಾ, ಆಸ್ಟ್ರೇಲಿಯಾ, ಅರೆನಾ–ಲಂಡನ್, ಸಿಂಗಾಪುರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಎಸ್.ಪಿ. ಬಾಲಸುಬ್ರಮಣ್ಯಂ, ಶಂಕರ್ ಮಹದೇವನ್, ಕೆ.ಎಸ್. ಚಿತ್ರಾ, ವಿಜಯ್ ಪ್ರಕಾಶ್ ಸೇರಿದಂತೆ ಇತರರೊಂದಿಗೆ ಹಾಡಿದ್ದಾರೆ. ಎಂಟನೇ ವಯಸ್ಸಿನಲ್ಲಿ ಆಕಾಶವಾಣಿ 'ಎ' ಗ್ರೇಡ್ ಕಲಾವಿದೆಯಾಗಿ ಆಯ್ಕೆಯಾಗಿದ್ದರು. ವಿದ್ವಾನ್ ಎಚ್.ಎನ್.ಭಾಸ್ಕರ್–ಪಿಟೀಲು, ವಿದ್ವಾನ್ ಕೆ.ವಿ. ಪ್ರಸಾದ್–ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ. ಕಾರ್ಯಕ್ರಮದ ಸ್ಥಳಕ್ಕೆ ತೆರಳಲು, ಕೃಷ್ಣಧಾಮ, ಟಿ.ಕೆ. ಲೇಔಟ್, ಗಾನಭಾರತಿ, ಕುವೆಂಪುನಗರ, ಶ್ರೀ ನಾದ ಬ್ರಹ್ಮ ಸಂಗೀತ ಸಭಾ, ಲಕ್ಷ್ಮೀಪುರಂ, ಜವರೇಗೌಡ ಪಾರ್ಕ್, ಸರಸ್ವತಿಪುರಂ, ಆಟೋ ಸ್ಟ್ಯಾಂಡ್, ರಾಮಸ್ವಾಮಿ ಸರ್ಕಲ್, ಒಂಟಿಕೊಪ್ಪಲು, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಜಿಎಸ್‌ಎಸ್‌ಎಸ್ ಶಾಲೆ, ಸಿದ್ಧಾರ್ಥನಗರ ಮತ್ತು 8ನೇ ಕ್ರಾಸ್, ವಿ.ವಿ. ಮೊಹಲ್ಲಾ ಹಾಗೂ ಇನ್ನಿತರ ಭಾಗಗಳಿಂದ ಬಸ್ ಸೌಕರ್ಯ ಕಲ್ಪಿಸಲಾಗಿದೆ. ನ. 24ರಂದು ಬಸ್ ಸಂಜೆ 4.30ಕ್ಕೆ ಮತ್ತು ಕಾರ್ಯಕ್ರಮ ಮುಗಿದ ನಂತರ ಹೊರಡುವ ಸಮಯ ಸರಿ ಸುಮಾರು ರಾತ್ರಿ 9ಗಂಟೆಗೆ ಹೊರಡಲಿದೆ. ನ. 25 ರಂದು ಬೆಳಗ್ಗೆ 9ಗಂಟೆಗೆ ಮತ್ತು ಕಾರ್ಯಕ್ರಮ ಮುಗಿದ ನಂತರ ಮಧ್ಯಾಹ್ನ 1 ಗಂಟೆಗೆ ಹೊರಡಲಿದೆ. ಹೆಚ್ಚಿನ ಮಾಹಿತಿಗೆ ಎಸ್. ನವೀನ್‌ಕುಮಾರ್, ಮೊ. 9611959996 ಸಂಪರ್ಕಿಸಬಹುದು.

ಮೈಸೂರು ಮಿತ್ರ ಮಂಗಳವಾರ 21 ನವೆಂಬರ್ 2023

ಭಾರತ 2047ರ ವೇಳೆಗೆ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಎಲ್ಲರೂ ಕೈಜೋಡಿಸಬೇಕು

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ 14ನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗದ ಅಧ್ಯಕ್ಷ ಪ್ರೊ.ಎಂ.ಜಗದೀಶಕುಮಾರ್ ಸಲಹೆ



ಮೈಸೂರಿನ ಶಿವರಾತ್ರೀಶ್ವರನಗರದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಸಂಸ್ಥೆಯ 14ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ ಬೆಟಸೂರಮಠ, ಕುಲಪತಿ ಡಾ. ಸುರೀಂದರ್ ಸಿಂಗ್, ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಯುಜಿಸಿ ಅಧ್ಯಕ್ಷ ಪ್ರೊ.ಎಂ.ಜಗದೀಶಕುಮಾರ್, ಪ್ರೊ-ಚಾನ್ಸೆಲರ್ ಡಾ. ಬಿ. ಸುರೇಶ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ನ.20(ಆರ್‌ಕೆ)–ಭಾರತ 2047ರ ವೇಳೆಗೆ ವಿಶ್ವದ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಎಲ್ಲರೂ ಕೈಜೋಡಿಸಬೇಕೆಂದು ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗ (ಯುಜಿಸಿ)ದ ಅಧ್ಯಕ್ಷ ಪ್ರೊ. ಎಂ. ಜಗದೀಶಕುಮಾರ್ ವಿದ್ಯಾರ್ಥಿಗಳಿಗೆ ಇಂದಿಲ್ಲಿ ಸಲಹೆ ನೀಡಿದರು.

ಮೈಸೂರಿನ ಶ್ರೀ ಶಿವರಾತ್ರೀಶ್ವರನಗರದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (JSS AHER) ಆವರಣದಲ್ಲಿ ಆಯೋಜಿಸಿದ್ದ ಸಂಸ್ಥೆಯ 14ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಘಟಿಕೋತ್ಸವ ಭಾಷಣ ಮಾಡಿದ ಅವರು, ವಿದ್ಯಾರ್ಥಿಗಳು ನಿರಂತರವಾಗಿ ಅಧ್ಯಯನ ನಡೆಸಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಹೊಂದಬೇಕು ಎಂದರು.

ಬದಲಾಗುತ್ತಿರುವ ಪ್ರಪಂಚದ ಅವಕಾಶಗಳನ್ನು ಬಳಸಿಕೊಂಡು ಎದುರಾಗುವ ಸವಾಲುಗಳನ್ನು ಸ್ಫೂರ್ತಿಯಿಂದ ಎದುರಿಸಬೇಕು. ನಿರಂತರ ಕಲಿಕೆ ಮೂಲಕ ಜೀವನದಲ್ಲಿ ಬೆಳೆಯಬೇಕು ಎಂದ ಅವರು, 2047ರ ವೇಳೆಗೆ ಭಾರತ ವಿಶ್ವದ ಸಂಪೂರ್ಣ ಅಭಿವೃದ್ಧಿ ಹೊಂದಿದ ದೇಶವಾಗಲು ನಿಮ್ಮ ವಿದ್ಯಾಭ್ಯಾಸವನ್ನು ಸಮರ್ಥವಾಗಿ ಬಳಸಿ ಕೈಜೋಡಿಸಬೇಕೆಂದು ಕರೆ ನೀಡಿದರು.

ಸಂಸ್ಥೆಯಲ್ಲಿ ಪಡೆದ ವಿದ್ಯಾಭ್ಯಾಸ, ಜ್ಞಾನ ಮತ್ತು ವೃತ್ತಿಯನ್ನು ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಬಳಸಿ, ಆ ಮೂಲಕ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಬೇಕು. ಬದಲಾಗುತ್ತಿರುವ ಸಾಮಾಜಿಕ–ಆರ್ಥಿಕ ಮತ್ತು ನೈಸರ್ಗಿಕ ವಾತಾವರಣದಲ್ಲಿ ತಾವು ಭಾಗಿಗಳಾಗುವ ಅಗತ್ಯವಿದೆ ಎಂದು ಪ್ರೊ. ಜಗದೀಶ ಕುಮಾರ್ ಇದೇ ವೇಳೆ ತಿಳಿಸಿದರು

ಬದಲಾಗುತ್ತಿರುವ ಪ್ರಪಂಚದ ಸವಾಲುಗಳು ಮತ್ತು ಅವಕಾಶಗಳು, ಆರ್ಥಿಕ ಪದ್ಧತಿ ಕ್ಲೈಮೇಟ್ ಚೇಂಜ್‌ಗೆ ನೀವು ಹೊಂದಿಕೊಂಡು ವಿಶ್ವದ 5ನೇ ಅತೀ ದೊಡ್ಡ ಆರ್ಥಿಕತೆಯನ್ನು ಭಾರತ ಸಾದರಪಡಿಸುವ ಅಗತ್ಯವಿದೆ ಎಂದ ಅವರು, ಪಟನಂ (ಅಧ್ಯಯನ), ಮನನಂ (ಅರ್ಥ ಮಾಡಿಕೊಳ್ಳುವುದು), ಚಿಂತನಂ (ಚಿಂತನೆ) ಹಾಗೂ ಸಂಕೀರ್ತನಂ (ಪುನರಾವರ್ತನೆ) ಎಂಬ ಪದಗಳನ್ನು ಅರ್ಥ ಮಾಡಿಕೊಳ್ಳಬೇಕೆಂದು ಪ್ರೊ. ಜಗದೀಶಕುಮಾರ್ ನುಡಿದರು.

ಬಹು ಉದ್ದೇಶಿತ ಅಧ್ಯಯನದಿಂದಾಗಿ ರಾಷ್ಟ್ರೀಯ ಶಿಕ್ಷಣ ನೀತಿ (NEP-2020)ಯನ್ನು ಅನುಷ್ಠಾನಗೊಳಿಸಿ ದೇಶಾದ್ಯಂತ ಗುಣಾತ್ಮಕ ಹಾಗೂ ಏಕ ರೂಪದ ಶಿಕ್ಷಣ ನೀಡುವ ವ್ಯವಸ್ಥೆಯಿಂದ ಸರ್ವರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ನಾವು ಸಹಕರಿಸಬೇಕು ಎಂದ ಅವರು, ನಿರಂತರ ಕಲಿಕೆ ಜೊತೆಗೆ ಬರುವ ತೊಂದರೆಯನ್ನು ಎದುರಿಸುವ ಸಾಮರ್ಥ್ಯ ಹೊಂದುವ ಅಗತ್ಯವಿದೆ ಎಂದು ಇದೇ ಸಂದರ್ಭ ಅಭಿಪ್ರಾಯಪಟ್ಟರು.

ಟೀಂ ಪ್ಲೇಯರ್, ಒಳ್ಳೆಯ ಸಂವಹನಕಾರ ಹಾಗೂ ಉತ್ತಮ ಚಿಂತಕನಾಗಿ ವಿದ್ಯಾರ್ಥಿಗಳು ರೂಪುಗೊಳ್ಳಬೇಕು, ಮೈತಾಲಜಿಕಲ್ ಗುಣ ಹೊಂದಿರುವ ನಚಿಕೇತ ಮತ್ತು ಲಾರ್ಡ್ ಯಮ ಹಾಗೂ ರಕ್ಷಣಾ ಸಂಶೋಧನೆಯಲ್ಲಿ ಅಗ್ನಿ–4 ಮಿಸೈಲ್ ಪ್ರಾಜೆಕ್ಟ್ ಡೈರೆಕ್ಟರ್ ಆದ ಟೆಸ್ಸಿ ಥಾಮಸ್ ಮತ್ತು ಅಭಿವೃದ್ಧಿ ಸಂಸ್ಥೆಯ ಚಿಂತನಕಾರರಂತೆ ವಿದ್ಯಾರ್ಥಿಗಳು ತಯಾರಾಗಬೇಕಿದೆ ಎಂದು ಪ್ರೊ. ಜಗದೀಶಕುಮಾರ್ ಇದೇ ವೇಳೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು

ಉನ್ನತ ಶಿಕ್ಷಣ ಸಂಸ್ಥೆಗಳೂ ಶೈಕ್ಷಣಿಕ ಮತ್ತು ಸಂಶೋಧನಾ ಉತ್ಕೃಷ್ಟತೆ ಹೆಚ್ಚಿಸಿ ಸ್ಥಳೀಯ, ರಾಷ್ಟ್ರೀಯ ಮತ್ತು ವಿಶ್ವ ಮಟ್ಟದ ಸವಾಲುಗಳು ಮತ್ತು ಅವಕಾಶಗಳಿಗೆ ಪೂರಕವಾಗಿ ಸಿದ್ಧತೆ ನಡೆಸುವ ಅಗತ್ಯವಿದೆ. ಅಲ್ಲದೆ ನೈಸರ್ಗಿಕ ವಾತಾವರಣವನ್ನು ಸೃಷ್ಟಿಸಬೇಕಿದೆ ಎಂದು ಅವರು ನುಡಿದರು. ಸುತ್ತೂರು ಮಠಾಧೀಶರಾದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಚಾನ್ಸೆಲರ್ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ಎಕ್ಸಿಕ್ಯೂಟಿವ್ ಸೆಕ್ರೆಟರಿ ಡಾ.ಸಿ.ಜಿ.ಬೆಟಸೂರಮಠ, ಪ್ರೋ ಚಾನ್ಸೆಲರ್ ಡಾ.ಬಿ.ಸುರೇಶ್, ಕುಲಪತಿ ಡಾ.ಸುರೀಂದರ್‌ಸಿಂಗ್, ಕುಲಸಚಿವ ಡಾ.ಬಿ.ಮಂಜುನಾಥ, ಪರೀಕ್ಷಾ ನಿಯಂತ್ರಕ ಡಾ. ಆರ್. ಸುಧೀಂದ್ರ ಭಟ್, ವಿವಿಧ ವಿಭಾಗಗಳ ಡೀನ್‌ಗಳಾದ ಡಾ. ಬಸವನಗೌಡಪ್ಪ, ಡಾ.ಎಂ.ಆರ್. ದಾಕ್ಷಾಯಿಣಿ, ಡಾ.ಡಿ.ಎಂ.ಪ್ರಮೋದಕುಮಾರ್, ಡಾ. ಸುಮಾ, ಡಾ. ಅಮಿತಾ, ಡಾ. ಕೆ. ಅಭೀಶ, ಡಾ.ಹೆಚ್.ಕೆ. ಮಮತಾ ಸೇರಿದಂತೆ ಹಲವರು ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ವಿವಿಧ ನಿಕಾಯಗಳ 2546 ಅಭ್ಯರ್ಥಿಗಳಿಗೆ ಪದವಿ, ಡಿಪ್ಲೊಮಾ ಪ್ರಮಾಣ ಪತ್ರಗಳು, 49 ವಿದ್ಯಾರ್ಥಿಗಳಿಗೆ ಡಾಕ್ಟರ್ ಆಫ್ ಫಿಲಾಸಫಿ, 55 ವಿದ್ಯಾರ್ಥಿಗಳಿಗೆ 84 ಚಿನ್ನದ ಪದಕ ಹಾಗೂ ಪ್ರಶಸ್ತಿಗಳನ್ನು ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಎನ್‌ಇಪಿ ಅಳವಡಿಸಿಕೊಳ್ಳದಿದ್ದರೆ ವಿದ್ಯಾರ್ಥಿಗಳಿಗೆ ಜಾಗತಿಕ ಅವಕಾಶ ಸಿಗದು

ಯುಜಿಸಿ ಅಧ್ಯಕ್ಷ ಪ್ರೊ ಎಂ.ಜಗದೀಶಕುಮಾರ್ ಅಭಿಮತ



ಪ್ರೊ.ಎಂ.ಜಗದೀಶಕುಮಾರ್

ಮೈಸೂರು, ನ.20(ಆರ್‌ಕೆ)– 2020ರಲ್ಲಿ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯನ್ನು ಅಳವಡಿಸಿಕೊಳ್ಳದಿದ್ದಲ್ಲಿ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಅವಕಾಶಗಳು ಕೈತಪ್ಪಲಿವೆ ಎಂದು ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗ (ಯುಜಿಸಿ)ದ ಅಧ್ಯಕ್ಷ ಪ್ರೊ. ಎಂ.ಜಗದೀಶಕುಮಾರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏಕ ಕಾಲದಲ್ಲಿ ಎರಡು ಪದವಿ ಅಧ್ಯಯನ, ಸಾಮರ್ಥ್ಯ ವೃದ್ಧಿಯಂತಹ ಅಂಶಗಳೊಂದಿಗೆ ಪಠ್ಯಕ್ರಮ ಅಳವಡಿಸಿ ಜಾರಿಗೆ ತಂದಿರುವ ಎನ್‌ಇಪಿ–2020ಯಿಂದಾಗಿ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳಿವೆ ಎಂದರು. ವಿದೇಶಿ ವಿದ್ಯಾರ್ಥಿಗಳಿಗೂ ಭಾರತದಲ್ಲಿ ಶಿಕ್ಷಣ ನೀಡಲು ಅವಕಾಶವಿದೆ. ನಮ್ಮ ದೇಶದಲ್ಲಿ 4 ಕೋಟಿ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣ ಪಡೆಯುತ್ತಿದ್ದು, 100 ವಿಶ್ವವಿದ್ಯಾನಿಲಯಗಳು ಕಾರ್ಯ ನಿರ್ವಹಿಸುತ್ತಿವೆ. ಪ್ರತಿಯೊಬ್ಬರಿಗೂ ಉನ್ನತ ಶಿಕ್ಷಣ ಲಭಿಸಬೇಕೆಂಬ ಉದ್ದೇಶದಿಂದ ವಿದೇಶಿ ವಿಶ್ವವಿದ್ಯಾನಿಲಯಗಳಿಗೂ ಅವಕಾಶ ನೀಡಲಾಗುತ್ತಿದೆ. ಕ್ಯಾಂಪಸ್ ನಿರ್ಮಿಸಲು 2 ವರ್ಷ ಕಾಲಾವಕಾಶ ನೀಡಿದೆಯಲ್ಲದೆ, ಭಾರತೀಯ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಶೇ 30ರಷ್ಟು ರಿಯಾಯಿತಿ, ವಿದ್ಯಾರ್ಥಿ ವೇತನಕ್ಕೆ ಅವಕಾಶ ಕಲ್ಪಿಸಲಿದೆ ಎಂದು ಅವರು ತಿಳಿಸಿದರು

ಭಾರತದಲ್ಲಿ ಡಿಜಿಟಲ್ ವಿಶ್ವವಿದ್ಯಾನಿಲಯ ಸ್ಥಾಪನೆಗೆ ತಯಾರಿ ನಡೆಸಲಾಗುತ್ತಿದ್ದು, ಅದರಿಂದ ವೃತ್ತಿಪರ ಕೋರ್ಸ್ ಅಭ್ಯಾಸಕ್ಕೆ ಅನುಕೂಲವಾಗಲಿದೆಯಲ್ಲದೆ, ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಪಡೆಯಲು ಅನುಕೂಲವಾಗಲಿದೆ ಎಂದು ಪ್ರೊ. ಜಗದೀಶಕುಮಾರ್ ತಿಳಿಸಿದರು. ದೇಶದ 21 ಉನ್ನತ ಶಿಕ್ಷಣ ಕೌನ್ಸಿಲ್‌ಗಳನ್ನು ಒಂದೇ ವೇದಿಕೆಯಡಿ ತರಲು ಉನ್ನತ ಶಿಕ್ಷಾ ನಿಯಂತ್ರಾ ಮಂಡಳಿ ಯತ್ನಿಸುತ್ತಿದೆ ಅದರಿಂದ ನ್ಯಾಕ್ ಸಮಿತಿಯು ಕಾಲೇಜುಗಳ ಮಾನ್ಯತೆ, ವಿವಿಧ ದರ್ಜೆ ನೀಡಲು ಅನುಕೂಲವಾಗಲಿದೆ. ಈ ಸಂಬಂಧ ಸಂಸತ್‌ನಲ್ಲಿ ಮಸೂದೆ ಮಂಡಿಸಿ ಅನುಮೋದನೆ ಸಿಕ್ಕಿದ ಬಳಿಕವೇ ಅನುಷ್ಠಾನ ಮಾಡಲಾಗುವುದು ಎಂದು ಅವರು ನುಡಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಿಯಮ ಉಲ್ಲಂಘನೆ ಆರೋಪಕ್ಕೆ ಪ್ರತಿಕ್ರಿಯಿಸಿದ ಪ್ರೊ. ಜಗದೀಶಕುಮಾರ್, ವಿಶ್ವವಿದ್ಯಾನಿಲಯಗಳು ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ತನಿಖಾ ಸಂಸ್ಥೆಗಳ ವರದಿ ಆಧರಿಸಿ ಯುಜಿಸಿ ಕ್ರಮ ವಹಿಸಲಿದೆ ಎಂದರು. ಆಯಾ ರಾಜ್ಯ ಸರ್ಕಾರಗಳು ವಿಶ್ವವಿದ್ಯಾನಿಲಯಗಳಿಗೆ ಮೂಲ ಸೌಲಭ್ಯ ಒದಗಿಸಬೇಕು, ಗುಣಮಟ್ಟದ ಶಿಕ್ಷಣಕ್ಕೆ ಪೂರಕ ವಾತಾವರಣ ಕಲ್ಪಿಸುವ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮ ಉನ್ನತ ಶಿಕ್ಷಣ ನೀಡಲು ಸಹಕರಿಸಬೇಕು ಎಂದು ಅವರು ನುಡಿದರು.

ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಗೆ ಭಾರತ ತಂಡ ಪ್ರಕಟ

ಹೊಸದಿಲ್ಲಿ, ನ.20– ಮುಂಬರುವ ಆಸ್ಟ್ರೇಲಿಯಾ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಗೆ 15 ಸದಸ್ಯರ ಭಾರತ ತಂಡವನ್ನು ಬಿಸಿಸಿಐ ಸೋಮವಾರ ರಾತ್ರಿ ಪ್ರಕಟಿಸಿದೆ. ನ.23 ರಿಂದ ಟಿ20 ಸರಣಿ ಆರಂಭವಾಗಲಿದ್ದು, ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಸೂರ್ಯ ಕುಮಾರ್ ಯಾದವ್‌ಗೆ ನಾಯಕತ್ವ ನೀಡಲಾಗಿದೆ. ನ್ಯಾಷನಲ್ ಕ್ರಿಕೆಟ್ ಅಕಾಡೆಮಿ ನಿರ್ದೇಶಕ ವಿವಿಎಸ್ ಲಕ್ಷ್ಮಣ್ ಈ ಸರಣಿಯಲ್ಲಿ ಭಾರತ ತಂಡದ ಕೋಚ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ.




ಸೂರ್ಯಕುಮಾರ್ ಯಾದವ್

ಐರ್ಲೆಂಡ್ ವಿರುದ್ಧ ಕಳೆದ ಟಿ20 ಸರಣಿ ಆಡಿದ್ದ ಬಹುತೇಕ ಆಟಗಾರರನ್ನೇ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಗೆ ಉಳಿಸಿಕೊಳ್ಳಲಾಗಿದೆ. ಆದರೆ, ಹಿರಿಯ ವೇಗಿ ಜಸ್‌ಪ್ರೀತ್ ಬುಮ್ರಾಗೆ ವಿರಾಮ ನೀಡಲಾಗಿದೆ. ಭಾರತ ವಿಶ್ವಕಪ್ ತಂಡದಲ್ಲಿದ್ದ ಕರ್ನಾಟಕ ವೇಗಿ ಪ್ರಸಿದ್ಧ ಕೃಷ್ಣ ಅವರು ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಯಲ್ಲಿಯೂ ಮುಂದುವರಿಯಲಿದ್ದಾರೆ. ಹಾರ್ದಿಕ್ ಪಾಂಡ್ಯ ಪಾದದ ಗಾಯಕ್ಕೆ ಒಳಗಾಗಿದ್ದು, ಅವರು ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಹಾಗಾಗಿ ಅವರು ಅಲಭ್ಯರಾಗಿದ್ದಾರೆ. ಇವರ ಅನುಪಸ್ಥಿತಿಯಲ್ಲಿ ಸೂರ್ಯ ಕುಮಾರ್ ಯಾದವ್‌ಗೆ ನಾಯಕತ್ವ ಪಟ್ಟ ನೀಡಲಾಗಿದೆ. ಶ್ರೇಯಸ್ ಅಯ್ಯರ್ ಬೆಂಗಳೂರು ಹಾಗೂ ರಾಯ್ಪುರದಲ್ಲಿ ನಡೆಯುವ ಕೊನೆ 2 ಪಂದ್ಯಗಳಿಗೆ ತಂಡಕ್ಕೆ ಉಪ ನಾಯಕನಾಗಿ ಸೇರ್ಪಡೆಯಾಗಲಿದ್ದಾರೆ.

ಸಂಜು ಸ್ಯಾಮ್ಸನ್‌ಗೆ ಅವಕಾಶ ವಿಲ್ಲ: ಐರ್ಲೆಂಡ್ ವಿರುದ್ಧ ಕಳೆದ ಟಿ20 ಸರಣಿಯಲ್ಲಿ ಭಾರತ ತಂಡದ ಪರ ಆಡಿದ್ದ ಸಂಜು ಸ್ಯಾಮ್ಸನ್ ಅವರನ್ನು ಆಸ್ಟ್ರೇಲಿಯಾ ಟಿ20 ಸರಣಿಯಿಂದ ಕೈ ಬಿಡಲಾಗಿದೆ. ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿ ಇಶಾನ್ ಕಿಶನ್ ಮತ್ತು ಜಿತೇಶ್ ಶರ್ಮಾ ಅವರಿಗೆ ಅವಕಾಶ ನೀಡಲಾಗಿದೆ.

ಭಾರತ ಟಿ20 ತಂಡ: ಸೂರ್ಯ ಕುಮಾರ್ ಯಾದವ್ (ನಾಯಕ), ಋತುರಾಜ್ ಗಾಯಕ್ವಾಡ್ (ಉಪ ನಾಯಕ), ಇಶಾನ್ ಕಿಶನ್, ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ರಿಂಕು ಸಿಂಗ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಶಿವಂ ದುಬೆ, ರವಿ ಬಿಷ್ಣೋಯ್, ಅರ್ಷ ದೀಪ್‌ಸಿಂಗ್, ಪ್ರಸಿದ್ಧ ಕೃಷ್ಣ, ಅವೇಶ್ ಖಾನ್, ಮುಖೇಶ್ ಕುಮಾರ್, ಶ್ರೇಯಸ್ ಅಯ್ಯರ್ (ಕೊನೆಯ ಎರಡು ಪಂದ್ಯಗಳಿಗೆ)

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮಕ್ಕೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ



ಮೈಸೂರು, ನ.20(ಬಿಎಲ್‌ಯು)– ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಇಂದು ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ನೀಡಿದ್ದರು. ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಅವರನ್ನು ಭೇಟಿ ಮಾಡಿದ ವಿಜಯೇಂದ್ರ, ಅವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಸ್ವಾಮೀಜಿ ಅವರು ವಿಜಯೇಂದ್ರ ಅವರಿಗೆ ವಿವೇಕಾನಂದ ಅವರ ಭಾವಚಿತ್ರವಿರುವ ಸ್ಮರಣಿಕೆ ನೀಡಿ, ಸನ್ಮಾನಿಸಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀ ವಿವೇಕಾನಂದ ಸ್ಮಾರಕದ ಬಗ್ಗೆ ಸ್ವಾಮೀಜಿ ಅವರು ವಿಜಯೇಂದ್ರ ಅವರಿಗೆ ಸಂಕ್ಷಿಪ್ತ ವಿವರ ನೀಡಿದರು. ಮೈಸೂರಿನಲ್ಲಿ ಜನವರಿ 5ರಿಂದ ಆರಂಭವಾಗುವ ಮೂರು ದಿನಗಳ ಅಖಿಲ ಕರ್ನಾಟಕ ಭಾವ ಪ್ರಚಾರ ಪರಿಷತ್ ವಾರ್ಷಿಕ ಸಮ್ಮೇಳನಕ್ಕೆ ವಿಜಯೇಂದ್ರ ಅವರನ್ನು ಈ ವೇಳೆ ಸ್ವಾಮೀಜಿ ಆಹ್ವಾನಿಸಿದರು. ಶ್ರೀ ರಾಮಕೃಷ್ಣ ವಿದ್ಯಾಶಾಲಾದ ಕರಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದ, ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಕರಸ್ಪಾಂಡೆಂಟ್ ಸ್ವಾಮಿ ಮಹಮೇಧಾನಂದ, ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಹೇಮಂತ್ ಕುಮಾರ್, ಸಂಸದ ಪ್ರತಾಪ್ ಸಿಂಹ, ‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಎನ್.ಮಹೇಶ್, ಬಿ.ಬಾಲರಾಜ್, ಸಿ.ಎಸ್.ನಿರಂಜನ್ ಕುಮಾರ್, ಸಿ.ಹೆಚ್.ವಿಜಯಶಂಕರ್, ಬಿಜೆಪಿ ಮುಖಂಡ ರಘು ಕೌಟಿಲ್ಯ, ಹಿರಿಯ ವಕೀಲ ಅರುಣ್‌ಕುಮಾರ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನ.27ರಂದು ಕೊಡವ ಸಮಾಜದಲ್ಲಿ ಪುತ್ತರಿ ನಮ್ಮೆ, ನ.21ರಿಂದ 25ರವರೆಗೆ ಈಡು ಕಾರ್ಯಕ್ರಮ

ಮೈಸೂರು, ನ. 20–ಮೈಸೂರಿನ ಕೊಡವ ಸಮಾಜದ ಆಡಳಿತ ಮಂಡಳಿಯು ನ. 27 ರಂದು ವಿಜಯನಗರದಲ್ಲಿರುವ ಕೊಡವ ಸಮಾಜದ ಗುರುಮನೆ ಸಭಾಂಗಣದಲ್ಲಿ ಪುತ್ತರಿ ನಮ್ಮೆ–2023 ಆಚರಿಸಲು ನಿರ್ಧರಿಸಲಾಗಿದೆ.

ಈ ವರ್ಷದ ಸುಗ್ಗಿ ಹಬ್ಬದ ಸಂಭ್ರಮ ಅಂದು ಸಂಜೆ 5.30ಕ್ಕೆ ಕೊಡವರ ಎಲ್ಲಾ ಸಾಂಪ್ರದಾಯಿಕ ನೃತ್ಯ ಪ್ರದರ್ಶನಗಳೊಂದಿಗೆ ಆರಂಭವಾಗುವುದು. ಸಂಜೆ 7.45ಕ್ಕೆ ನೆರೆ ಕಟ್ಟುವ ಆಚರಣೆ, ರಾತ್ರಿ 8.45ಕ್ಕೆ ಕದ್ ಇಡುಪಾ (ಹೊಸ ಭತ್ತದ ಬೆಳೆ ಕಟಾವು) ನಡೆದ ನಂತರ ತಂಬುಟ್ ಪ್ರಸಾದ ವಿತರಣೆಯಾಗಲಿದೆ. ಪುತ್ತರಿ ನಮ್ಮೆಗೆ ಮುನ್ನುಡಿಯಾಗಿ ನ.2ರಿಂದ 25ರವರೆಗೆ ಸಂಜೆ 6 ಗಂಟೆಯ ನಂತರ ಐದು ದಿನಗಳ ಕಾಲ ಈಡು ಕಾರ್ಯಕ್ರಮವನ್ನು ಸಾಂಪ್ರದಾಯಿಕ ಕೊಡವ ನೃತ್ಯಗಳ ಪ್ರದರ್ಶನದೊಂದಿಗೆ ಸಮಾಜದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಮಾಜದ ಗೌರವ ಕಾರ್ಯದರ್ಶಿ ಕೆಟೋಲಿರಾ ಎ. ಬೆಳ್ಳಿಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಳ್ಳೆಯ ಸಂಸ್ಕಾರಕ್ಕೆ ಸಂಗೀತ ಕಲಿಸಿ

ಉದ್ಯಮಿ ಜಗನ್ನಾಥ ಶೆಣೈ ಸಲಹೆ



ಮೈಸೂರಿನಲ್ಲಿ ಸ್ವರಸಂಕುಲ ಸಂಗೀತ ಸಭಾದಲ್ಲಿ ಸೋಮವಾರ ಏರ್ಪಡಿಸಿದ್ದ ಪಂ. ರಾಮರಾವ್ ನಾಯಕ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಉದ್ಯಮಿ ಜಗನ್ನಾಥ ಶೆಣೈ ಅವರನ್ನು ಸನ್ಮಾನಿಸಲಾಯಿತು. ಪಂ.ವೀರಭದ್ರಯ್ಯ ಹಿರೇಮಠ, ಡಾ.ಎಂ.ಎಸ್.ಭಾಸ್ಕರ್ ಹಾಗೂ ಜಯರಾಮ್ ಪಾಟೀಲ ಇದ್ದಾರೆ.

ಮೈಸೂರು: ಒಳ್ಳೆಯ ಆರೋಗ್ಯಕ್ಕೆ ಸಂಗೀತ ಕೇಳಿ, ಮಕ್ಕಳಿಗೆ ಸಂಗೀತ ಕಲಿಸುವ ಮೂಲಕ ಉತ್ತಮ ಪ್ರಜೆಗಳಾಗಲು ನೆರವಾಗಿ ಎಂದು ಖ್ಯಾತ ಉದ್ಯಮಿ, ಕಲಾ ಪೋಷಕರಾದ ಎಂ.ಜಗನ್ನಾಥ ಶೆಣೈ ಸಲಹೆ ನೀಡಿದರು.


ನಗರದ ಗಾನಭಾರತೀ ಸಭಾಂಗಣದಲ್ಲಿ ಸೋಮವಾರ ಪಂ.ರಾಮರಾವ್ ನಾಯಕ ಸ್ಮರಣಾರ್ಥ ಸ್ವರಸಂಕುಲ ಸಂಗೀತ ಸಭಾ ಏರ್ಪಡಿಸಿದ್ದ ಸಮಾರಂಭದಲ್ಲಿ ಸತ್ಕಾರ ಸ್ವೀಕರಿಸಿ ಅವರು ಮಾತನಾಡಿದರು.

ಮುಂದಿನ ಪೀಳಿಗೆ ಸಂಗೀತ ಕ್ಷೇತ್ರಕ್ಕೆ ಬರಬೇಕು. ಸಂಗೀತ ಕೇಳಬೇಕು ಮತ್ತು ಹಾಡಬೇಕು. ಇದರಿಂದ ಸಹೃದಯರಾಗಲು ಸಾಧ್ಯವಾಗುತ್ತದೆ. ಐದು ವರ್ಷ ಸಂಗೀತ ಕಲಿತರೆ ನಂತರ ಮುಂದುವರಿಸುತ್ತಾರೆ. ಇದರಿಂದ ಒಳ್ಳೆಯ ಸಂಸ್ಕಾರ ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾದ ರಂಗಕರ್ಮಿ ಜಯರಾಮ್ ಪಾಟೀಲ ಮಾತನಾಡಿ, ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಸಂಗೀತ ಕಲಿತವರು ನಾಡು ಹಾಗೂ ಹೊರನಾಡಿನಲ್ಲಿ ಪಸರಿಸಿದ್ದಾರೆ. ಇದಕ್ಕೆ ಪಂಚಾಕ್ಷರಿ ಗವಾಯಿಗಳು ಕಾರಣ. ಇವರ ನಂತರ ಪುಟ್ಟರಾಜ ಗವಾಯಿಗಳು ಸಂಗೀತ ಪರಂಪರೆ ಮುಂದುವರಿಸಿದರು ಎಂದರು. ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಕಲಿತ ಪಂ.ವೀರಭದ್ರಯ್ಯ ಹಿರೇಮಠ ಅವರು ಮೈಸೂರಿನಲ್ಲಿ ನೆಲೆಸಿ, ಅನೇಕ ಶಿಷ್ಯರಿಗೆ ಕಲಿಸುತ್ತಿದ್ದಾರೆ ಎಂದರು.

ಸಂಗೀತಕ್ಕೆ ಹಿಂದೆ ರಾಜಾಶ್ರಯವಿತ್ತು. ಈಗ ಸರ್ಕಾರದಿಂದಲೂ ಕಡಿಮೆ ಆಶ್ರಯ. ಇಂಥ ಸಂದರ್ಭದಲ್ಲಿ ಉದ್ಯಮಿ ಜಗನ್ನಾಥ ಶೆಣೈ ಅವರು ಸಂಗೀತ ಪೋಷಕರಾಗಿ ನೆರವಾಗುತ್ತಿದ್ದಾರೆ ಎಂದು ಶ್ಲಾಘಿಸಿದರು. ಸ್ವರಸಂಕುಲದ ಅಧ್ಯಕ್ಷ ಡಾ.ಎಂ.ಎಸ್.ಭಾಸ್ಕರ್ ಸ್ವಾಗತಿಸಿದರು. ನಂತರ ಅಮೃತಾ ಶೆಣೈ ಕಾಮತ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ ನೀಡಿದರು.

ಪರಿಶಿಷ್ಟರಿಗೆ ವಿಶೇಷ ಘಟಕ ಯೋಜನೆ ಹಣ ಬಳಕೆ ಮೌಲ್ಯಮಾಪನ

● ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾಹಿತಿ ● ಈ ಹಣವನ್ನು ಇತರ ಇಲಾಖೆಗಳು ದುರುಪಯೋಗಪಡಿಸಿಕೊಂಡಿರುವ ದೂರಿನ ಹಿನ್ನೆಲೆಯಲ್ಲಿ ಈ ನಿರ್ಧಾರ



ಬೆಂಗಳೂರು, ನ.20(ಕೆಎಂಶಿ)– ಪರಿಶಿಷ್ಟರ ಕಲ್ಯಾಣಕ್ಕೆ ವಿಶೇಷ ಘಟಕ ಯೋಜನೆ (ಎಸ್‌ಸಿಪಿ–ಟಿಎಸ್‌ಪಿ) ಅಡಿ ಒದಗಿಸಲಾಗಿರುವ ಹಣ ಬಳಕೆಯ ಬಗ್ಗೆ ಮೌಲ್ಯಮಾಪನ ಮಾಡಲಾಗುವುದೆಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಜನೆ ಅನುಷ್ಠಾನಗೊಂಡ ನಂತರ ಇದುವರೆಗೂ ಎರಡು ಲಕ್ಷ ಕೋಟಿ ರೂ. ಈ ಸಮಾಜದ ಕುಟುಂಬಗಳಿಗೆ ವೆಚ್ಚ ಮಾಡಲಾಗಿದ್ದು ಅದು ಸಮರ್ಪಕವಾಗಿ ಜಾರಿಗೊಂಡಿದೆಯೇ, ಇಲ್ಲವೇ ಎಂದು ತಿಳಿಯಲು ಮಾಲ್ಯ ಮಾಪನ ಮಾಡಲಾಗುತ್ತಿದೆ. ಎಸ್‌ಸಿ ಎಸ್‌ಟಿಗೆ ಮೀಸಲಿರಿಸಿದ ಈ ಹಣವನ್ನು ಕೆಲವು ಇಲಾಖೆಗಳು ದುರುಪಯೋಗಪಡಿಸಿಕೊಂಡಿವೆ ಎಂಬ ದೂರಿದೆ, ಜೊತೆಗೆ ಯೋಜನೆಯನ್ನು ಸಮರ್ಪಕವಾಗಿ ಕೆಲವು ಇಲಾಖೆಗಳು ಜಾರಿಗೊಳಿಸಿಲ್ಲ ಎಂಬ ದೂರಿನ ಮಾಹಿತಿ ಹಿನ್ನೆಲೆಯಲ್ಲಿ ಮಾಪನ ಮಾಡಲಾಗುತ್ತಿದೆ ಎಂದರು.

ಸರ್ಕಾರ ನೀಡಿರುವ ಯೋಜನೆ ಒಂದು ಕುಟುಂಬ ಸಮಾಜದ ಮುಖ್ಯ ವಾಹಿನಿಗೆ ಬಂದಿದೆಯೇ, ಇಲ್ಲವೇ, ಬರದಿದ್ದರೆ ಮತ್ತೆ ಎರಡನೇ ಬಾರಿಗೆ ಧನಸಹಾಯ ನೀಡಬೇಕೇ ಎಂದು ತಿಳಿಯಲು ನಮಗೆ ಈ ಬಗ್ಗೆ ಮಾಹಿತಿ ದೊರೆಯಲಿದೆ.

ಎಸ್.ಸಿ.ಪಿ–ಟಿ.ಎಸ್.ಪಿ ಕಾಯ್ದೆಯಡಿ ಪರಿಶಿಷ್ಟ ಜಾತಿ, ವರ್ಗಗಳಿಗೆ ಇದುವರೆಗೆ ನೀಡಿರುವ ಹಣ ಸಮರ್ಪಕವಾಗಿ ಬಳಕೆಯಾಗಿದೆಯೋ, ಇಲ್ಲವೋ ಎಂಬ ಅನುಮಾನವನ್ನು ದೂರ ಮಾಡಲು ಇಂತಹ ತೀರ್ಮಾನ ಕೈಗೊಂಡಿದ್ದೇವೆ.

ಈ ಮೌಲ್ಯಮಾಪನ ಕಾರ್ಯವನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ನೀಡುವಂತೆ ಸೂಚಿಸಲಾಗಿದ್ದು, ಈ ಮೌಲ್ಯಮಾಪನದ ವರದಿಯ ಆಧಾರದ ಮೇಲೆ ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಲು ಬಯಸಲಾಗಿದೆ ಎಂದರು. ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟರಿಗೆ ಮೀಸಲಾಗಿಟ್ಟ ಹಣವನ್ನು ಬೇರೆ ಕಡೆ ವರ್ಗಾಯಿಸುವಂತಿಲ್ಲವಾದರೂ ಅನಿವಾರ್ಯ ಸಂದರ್ಭಗಳಲ್ಲಿ ಸೆಕ್ಷನ್ 7ಡಿ ಅಡಿ ವರ್ಗಾವಣೆ ಮಾಡಲಾಗುತ್ತಿತ್ತು. ಆದರೆ ಈ ಸೆಕ್ಷನ್ ಅನ್ನು ತೆಗೆದುಹಾಕಲು ತೀರ್ಮಾನಿಸಲಾಗಿದ್ದು ಬೆಳಗಾವಿ ಅಧಿವೇಶನದಲ್ಲಿ ಈ ಕುರಿತ ತಿದ್ದುಪಡಿ ಕಾಯ್ದೆಯನ್ನು ಮಂಡಿಸಲಾಗುವುದು ಎಂದರು.

ಈ ಹಿಂದಿದ್ದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸೆಕ್ಷನ್ 7ಡಿ ಅನ್ನು ಬಳಸಿಕೊಂಡು ಪರಿಶಿಷ್ಟರಿಗೆ ಮೀಸಲಾಗಿಟ್ಟ ಹಣದಲ್ಲಿ 10 ಸಾವಿರ ಕೋಟಿ ರೂ.ಗಳನ್ನು ಬೇರೆ ಬೇರೆ ಇಲಾಖೆಗಳಿಗೆ ವರ್ಗ ಮಾಡಿತ್ತು ಎಂದು ನುಡಿದರು.

ಕಳೆದ ಸಾಲಿನಲ್ಲಿ ಕಾಯ್ದೆಯಡಿ ಪರಿಶಿಷ್ಟರಿಗೆ ಮೀಸಲಾಗಿಟ್ಟ ಹಣದಲ್ಲಿ ಶೇ.76 ರಷ್ಟು ಹಣವನ್ನು ವೆಚ್ಚ ಮಾಡಲಾಗಿತ್ತಾದರೆ, ನಾವು ಅಧಿಕಾರಕ್ಕೆ ಬಂದ ನಂತರ ಈ ವರ್ಷ ಶೇ.78 ರಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಎಂದು ವಿವರ ನೀಡಿದರು.

ಈ ವರ್ಷ ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆಯಡಿ ಮೂವತ್ತು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದ್ದು ನಿಗದಿತ ಅವಧಿಯೊಳಗಾಗಿ ಈ ಹಣವನ್ನು ವೆಚ್ಚ ಮಾಡಲಾಗುವುದು ಎಂದರು. ಈ ಮಧ್ಯೆ ರಾಜ್ಯದ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿಲ್ಲದ ಪರಿಶಿಷ್ಟರಿಗೆ ಸರ್ಕಾರದ ವೆಚ್ಚದಲ್ಲೇ ಸದಸ್ಯತ್ವ ಒದಗಿಸಿ ಕೊಡಲು ಸೂಚನೆ ನೀಡಲಾಗಿದೆ.

ರಾಜ್ಯಾದ್ಯಂತ ಪರಿಶಿಷ್ಟ ಜಾತಿ, ಪಂಗಡದ ಸುಮಾರು 15 ಲಕ್ಷ ಮಂದಿ ವ್ಯವಸಾಯ ಭೂಮಿ ಹೊಂದಿದ್ದರೂ ಶೇ.50ರಷ್ಟು ಮಂದಿಯ ಭೂಮಿಗೆ ಪೋಡಿ ಸಿಕ್ಕಿಲ್ಲ, ಇದೇ ಕಾರಣಕ್ಕೆ ಅವರಿಗೆ ಪ್ರಧಾನಮಂತ್ರಿಗಳ ಫಸಲ್ ಬಿಮಾ ಯೋಜನೆ ಸೌಲಭ್ಯ ಸೇರಿದಂತೆ ಸರ್ಕಾರಗಳ ಹಲವು ಸವಲತ್ತುಗಳು ಸಿಗುತ್ತಿಲ್ಲ ಎಂದರು.

ಪೋಡಿ ಮಾಡಿಸಿಕೊಂಡಿರದ ದಲಿತರಿಗೆ ತಕ್ಷಣ ಪೋಡಿ ಮಾಡಿಸಿಕೊಡಲು ನೆರವು ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜಲಜೀವನ್ ಮಿಷನ್ ಅಡಿ ರಾಜ್ಯದ 30 ಲಕ್ಷ ಪರಿಶಿಷ್ಟ ಕುಟುಂಬಗಳಿಗೆ ಕೊಳಾಯಿ ಸಂಪರ್ಕ ನೀಡಲಾಗಿದ್ದು, ಇದು ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆ ಎಂಬ ಸಂಬಂಧ ಮೌಲ್ಯಮಾಪನ ವರದಿ ನೀಡಲು ಸೂಚಿಸಲಾಗಿದೆ ಎಂದರು.

ಕಾಫಿ ತೋಟಗಳಲ್ಲಿ ಮೈನವಿರೇಳಿಸಿದ ಕಾರುಗಳ ರ‍್ಯಾಲಿ







ಸಿದ್ದಾಪುರ, ನ.20– ಬ್ಲೂ ಬ್ಯಾಂಡ್ ಎಫ್‌ಎಂ ಎಸ್‌ಸಿಐ ಇಂಡಿಯನ್ ನ್ಯಾಷನಲ್ ರ‍್ಯಾಲಿ ಚಾಂಪಿಯನ್‌ಶಿಪ್ ನೇತೃತ್ವದಲ್ಲಿ ರೋಬಸ್ಟಾ ಸ್ಪೋರ್ಟ್ಸ್ ಅಂಡ್ ಅಡ್ವೆಂಚರ್ ಅಕಾಡೆಮಿ ಸಹಕಾರದೊಂದಿಗೆ ನಡೆದ ರೋಬಸ್ಟಾ–2023 ರ‍್ಯಾಲಿಯ ಅಂತಿಮ ದಿನದಂದು ಹೊಸಳ್ಳಿ ಹಾಗೂ ಮಾರ್ಗೊಳ್ಳಿ ಕಾಫಿ ತೋಟಗಳ ಕಡಿದಾದ ರಸ್ತೆಯಲ್ಲಿ ಮೈ ಜುಮ್ ಎನಿಸುವಂತೆ ರೋಮಾಂಚನಕಾರಿಯಾಗಿ ತಮ್ಮ ಕಾರುಗಳನ್ನು ಚಲಾಯಿಸಿ ಸಾಧನೆಯ ಗುರಿ ಮುಟ್ಟಲು ಹರಸಾಹಸ ಪಟ್ಟ ರ‍್ಯಾಲಿ ಪಟುಗಳನ್ನು ತೋಟಗಳ ರಸ್ತೆ ಬದಿಯಲ್ಲಿ ನೆರೆದಿದ್ದ ಸಾವಿರಾರು ಸಂಖ್ಯೆಯ ಕಾರ್ಮಿಕರು, ಸ್ಥಳೀಯರು ಹುರಿದುಂಬಿಸಿದರು.

ಮೂರನೇ ದಿನದ ಅಂತಿಮ ಸುತ್ತಿನ ಸಂದರ್ಭ ನಿಗದಿತ ಸಮಯವನ್ನು ಮುಟ್ಟಲು ಸುಮಾರು 50ಕ್ಕೂ ಹೆಚ್ಚು ಕಾರು ಹಾಗೂ ಜಿಪ್ಸಿಗಳು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದವು. ಬೆಳಗ್ಗಿನಿಂದಲೇ ದೈನಂದಿನ ಕೆಲಸ ಕಾರ್ಯಗಳನ್ನು ಬಿಟ್ಟು 15 ವರ್ಷಗಳ ನಂತರ ಕಾಫಿ ತೋಟಗಳಲ್ಲಿ ರ‍್ಯಾಲಿ ಸಂಚರಿಸುವುದನ್ನು ಕಂಡು ಕಾರ್ಮಿಕರು ಹಾಗೂ ಸ್ಥಳೀಯರು ಸಿಳ್ಳೆ, ಬೊಬ್ಬೆ, ಚಪ್ಪಾಳೆಯೊಂದಿಗೆ ಪ್ರೋತ್ಸಾಹಿಸಿದ್ದರು.

ಕಾಫಿ ತೋಟಗಳ ಮಧ್ಯೆ ಕಡಿದಾದ ರಸ್ತೆಯಲ್ಲಿ ಒಂದರ ಹಿಂದೆ ಒಂದಂತೆ ಕಾರುಗಳು ಬಾರಿ ಶಬ್ದ ಮಾಡುವ ಮೂಲಕ ಸಂಚರಿಸುವುದರೊಂದಿಗೆ ರಸ್ತೆಯಲ್ಲಿದ್ದ ಡುಬ್ಬಗಳ ಮೇಲೆ ಚಲಾಯಿಸಿ ಎತ್ತರಕ್ಕೆ ಜಿಗಿಯುವಂತೆ ಮಾಡಿದರು.

ಕಾರು ಜಿಗಿತವನ್ನು ಕಂಡ ಸ್ಥಳೀಯರು ರ‍್ಯಾಲಿ ಪಟುಗಳಿಗೆ ಪ್ರೋತ್ಸಾಹಿಸುವ ಮೂಲಕ ಚಪ್ಪಾಳೆ ತಟ್ಟಿದರು. ಮಾರ್ಗೊಳ್ಳಿ ಬಳಿ ಜಿಪ್ಸಿಯೊಂದು ರ‍್ಯಾಲಿಪಟುವಿನ ನಿಯಂತ್ರಣ ತಪ್ಪಿ ಒಂದು ಬದಿಗೆ ಮಗುಚಿದಾಗ ಸ್ಥಳದಲ್ಲಿ ಜಮಾಯಿಸಿದ ಕಾರ್ಮಿಕರು ಕ್ಷಣಾರ್ಧದಲ್ಲಿ ಮೇಲೆ ಎತ್ತುವ ಮೂಲಕ ಮತ್ತೆ ಕಾರು ಚಾಲನೆಗೆ ಸಹಕಾರ ನೀಡಿದರು.

ಸಣ್ಣಪುಟ್ಟ ಅಪಘಾತ ಹಾಗೂ ಮಗುಚಿ ಬಿದ್ದರೂ ಯಾವುದೇ ಅಪಾಯ ಸಂಭವಿಸದಂತೆ ಎಲ್ಲಾ ಸುರಕ್ಷಿತ ಸಾಧನವನ್ನು ಹೊಂದಿರುವ ಕಾರುಗಳನ್ನ ರ‍್ಯಾಲಿ ಪಟುಗಳು ಚಲಾಯಿಸಿದರಿಂದ ಯಾವುದೇ ಅಹಿತಕರ ಘಟನೆ ಸಂಭವಿಸಲಿಲ್ಲ. ಕೆಲವು ಕಾರುಗಳಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ರಸ್ತೆ ಬದಿ ನಿಂತವು.

ಕರ್ನಾಟಕ, ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ, ಪಾಂಡಿಚೇರಿ, ಗೋವಾ, ಪೂನಾ, ಚಂಡಿಗಢ್, ಕೊಲ್ಕತ್ತಾ, ದೆಹಲಿ ಸೇರಿದಂತೆ ವಿವಿಧ ರಾಜ್ಯಗಳ ಸುಮಾರು 60ಕ್ಕೂ ಹೆಚ್ಚು ಸ್ಪರ್ಧಾಳುಗಳು ಕಾರು ರ‍್ಯಾಲಿಯಲ್ಲಿ ಭಾಗವಹಿಸಿದ್ದರು.

ಪ್ರಕೃತಿ ಸೌಂದರ್ಯದಿಂದ ಕೂಡಿರುವ ಕಾಫಿ ತೋಟಗಳ ರಸ್ತೆಯಲ್ಲಿ ತಮ್ಮ ಕಾರುಗಳನ್ನು ಚಾಲನೆ ಮಾಡಿದ ರ‍್ಯಾಲಿಪಟುಗಳು ತಮ್ಮ ಅನುಭವವನ್ನು ಹಂಚಿಕೊಂಡು ಆಯೋಜಕರು, ಕಾರ್ಮಿಕರು, ಸ್ಥಳೀಯರ ಸಹಕಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. 15 ವರ್ಷಗಳ ನಂತರ ರ‍್ಯಾಲಿ ಕಾರುಗಳನ್ನು ಕಣ್ಮುಂದೆ ನೋಡಿ ಖುಷಿಪಟ್ಟಿದ್ದೇವೆ. ಇಂತಹ ಕಾರುಗಳ ರ‍್ಯಾಲಿ ಟಿವಿಯಲ್ಲಿ ಮಾತ್ರ ನೋಡಲು ಸಾಧ್ಯವಾಗುತ್ತಿತ್ತು. ಮುಂದೆಯೂ ಇಂತಹ ರ‍್ಯಾಲಿಗಳನ್ನು ಈ ಭಾಗದಲ್ಲಿ ಆಯೋಜನೆ ಮಾಡಲಿ ಎಂದು ಆಯೋಜಕರ ಬಗ್ಗೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದರು.

ಹರಿಕೃಷ್ಣ– ಕುನಾಲ್ ಜೋಡಿಗೆ ನ್ಯಾಷನಲ್ ರ‍್ಯಾಲಿ ಚಾಂಪಿಯನ್ ಪಟ್ಟ



ಸಿದ್ದಾಪುರ, ನ.20– ಕೊಡಗಿನ ಕಾಫಿ ತೋಟಗಳ ಕಡಿದಾದ ರಸ್ತೆಯಲ್ಲಿ ತಮ್ಮ ಕಾರುಗಳನ್ನು ಚಲಾಯಿಸಿ ನಿಗದಿತ ಸಮಯ ಸಾಧಿಸುವ ಮೂಲಕ ದೆಹಲಿಯ ಹರಿಕೃಷ್ಣ ವಾದಿಯ– ಹಿಮಾಚಲ ಪ್ರದೇಶದ ಕುನಾಲ್ ಕಶ್ಯಪ್ ಜೋಡಿ ಸಮಗ್ರ ಚಾಂಪಿಯನ್‌ಶಿಪ್ ತಮ್ಮದಾಗಿಸಿಕೊಂಡಿದ್ದಾರೆ.

ಅರೋರ ವಿಕ್ರಂ ರಾವ್– ಸೌಮ್ಯ ಜೋಡಿ ದ್ವಿತೀಯ ಹಾಗೂ ಜಾಹನ್ ಸಿಂಗ್ ಗಿಲ್– ಸೂರಜ್ ಕೇಶವ ತೃತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಐಎನ್‌ಆರ್‌ಸಿ2 ವಿಭಾಗದಲ್ಲಿ ಹರಿಕೃಷ್ಣ ವಾದಿಯ– ಕುನಾಲ್ ಕಶ್ಯಪ್ ಪ್ರಥಮ, ಅರೋರ ವಿಕ್ರಂ ರಾವ್– ಎ.ಜಿ.ಸೋಮಯ್ಯ ದ್ವಿತೀಯ, ಡರಿಯೋಸ್ ಶೋಫ್– ಶಹೀದ್ ಸಲ್ಮಾನ್ ತೃತೀಯ ಬಹುಮಾನ ಪಡೆದಿದ್ದಾರೆ.

ಐಎನ್‌ಆರ್‌ಸಿ3 ವಿಭಾಗದಲ್ಲಿ ಜಾಹನ್ ಸಿಂಗ್ ಗಿಲ್– ಸೂರಜ್ ಕೇಶವ ಪ್ರಸಾದ್ ಪ್ರಥಮ, ಶೇಶಾಂಕ್ ಜಾಮ್ಮೆಲ್– ಆಶೀಶ್ ಶರ್ಮಾ ದ್ವಿತೀಯ, ಡರಿಯೋಸ್ ಶೋಫ್– ಶಹೀದ್ ಸಲ್ಮಾನ್ ತೃತೀಯ ಬಹುಮಾನ ಪಡೆದಿದ್ದಾರೆ. ಐಎನ್‌ಆರ್‌ಸಿ4 ವಿಭಾಗದಲ್ಲಿ ಅಭಿನ್ ರೈ– ಅರವಿಂದ್ ಧೀರೇಂದ್ರ ಪ್ರಥಮ, ವಿವೇಕ್ ಉತ್ತುಪೂರ್ಣ ಅಥೇರಿಯ ಕೌಸಗಿ ದ್ವಿತೀಯ, ಸಫೀಕುದೀಲ್ – ವಿ.ಅರುಣ್ ತೃತೀಯ ಬಹುಮಾನ ಪಡೆದಿದ್ದಾರೆ. ಜಿವೈಪಿ ಎವೈ ವಿಭಾಗದಲ್ಲಿ ಮಿಚು ಗಣಪತಿ– ವೇಣು ರಮೇಶ್ ಕುಮಾರ್ ಪ್ರಥಮ, ಅಭಿಷೇಕ್ ಗೌಡ– ಧೀರಜ್ ಮನೆ ದ್ವಿತೀಯ, ಜಯಂತ್ ಸೋಮನಾಥನ್ – ಆರ್.ರಾಜಶೇಖರ್ ತೃತೀಯ ಬಹುಮಾನ ಪಡೆದಿದ್ದಾರೆ.

ಮಹಿಳಾ ವಿಭಾಗದಲ್ಲಿ ಅನುಶ್ರೀಯಾ ಗುಲಟಿ– ಶೇರ್ವೇನ್ ಪ್ರಥಮ, ಶಿವಾನಿ–ಅರ್ಜುನ್ ಧೀರೇಂದ್ರ ದ್ವಿತೀಯ, ಪ್ರಗತಿ ಗೌಡ– ತ್ರಿಶಾ ಅಲ್ಲೋಕರ್ ತೃತೀಯ ಬಹುಮಾನ ಪಡೆದಿದ್ದಾರೆ. ಜೂನಿಯರ್ ಐಎನ್‌ಆರ್‌ಸಿ ವಿಭಾಗದಲ್ಲಿ ಜಾಹನ್ ಸಿಂಗ್ ಗಿಲ್ – ಸೂರಜ್ ಕೇಶವ ಪ್ರಸಾದ್ ಪ್ರಥಮ, ಅಭಿನ್ ರೈ– ಅರವಿಂದ್ ಧೀರೇಂದ್ರ ದ್ವಿತೀಯ, ವಿವೇಕ್ ರುತ್ತುಪೂರ್ಣ– ಅಥೇರಿಯಾ ಕೌಂಸಗಿ ತೃತೀಯ ಬಹುಮಾನ ಪಡೆದಿದ್ದಾರೆ. ಕೊಡಗಿನ ಅಭಿನ್ ರೈ–ರೈಜೀಂಗ್ ಸ್ಟಾರ್ ಟ್ರೋಫಿಯಲ್ಲಿ ತನ್ನದಾಗಿಸಿಕೊಂಡಿದ್ದಾರೆ.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ ಎಸ್ ಪೊನ್ನಣ್ಣ ಸಮಾರೋಪ ಸಮಾರಂಭದಲ್ಲಿ ವಿಜೇತ ರ‍್ಯಾಲಿಪಟುಗಳಿಗೆ ಬಹುಮಾನ ವಿತರಣೆ ಮಾಡಿದರು. ಈ ಸಂದರ್ಭ ಬ್ಲೂ ಬ್ಯಾಂಡ್‌ನ ಪ್ರಮುಖರಾದ ಪ್ರೇಮ್‌ನಾಥ್, ಮೂಸ ಶರೀಫ್, ರೋಬಸ್ಟಾ ಸ್ಪೋರ್ಟ್ಸ್ ಅಂಡ್ ಅಡ್ವೆಂಚರ್ ಅಕಾಡೆಮಿಯ ಉದ್ಧಪಂಡ ತಿಮ್ಮಣ್ಣ, ಅಪ್ಪಣ್ಣ, ಜಮ್ಮಂಡ ಸೋಮಣ್ಣ, ಮಹೇಶ್ ಅಪ್ಪಯ್ಯ ಸೇರಿದಂತೆ ಮತ್ತಿತರರು ಹಾಜರಿದ್ದರು.

ನ.23, ಕನ್ನಡ ರಾಜ್ಯೋತ್ಸವ

ಮಡಿಕೇರಿ, ನ.20– ಕರ್ನಾಟಕ ಸಂಭ್ರಮ 50 ಪ್ರಯುಕ್ತ ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಇವರ ಸಂಯುಕ್ತ ಆಶ್ರಯದಲ್ಲಿ ಸುವರ್ಣ ಕರ್ನಾಟಕ 50ರ ಸಂಭ್ರಮ ಮತ್ತು 68 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು ನವೆಂಬರ್, 23 ರಂದು ಬೆಳಗ್ಗೆ 10.30 ಗಂಟೆಗೆ ಭಾಗಮಂಡಲ ಕೆವಿಜಿ ತಾಂತ್ರಿಕ ಕಾಲೇಜಿನಲ್ಲಿ ನಡೆಯಲಿದೆ.

ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಕೊಡಗು ಜಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಕೊಡಗು ಜಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಭಾಗಮಂಡಲ ಕೆವಿಜಿ ತಾಂತ್ರಿಕ ಕಾಲೇಜಿನ ಪ್ರಾಚಾರ್ಯ ಕೆ.ವಿ.ಶ್ರೀಕಾಂತ್, ಭಾಗಮಂಡಲ ಹೋಬಳಿ ಘಟಕದ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸುನಿಲ್ ಪತ್ರಾವೊ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕ ಹೊಸೂರು ಜೆ.ಸತೀಶ್ ಕುಮಾರ್, ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ಪ್ರಾಚಾರ್ಯ ಕೆ.ಡಿ.ನೀತಾ ಇತರರು ಪಾಲ್ಗೊಳ್ಳಲಿದ್ದಾರೆ.

ಮಾಯಮುಡಿಯಲ್ಲಿ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ



ಗೋಣಿಕೊಪ್ಪ, ನ.20– ಮಾಯಮುಡಿ ಶ್ರೀ ಮಾನಿಲ್ ಅಯ್ಯಪ್ಪ ಸೇವಾ ಸಮಿತಿ ವತಿಯಿಂದ ಮಾಯಮುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ಆಯೋಜಿಸಿದ್ದ ಎರಡನೇ ವರ್ಷದ ಬೊಡಿನಮ್ಮೆ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ 350ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿ ಗಮನ ಸೆಳೆದರು.

ಪಾಯಿಂಟ್ 22, 12 ನೇ ಬೋರ್, ಏರ್ ಗನ್ ವಿಭಾಗದಲ್ಲಿ ಪ್ರತ್ಯೇಕವಾಗಿ ಸ್ಪರ್ಧೆ ನಡೆಯಿತು. ಪಾಯಿಂಟ್ 22 ವಿಭಾಗದಲ್ಲಿ ಮಣವಟ್ಟೀರ ಪೊನ್ನು ಪ್ರಥಮ, ಅಜ್ಜೇಟೀರ ಗೌತಂ ದ್ವಿತೀಯ, ಪುಗ್ಗೇರ ರಾಜೇಶ್ ದ್ವಿತೀಯ, 12 ನೇ ಬೋರ್ ವಿಭಾಗದಲ್ಲಿ ರಮೇಶ್ ಬಾಬು (ಪ್ರ), ಕೆಚ್ಚೇರ ವಿಜು (ದ್ವಿ), ಮದಿಯೊಕ್ಕಡ ಪೂಣಚ್ಚ (ತೃ), ಏರ್ ಗನ್ ವಿಭಾಗದಲ್ಲಿ ಬಡುವಂಡ ಧನು ದೇವಯ್ಯ (ಪ್ರ), ರಮೇಶ್ ಬಾಬು (ದ್ವಿ), ಬಡುವಂಡ ಶ್ಲೋಕ್ (ತೃ) ಸ್ಥಾನ ಪಡೆದರು.

ವೈದ್ಯ ಡಾ. ಬಲ್ಲಣಮಾಡ ನಿಖಿಲ್ ನಂಜಪ್ಪ ಉದ್ಘಾಟಿಸಿದರು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಚೆರಿಯಪಂಡ ರಾಜ ನಂಜಪ್ಪ, ಮಹಿಳಾ ಬ್ಯಾಂಕ್ ಮಾಜಿ ಅಧ್ಯಕ್ಷೆ ಕಂಜಿತಂಡ ಸ್ವಾತಿ ಸುಬ್ರಮಣಿ ಪಾಲ್ಗೊಂಡಿದ್ದರು. ಸಮಾರೋಪ ಸಮಾರಂಭದಲ್ಲಿ ಕಾಫಿ ಬೆಳೆಗಾರ ಪಾಂಡಂಡ ರವಿ, ವಮ್ಸಿ ಮಾರ್ಲ ಕಂಪೆನಿ ಪ್ರಮುಖರಾದ ಚಿಂಡಮಾಡ ನಾಚಪ್ಪ, ಮುಕ್ಕಾಟೀರ ಬೋಪಣ್ಣ, ಕಾರ್ಯಕ್ರಮ ಸಂಚಾಲಕ ಚೆಪ್ಪುಡೀರ ಪ್ರದೀಪ್ ಪೂವಯ್ಯ, ಸೇವಾ ಸಮಿತಿ ಗೌ. ಅಧ್ಯಕ್ಷ ಸಣ್ಣುವಂಡ ಬಿ. ರಮೇಶ್, ಅಧ್ಯಕ್ಷ ವಿನು ವಿಶ್ವನಾಥ್ ಬಹುಮಾನ ವಿತರಿಸಿದರು.

ಇಬ್ಬರು ಎಂಡಿಎಂಎ ಮಾದಕ ವಸ್ತು ಮಾರಾಟಗಾರರ ಬಂಧನ





ಮಡಿಕೇರಿ, ನ.20– ನಿಷೇಧಿತ ಮಾದಕ ವಸ್ತು ಎಂಡಿಎಂಎ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸೆನ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ನಾಪೋಕ್ಲು ಸಮೀಪದ ಕುಂಜಿಲ ನಿವಾಸಿ ನೌಫಲ್(25) ಮತ್ತು ಎಮ್ಮೆಮಾಡು ಪೈಸಾರಿ ನಿವಾಸಿ ಸಾದಿಕ್(32) ಎಂಬವರೇ ಬಂಧಿತ ಆರೋಪಿಗಳಾಗಿದ್ದು ಇವರ ಬಳಿಯಿದ್ದ 7.46 ಗ್ರಾಂ ಎಂಡಿಎಂಎ ಮಾದಕ ವಸ್ತುವನ್ನು ವಶಕ್ಕೆ ಪಡೆಯಲಾಗಿದೆ. ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ನಿಷೇಧಿತ ಮಾದಕ ವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಸೆನ್ ಠಾಣೆಯ ವೃತ್ತ ನಿರೀಕ್ಷಕ ಕೆ.ರಾಘವೇಂದ್ರ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಮಾಜಿ ಯೋಧರ ಒಕ್ಕೂಟದ ವಾರ್ಷಿಕ ಮಹಾಸಭೆ

ಮಡಿಕೇರಿ, ನ.20– ಕೊಡಗು ಜಿಲ್ಲೆಯ ನಿವೃತ್ತ(ಮಾಜಿ) ಯೋಧರ ಒಕ್ಕೂಟ ಅರೆಸೇನಾಪಡೆಯ 11 ನೇ ವಾರ್ಷಿಕ ಮಹಾಸಭೆಯು ನ.21 ರಂದು ಬೆಳಗ್ಗೆ 10.30 ಗಂಟೆಗೆ ಸಂಘದ ಅಧ್ಯಕ್ಷ ಎಂ.ಜಿ.ಯತೀಶ್ ಅಧ್ಯಕ್ಷತೆಯಲ್ಲಿ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿಯ 'ಅಂಬೇಡ್ಕರ್ ಭವನ'ದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಉಳಿಸುವಲ್ಲಿ ಆಟೋ ಚಾಲಕರ ಪಾತ್ರ ಅಪಾರ



ಕೊಳ್ಳೇಗಾಲ, ನ.20– ಕನ್ನಡ ಉಳಿಸಿ ಬೆಳೆಸುವಲ್ಲಿ ಆಟೋ ಚಾಲಕರ ಪಾತ್ರ ಅಪಾರ ಎಂದು ಕೆಪಿಸಿಸಿ ಕಾರ್ಮಿಕ ರಾಜ್ಯ ಘಟಕದ ಕಾರ್ಯದರ್ಶಿ ಜಿ.ಸಿ.ಕಿರಣ್ ತಿಳಿಸಿದರು.

ಮಹಾನಾಯಕ ಭೀಮರಾವ್ ಆಟೋ ಚಾಲಕರು ಮತ್ತು ಮಾಲೀಕರ ಸಂಘದಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ಆಟೋ ಹಾಗೂ ಕ್ಯಾಬ್ ಮಾಲೀಕರ ಸಂಘದವರು ನವೆಂಬರ್ ತಿಂಗಳ ಪೂರ್ತಿ ಕನ್ನಡ ರಾಜ್ಯೋತ್ಸವ ಆಚರಿಸಿ ಕನ್ನಡ ಭಾಷೆ ಮೆರುಗನ್ನು ಹೆಚ್ಚಿಸುವ ಜೊತೆಗೆ ಕನ್ನಡತನ ಮೆರೆಯುತ್ತಿದ್ದಾರೆ. ನಾನು ಕೂಡ ಕನ್ನಡ ಅಕಾಡೆಮಿ ತೆರೆದು ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಕೆಲಸ ಮಾಡುತ್ತಿದ್ದೇನೆ ಎಂದರು. ಬೆಂಗಳೂರಿನಲ್ಲಿ ಶೇ.70 ರಷ್ಟು ಕನ್ನಡೇತರರು ವಾಸವಿದ್ದಾರೆ. ಅವರಿಗೆಲ್ಲರಿಗೂ ಕನ್ನಡ ಕಲಿಸುವ ಕೆಲಸ ಆಗಬೇಕಿದೆ. ಕೊಳ್ಳೇಗಾಲ ಮತ್ತು ಹನೂರು ತಾಲೂಕಿನಲ್ಲಿ ಕನ್ನಡಾಭಿಮಾನಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕನ್ನಡ ಭಾಷೆ ಅತ್ಯಂತ ಶ್ರೀಮಂತವಾಗಿದ್ದು, ಅತ್ಯಂತ ಹಿರಿಮೆ, ಗರಿಮೆಯುಳ್ಳ ಭಾಷೆಯಾಗಿದೆ ಎಂದರು.

ಈ ವೇಳೆ ಪ್ರಥಮ ದರ್ಜೆ ಗುತ್ತಿಗೆದಾರ ಓಲೆ ಮಹದೇವ, ಪಟ್ಟಣ ಪೊಲೀಸ್ ಠಾಣೆ ಮುಖ್ಯಪೇದೆ ಸೂರ್ಯಪ್ರಕಾಶ್, ಲೋಕೇಶ್, ಮುಖಂಡ ಆನಂದ್, ಡೈರಿ ಮೂರ್ತಿ, ಮಹಾನಾಯಕ ಭೀಮರಾವ್ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ಹರೀಶ್, ಉಪಾಧ್ಯಕ್ಷ ಮಹೇಶ್, ಖಜಾಂಚಿ ಉಪೇಂದ್ರ, ಸಹ ಖಜಾಂಚಿ ರಮೇಶ್, ಕಾರ್ಯದರ್ಶಿ ನೀಲಪ್ಪ, ರೇಚಣ್ಣ, ಲೋಕೇಶ್ ಹಾಗೂ ಚಾಲಕರು ಮಾಲೀಕರು ಇದ್ದರು.

ಬಸ್ ನಿಲುಗಡೆ, ಸಮರ್ಪಕ ಬಸ್ ಸೌಲಭ್ಯಕ್ಕೆ ಒತ್ತಾಯಿಸಿ

ಪಣ್ಯದಹುಂಡಿ, ಬೇಗೂರಿನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ





ಚಾಮರಾಜನಗರ/ಬೇಗೂರು, ನ.20– ಕೆಎಸ್‌ಆರ್‌ಟಿಸಿ ಬಸ್ ನಿಲುಗಡೆಗೆ ಆಗ್ರಹಿಸಿ ಪಣ್ಯದಹುಂಡಿಯಲ್ಲಿ ಹಾಗೂ ಸಮರ್ಪಕ ಬಸ್ ಸೌಲಭ್ಯಕ್ಕೆ ಒತ್ತಾಯಿಸಿ ಬೇಗೂರಿನಲ್ಲಿ ವಿದ್ಯಾರ್ಥಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಪಣ್ಯದಹುಂಡಿ: ಸಾರಿಗೆ ಬಸ್ ನಿಲುಗಡೆಗೆ ಆಗ್ರಹಿಸಿ ಗ್ರಾಮದ ಬಸ್ ನಿಲ್ದಾಣದಲ್ಲಿ ಜಮಾಯಿಸಿದ ನೂರಾರು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು, ಬಸ್ ತಡೆದು ಕೆಎಸ್‌ಆರ್‌ಟಿಸಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಪ್ರತಿದಿನ ಬೆಳಗ್ಗೆ ಗ್ರಾಮದಿಂದ ಮೈಸೂರು, ನಂಜನಗೂಡು ಹಾಗೂ ಚಾಮರಾಜನಗರದ ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳು ತೆರಳುತ್ತಾರೆ. ಅಲ್ಲದೇ ಗ್ರಾಮಸ್ಥರು ಸಹ ತಮ್ಮ ಕೆಲಸ ಕಾರ್ಯಗಳಿಗೆ ಹೋಗುತ್ತಾರೆ. ಆದರೆ ಹೆದ್ದಾರಿಯಲ್ಲಿ ಸಂಚರಿಸುವ ಸಾರಿಗೆ ಬಸ್‌ಗಳು ಗ್ರಾಮದಲ್ಲಿ ನಿಲ್ಲಿಸುವುದಿಲ್ಲ. ಇದರಿಂದ ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಆರೋಪಿಸಿದರು.

ಬಸ್ ನಿಲುಗಡೆಗೆ ಆಗ್ರಹಿಸಿ ಸಂಬಂಧಪಟ್ಟವರಿಗೆ ಈಗಾಗಲೇ ಸಾಕಷ್ಟು ಬಾರಿ ಮನವಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೇ ಅಧಿಕಾರಿಗಳು ಈ ಸಂಬಂಧ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ ತಡೆರಹಿತ ಬಸ್‌ಗಳು ಸೇರಿದಂತೆ ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳ ನಿಲುಗಡೆಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಆ ಮೂಲಕ ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ಈ ಭಾಗದ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿಪೋ ಮ್ಯಾನೇಜರ್ ಕುಮಾರ್ ನಾಯಕ್ ಹಾಗೂ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಚಿಕ್ಕರಾಜಶೆಟ್ಟಿ ಪ್ರತಿಭಟನಾಕಾರರ ಮನವಿ ಆಲಿಸಿದರು. ಈ ವೇಳೆ ಕುಮಾರ್ ನಾಯಕ್ ಅವರು ಗ್ರಾಮದಲ್ಲಿ ಬಸ್ ನಿಲುಗಡೆಗೆ ಕ್ರಮವಹಿಸುವುದಾಗಿ ಭರವಸೆ ನೀಡಿದ ಬಳಿಕ ಪ್ರತಿಭಟನೆ ಅಂತ್ಯಗೊಳಿಸಲಾಯಿತು.

ಪರದಾಡಿದ ಪ್ರಯಾಣಿಕರು: ಸಾರಿಗೆ ಬಸ್ ನಿಲುಗಡೆಗೆ ಆಗ್ರಹಿಸಿ ಗ್ರಾಮದಲ್ಲಿ ಒಂದು ಗಂಟೆಗೂ ಹೆಚ್ಚುಕಾಲ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದ ಪರಿಣಾಮ ಕಿ.ಮೀ ಗಟ್ಟಲೇ ವಾಹನಗಳು ರಸ್ತೆಯಲ್ಲೇ ನಿಂತಿದ್ದವು. ಇದರಿಂದ ಮೈಸೂರು, ಚಾಮರಾಜನಗರ ಸೇರಿದಂತೆ ವಿವಿಧೆಡೆ ತೆರಳಬೇಕಿದ್ದ ಪ್ರಯಾಣಿಕರು ಪರದಾಡಿದರು.

ಬೇಗೂರು: ಸಮರ್ಪಕ ಬಸ್ ಸೌಲಭ್ಯಕ್ಕೆ ಒತ್ತಾಯಿಸಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಕೆಎಸ್‌ಆರ್‌ಟಿಸಿ ಬಸ್ ತಡೆದು ಸೋಮವಾರ ಪ್ರತಿಭಟನೆ ನಡೆಸಿದರು.

ಬೇಗೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಜಮಾಯಿಸಿದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು, ಸಕಾಲಕ್ಕೆ ಸರಿಯಾಗಿ ಬಸ್ ಬರುತ್ತಿಲ್ಲ. ಅಲ್ಲದೇ ಬೆಳಗ್ಗೆ ವೇಳೆ ಹೆಚ್ಚುವರಿ ಬಸ್ ಬಾರದಿರುವುದರಿಂದ ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಹೀಗಾಗಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಇಲ್ಲದಿದ್ದರೆ ಡಿಪೋ ಮ್ಯಾನೇಜರ್ ಸ್ಥಳಕ್ಕಾಗಮಿಸುವವರೆಗೆ ಪ್ರತಿಭಟನೆ ಕೈ ಬಿಡುವುದಿಲ್ಲವೆಂದು ಪಟ್ಟು ಹಿಡಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಹಾಗೂ ಗುಂಡ್ಲುಪೇಟೆ ಘಟಕದ ಸಾರಿಗೆ ಅಧಿಕಾರಿಗಳು ಹೆಚ್ಚುವರಿ ಬಸ್ ಬಿಡುವುದಾಗಿ ಭರವಸೆ ನೀಡಿದ ಬಳಿಕ ಪ್ರತಿಭಟನೆ ಕೈ ಬಿಡಲಾಯಿತು.

ಇಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.20– ಗುಂಡ್ಲುಪೇಟೆ ಉಪವಿಭಾಗ ವ್ಯಾಪ್ತಿಯಲ್ಲಿ 3ನೇ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ನ.21ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಬೆಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ ಹಾಗೂ ಹಂಗಳ, ಶಿವಪುರ, ಕಲೀಗೌಡನಹಳ್ಳಿ ಎನ್.ಜೆ.ವೈ, ಎಲಚಟ್ಟಿ, ಗೋಪಾಲ್‌ಪುರ ಎನ್.ಜೆ.ವೈ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ ಮತ್ತು ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್.ಹುಂಡಿ ಎನ್.ಜೆವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಇಂದು ಪೂರ್ವಭಾವಿ ಸಭೆ

ಚಾಮರಾಜನಗರ, ನ.20– ಚುನಾವಣಾ ನೀತಿ ಸಂಹಿತೆ ಜಾರಿಯಿಂದ ಮುಂದೂಡಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತಿಯನ್ನು ಜಿಲ್ಲಾಡಳಿತದಿಂದ ನ.28ರಂದು ಆಚರಿಸುವ ಸಂಬಂಧ ನ.21ರಂದು ಮಧ್ಯಾಹ್ನ 12 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಗೆ ಜಾಹೀರಾತು ದರ ನಿಗದಿ

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ



ಚಾಮರಾಜನಗರ, ನ.20– ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಸಂಬಂಧ ಭಾರತ ಚುನಾವಣಾ ಆಯೋಗ ರಾಜ್ಯ ಮತ್ತು ಜಿಲ್ಲಾ ಮಟ್ಟದ ವಿವಿಧ ಮಾಧ್ಯಮಗಳಲ್ಲಿ ಜಾಹೀರಾತು ಪ್ರಸಾರ ಮಾಡಲು ದರಪಟ್ಟಿ ನಿಗದಿಪಡಿಸಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಟಿವಿ, ರೇಡಿಯೋ, ಸೋಷಿಯಲ್ ಮೀಡಿಯಾ, ಇಂಟರ್ನೆಟ್, ವೆಬ್ ಸೈಟ್‌ಗಳಲ್ಲಿ ಜಾಹೀರಾತು ದರ ನಿಗದಿ ಸಂಬಂಧ ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣಾ ಕೆಲಸ ಕಾರ್ಯಗಳ ಪೂರ್ವಸಿದ್ಧತೆ ಕೈಗೊಳ್ಳಲಾಗುತ್ತಿದ್ದು, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಟಿವಿ, ರೇಡಿಯೋ, ಸೋಷಿಯಲ್ ಮೀಡಿಯಾ, ಇಂಟರ್ನೆಟ್, ವೆಬ್‌ಸೈಟ್‌ಗಳ ಮೂಲಕ ರಾಜಕೀಯ ಪಕ್ಷಗಳು ಜಾಹೀರಾತು ನೀಡಲು ಭಾರತ ಚುನಾವಣಾ ಆಯೋಗ ವಿವಿಧ ಅಳತೆ ಬ್ಯಾನರ್‌ಗಳು, ಡಿಸ್‌ಪ್ಲೇ, ಫಿಕ್ಸೆಡ್ ಡಿಸ್‌ಪ್ಲೇ, ವೀಡಿಯೋ ಮೂಲಕ ಪ್ರಸಾರ ಕೈಗೊಳ್ಳಲು ದರ ನಿಗದಿಪಡಿಸಿದೆ ಎಂದರು.

ವಿವಿಧ ಜಾಹೀರಾತುಗಳಿಗಾಗಿ ದರ ನಿಗದಿಪಡಿಸಿರುವ ವಿವರಗಳ ಮಾಹಿತಿಯನ್ನು ಸಭೆಯಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ವಿವರಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಆಯೋಗದ ಮುಖ್ಯ ಚುನಾವಣಾಧಿಕಾರಿ ನಿರ್ದೇಶನದಂತೆ ರಾಜ್ಯ ಮಟ್ಟದ ದರಪಟ್ಟಿಯಲ್ಲಿ ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮೀಡಿಯಾ ಹೊರತುಪಡಿಸಿ, ಜಿಲ್ಲಾ ಮಟ್ಟದಲ್ಲಿ ಮಾಧ್ಯಮಗಳ ಜಾಹೀರಾತು ದರದ ವಿವರವನ್ನು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರು ಸಲ್ಲಿಸಿರುವ ದರಪಟ್ಟಿ ಅಂತಿಮಗೊಳಿಸಲಾಗಿದೆ. ಮಾಧ್ಯಮ ಪಟ್ಟಿಯಲ್ಲಿರುವ ರಾಜ್ಯಮಟ್ಟದ ದಿನಪತ್ರಿಕೆಗಳಿಗೆ ಇಲಾಖೆ ನಿಗದಿಪಡಿಸಿರುವ ಜಾಹೀರಾತು ದರ, ವಾಣಿಜ್ಯ ಜಾಹೀರಾತು ದರ, ಪ್ರಾದೇಶಿಕ ದಿನಪತ್ರಿಕೆಗಳಿಗೆ ಇಲಾಖೆ ನಿಗದಿಪಡಿಸಿರುವ ದರ, ಪ್ರಾದೇಶಿಕ ದಿನಪತ್ರಿಕೆಗಳು ನೀಡಿರುವ ವಾಣಿಜ್ಯ ಜಾಹೀರಾತು ದರ, ಟಿವಿಗಳಿಗೆ ಇಲಾಖೆ ನಿಗದಿಪಡಿಸಿರುವ ಜಾಹೀರಾತು ದರ, ಟಿವಿಗಳು ನೀಡಿರುವ ವಾಣಿಜ್ಯ ದರ, ರೇಡಿಯೋಗಳಿಗೆ ಇಲಾಖೆ ನೀಡುತ್ತಿರುವ ದರಪಟ್ಟಿ, ಮಾಧ್ಯಮ ಪಟ್ಟಿಯಲ್ಲಿರುವ ಎಲ್ಲಾ ಜಿಲ್ಲಾಮಟ್ಟದ ದಿನಪತ್ರಿಕೆಗಳಿಗೆ ಇಲಾಖೆ ನಿಗದಿಪಡಿಸಿರುವ ಜಾಹೀರಾತು ದರದ ಅನುಬಂಧ–1 ರಿಂದ 8 ರಲ್ಲಿನ ಪಟ್ಟಿ ಮತ್ತು ಜಿಲ್ಲೆಯ ಚಿಗುರು ಹಾಗೂ ಟಿವಿಗಳು ನೀಡಿರುವ ಫ್ಲ್ಯಾಶ್ ಸ್ಕ್ರಾಲಿನ್, ಸಿಂಗಲ್‌ಲೈನ್ ಸ್ಕ್ರಾಲ್ ಜಾಹೀರಾತುಗಳ ವಿವರ, ಕ್ರೋಢೀಕೃತ ಜಿಲ್ಲಾ ಮಟ್ಟದ ದರಪಟ್ಟಿಯನ್ನು ಅಂತಿಮಗೊಳಿಸಿ ಪ್ರಚುರಪಡಿಸಲಾಗುತ್ತದೆ ಎಂದರು.

ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮಾತನಾಡಿ ಆಯೋಗವು ಚುನಾವಣಾ ಪ್ರಚಾರ ಸಾಮಗ್ರಿಗಳಿಗೆ ನಿಗದಿಪಡಿಸುವ ದರ ಅತ್ಯಂತ ಹೆಚ್ಚಾಗಿದ್ದು, ಇದಕ್ಕಿಂತ ಕಡಿಮೆ ದರಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಸರಬರಾಜು ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡು, ಕಡಿಮೆ ದರಕ್ಕೆ ಪಡೆಯುತ್ತೇವೆ. ಚುನಾವಣಾ ಆಯೋಗವು ನಿಗದಿಪಡಿಸಿರುವ ದರವನ್ನು ಪರಿಗಣಿಸಿದರೆ ಅಭ್ಯರ್ಥಿಗೆ ಹೆಚ್ಚಿನ ಹೊರೆಯಾಗುತ್ತದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣಾ ವೆಚ್ಚ ನಿರ್ವಹಣೆಗೆ ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳ ಸಭೆ ಕರೆದು ಚರ್ಚಿಸಿ ಮತ್ತು ಲೋಕೋಪಯೋಗಿ ಇಲಾಖೆ ಎಸ್‌ಆರ್ ಮೌಲ್ಯವನ್ನು ಆಧರಿಸಿ, ದರವನ್ನು ನಿಗದಿಪಡಿಸಲಾಗುತ್ತದೆ. ರಾಜಕೀಯ ಪಕ್ಷಗಳು ಒಡಂಬಡಿಕೆ ಮೂಲಕ ಕಡಿಮೆ ದರ ನಿಗದಿಪಡಿಸಿ ಸರಬರಾಜು ಮಾಡುವ ದರವನ್ನು ಪರಿಗಣಿಸಲು ಅವಕಾಶವಿಲ್ಲ. ಚುನಾವಣಾ ಆಯೋಗದ ಮಾರ್ಗಸೂಚಿಯನ್ವಯ ನಿಗದಿಪಡಿಸುವ ದರಗಳನ್ನೇ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಲೆಕ್ಕಕ್ಕೆ ಸೇರಿಸಲಾಗುತ್ತದೆ ಎಂದರು.

ಚುನಾವಣಾ ಶಿರಸ್ತೇದಾರ್ ಎಸ್.ಬಸವರಾಜು, ರಾಜಕೀಯ ಪಕ್ಷಗಳ ಮುಖಂಡರಾದ ಎ.ಹೆಚ್.ನಜ್ರುಲ್ಲಾ ಖಾನ್, ಎಸ್.ಬಾಲಸುಬ್ರಹ್ಮಣ್ಯ, ಎನ್.ನಾಗಯ್ಯ, ಕೆ.ಹರೀಶ್ ಸಭೆಯಲ್ಲಿ ಉಪಸ್ಥಿತರಿದ್ದರು.

ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಕಾರ್ತಿಕ ಮಹೋತ್ಸವ



ಚಾಮರಾಜನಗರ, ನ.20– ಮೊದಲ ಕಾರ್ತಿಕ ಸೋಮವಾರದ ಅಂಗವಾಗಿ ತಾಲೂಕಿನ ಕಿಲಗೆರೆ ಗ್ರಾಮದ ಶ್ರೀಸಿದ್ದಪ್ಪಾಜಿ ದೇವಸ್ಥಾನದಲ್ಲಿ 101 ದೀಪಗಳನ್ನು ಹಚ್ಚುವ ಮೂಲಕ ಸಂಭ್ರಮದಿಂದ ಕಾರ್ತಿಕ ಮಹೋತ್ಸವ ಆಚರಿಸಲಾಯಿತು.

ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ, ದೊಡ್ಡಮ್ಮತಾಯಿ, ಚೆನ್ನಾಜಮ್ಮ ದೇವರುಗಳಿಗೆ ತಮಟೆ, ಜಾಗಟೆ ಸದ್ದಿನೊಂದಿಗೆ ಪೂಜೆ ಸಲ್ಲಿಸಿ, ನಂತರ ಬಸವನಿಗೆ ಪೂಜೆ ಸಲ್ಲಿಸಿದ ಬಳಿಕ ಸಿದ್ದಪ್ಪಾಜಿ, ಮಂಟೇಸ್ವಾಮಿ ಕಂಡಾಯಗಳನ್ನು ಸತ್ತಿಗೆ, ಸೂರಪಾನಿ, ಛತ್ರಿ ಚಾಮರಗಳೊಂದಿಗೆ ದೇವಸ್ಥಾನದ ಸುತ್ತ 3 ಸುತ್ತು ಪ್ರದಕ್ಷಿಣೆ ಹಾಕಲಾಯಿತು.

ಈ ವೇಳೆ ಗ್ರಾಮದ ಜನತೆ ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಭಕ್ತರು ಪೂಜೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾದರು. ಬಳಿಕ ಪ್ರಸಾದ ವಿನಿಯೋಗ ಮಾಡಲಾಯಿತು.

ಅಪರಿಚಿತ ವಾಹನ ಡಿಕ್ಕಿ: ಪಾದಚಾರಿ ಸ್ಥಳದಲ್ಲೇ ಸಾವು

ಬೇಗೂರು, ನ.20– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬೇಗೂರಿನ ಸಂತೇಮಾಳ ಸಮೀಪ ನಡೆದಿದೆ. ತಾಲೂಕಿನ ತೊಂಡವಾಡಿ ಗ್ರಾಮದ ನಿವಾಸಿ ರವಿಚಂದ್ರ (35) ಸಾವನ್ನಪ್ಪಿದವರು. ಈತ ಭಾನುವಾರ ರಾತ್ರಿ ರಾಷ್ಟ್ರೀಯ ಹೆದ್ದಾರಿಯ ರಸ್ತೆಬದಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ರವಿಚಂದ್ರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಪೊಲೀಸರು ಪರಿಶೀಲನೆ ನಡೆಸಿ ಮೃತದೇಹವನ್ನು ಬೇಗೂರಿನ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಶ್ರೀ ನನ್ನೇಶ್ವರ ದೇವರಕೆರೆಯ ಅಂದವಾ...!



ಶ್ರೀ ದೇವರಕೆರೆ ಅಭಿವೃದ್ಧಿ ಸಮಿತಿ ಸದಸ್ಯರು.

ಕಾಂಪೌಂಡ್(ಗ್ರೀಲ್ ಫೆನ್ಸಿಂಗ್) ಅಳವಡಿಸಿದ್ದು, ಕೆರೆಯ ಬಳಿ ಯಾರೊಬ್ಬರು ಸುಳಿಯದಂತೆ ಎಚ್ಚರಿಕೆ ವಹಿಸಲಾಗಿದೆ. ಹಾಗೆಯೇ ಕೆರೆಯ ಸುತ್ತಲೂ ವಾಕಿಂಗ್ ಪಾತ್, ಮಡ್ ಪಾತ್(ಮಣ್ಣಿನ ಮೇಲೆ ನಡೆಯುವ ಜಾಗ) ಅಭಿವೃದ್ಧಿ ಮಾಡಿದ್ದು, 350ಕ್ಕೂ ಹೆಚ್ಚು ಗಿಡ-ಮರಗಳನ್ನು ನೆಟ್ಟು ಬೆಳೆಸಲಾಗಿದೆ. ಕೆರೆಯ ಸುತ್ತಲೂ ಹಸಿರಿನ ಸುಂದರ ವಾತಾವರಣ ನಿರ್ಮಾಣವಾಗಿದ್ದು, ಹಕ್ಕಿಗಳ ಕಲರವ ಕಣ್ಮನ ಸೆಳೆಯುತ್ತಿದೆ. ಬರಡಾಗಿದ್ದ ಪ್ರದೇಶವಿಂದು ಹಿನಕಲ್, ವಿಜಯನಗರ 2ನೇ ಹಂತ ಸೇರಿದಂತೆ ಸುತ್ತಮುತ್ತಲಿನ ಬಡಾವಣೆ ನಿವಾಸಿಗಳ ನೆಚ್ಚಿನ ವಾಯುವಿಹಾರ ತಾಣವಾಗಿದೆ.

ಮೂರು ವರ್ಷ: 2019ರ ಮಾರ್ಚ್ ತಿಂಗಳಿಂದ ಆರಂಭಗೊಂಡ ದೇವರಕೆರೆ ಅಭಿವೃದ್ಧಿ ಕಾಮಗಾರಿ ಮೂರು ವರ್ಷದಲ್ಲಿ ಬಹುತೇಕ ಪೂರ್ಣಗೊಂಡಿದ್ದು, ಹೂಟಗಳ್ಳಿ ನಗರಸಭೆಯಿಂದ ಕೆರೆ ಸ್ವಚ್ಛತಾ ಕಾರ್ಯಗಳು ಆರಂಭಗೊಂಡಿವೆ. ಕೊಳಚೆ ನೀರು ಹರಿಯುವ ಕಾಲುವೆಗಳ ಸಂಪರ್ಕವನ್ನು ಸಂಪೂರ್ಣವಾಗಿ ಬಂದ್ ಮಾಡಲಾಗಿದು, ಕೊಳಚೆ ನೀರು ಕೆರೆ ಸೇರದಂತೆ ಮುನ್ನೆಚ್ಚರಿಕೆ ವಹಿಸಿದ್ದರಿಂದಾಗಿ ದೇವರಕೆರೆಯಲ್ಲಿನ ತಿಳಿ ನೀರು ನಯನ ಮನೋಹರವಾಗಿ ಕಂಗೊಳಿಸುತ್ತಿದೆ.

ನೀರು ಉಕ್ಕುತ್ತಿದೆ: ಕೆರೆ ಅಭಿವೃದ್ಧಿ ಆರಂಭದಲ್ಲಿ ಹಲವು ಮಂದಿ ಇಂಜಿನಿಯರ್‌ಗಳು ಬಂದು ಪರಿಶೀಲನೆ ನಡೆಸಿ, ಈ ನೆಲದಲ್ಲಿ ನೀರಿಲ್ಲ ಎಂದಿದ್ದರು. ಆದರೂ ಛಲ ಬಿಡದೆ 12 ಅಡಿ ಆಳದವರೆಗೆ ಹೂಳು ತೆಗೆಯುತ್ತಿದ್ದಂತೆ ನೀರು ಬಂತು. ಕೆರೆಯ ಒಂದು ಬದಿಯಲ್ಲಿ(ಪೂರ್ವದಲ್ಲಿನ ಪೋದಾರ್ ಶಾಲೆ ಹಿಂಭಾಗ) ರಾಜಕಾಲುವೆ ಹಾದುಹೋಗಿದ್ದು, ಮಳೆ ಬಿದ್ದಾಗಲೂ ಕಾಲುವೆಯಿಂದ ಕೆರೆಗೆ ನೀರು ಬಂದಿದೆ. ನೀರೇ ಇಲ್ಲ ಎಂದ ಜಾಗದಲ್ಲಿ ನೀರು ಉಕ್ಕುತ್ತಿರುವುದರಿಂದ ಕೆರೆಯಲ್ಲಿ ತಿಳಿ ನೀರು ಸದಾ ಇರುವಂತಾಗಿದೆ ಎಂದು ಶ್ರೀ ದೇವರಕೆರೆ ಅಭಿವೃದ್ಧಿ ಸಮಿತಿ ಸದಸ್ಯ ಹಾಗೂ ಪರಿಸರ ಬಳಗದ ಕಿರಣ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾವೇ ಇಂಜಿನಿಯರ್: ದೇವರಕೆರೆ ಅಭಿವೃದ್ಧಿಯಲ್ಲಿ ಯಾವ ಇಂಜಿನಿಯರ್‌ಗಳೂ ಇಲ್ಲ. ಸಮಿತಿ ಸದಸ್ಯರು, ಗ್ರಾಮಸ್ಥರೇ ಇಂಜಿನಿಯರ್ಸ್ ಹಾಗೂ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿದ್ದೇವೆ. ಬೇರೆ ಬೇರೆ ಕಡೆಗಳಲ್ಲಿ ಅಭಿವೃದ್ಧಿಯಾಗಿದ್ದ ಒಂದೆರಡು ಕೆರೆಗಳ ವೀಕ್ಷಣೆ ಮಾಡಿ ಅಭಿವೃದ್ಧಿ ಮಾಡಿದ್ದೇವೆ. ಕೆರೆಯ ಸುತ್ತಲೂ ಎರಡೂ ಕಡೆ ಫೆನ್ಸಿಂಗ್ ಕಾಂಪೌಂಡ್ ಇದೆ. ಕೆರೆಯ ಪಕ್ಕದಲ್ಲಿ ಒಂದಿದ್ದರೆ ಕೆರೆ ಸುತ್ತಲಿನ ವಾಕಿಂಗ್ ಪಾತ್ ಸುತ್ತಲೂ ಮತ್ತೊಂದು ಫೆನ್ಸಿಂಗ್ ಅಳವಡಿಸುವ ಮೂಲಕ ದನ-ಕರುಗಳು ಕೆರೆ ಬಳಿಗೆ ಬರದಂತೆ ಹಾಗೂ ಕೆರೆಯೊಳಗೆ ಯಾರು ಇಳಿಯದಂತೆ ಜಾಗೃತೆ ವಹಿಸಲಾಗಿದೆ ಎಂದರು.

23 ಬಗೆಯ ಮರಗಳು: ಕೆರೆಯ ಸುತ್ತಲೂ ಅರಳಿ, ಹತ್ತಿ, ಹೊಂಗೆ, ಮಾವು, ಹುಣಸೆ, ಬಿಲ್ವಪತ್ರೆ ಸೇರಿದಂತೆ 23 ಬಗೆಯ ಸುಮಾರು 350 ಗಿಡಗಳನ್ನು ನೆಟ್ಟು ಬೆಳೆಸಿದ್ದು, ಅವೆಲ್ಲವೂ ಇಂದು ಒಂದು ಹಂತಕ್ಕೆ ಬೆಳೆದು ನಿಂತಿವೆ. ಮುಂದಿನ ದಿನಗಳಲ್ಲಿ ಪಕ್ಷಿಗಳ ಆಹಾರಕ್ಕೂ ಅನುಕೂಲವಾಗಲಿದೆ. ವಾಯುವಿಹಾರಕ್ಕೆ ಬರುವವರು ಮರದ ನೆರಳಿನಲ್ಲಿ ಕುಳಿತುಕೊಳ್ಳಲು ಅನುಕೂಲವಾಗುತ್ತಿದೆ. ವಾಕಿಂಗ್ ಪಾತ್ ಜೊತೆಗೆ ಮಡ್ ಪಾತ್ ಮಾಡಿರುವುದರಿಂದ ಮಣ್ಣಿನ ಮೇಲೆ ಬರಿಗಾಲಿನಲ್ಲಿ ನಡೆಯುವವರಿಗೆ ಇಷ್ಟವಾಗಲಿದೆ ಎಂದು ತಿಳಿಸಿದರು.

ಬೋರ್‌ವೆಲ್‌ಗಳಿಗೆ ಮರುಜೀವ: ಹಿನಕಲ್ ಗ್ರಾಮದಲ್ಲಿ ನೀರಿನ ಸಮಸ್ಯೆ ಬಗೆಹರಿಯಲು ದೇವರಕೆರೆ ಸಹಕಾರಿಯಾಗಿದೆ. ನೀರಿಲ್ಲದೆ ಬತ್ತಿಹೋಗಿದ್ದ ಬೋರ್‌ವೆಲ್‌ಗಳಿಗೂ ಕೆರೆ ಮರು ಜೀವ ನೀಡಿದ್ದು, ಅಂತರ್ಜಲ ವೃದ್ಧಿಯಾಗಲು ಸಾಧ್ಯವಾಗಿದೆ. ಕೆರೆ ನೀರಿನಿಂದ 30ಕ್ಕೂ ಹೆಚ್ಚು ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿದ್ದು, ಹಿನಕಲ್ ಗ್ರಾಮದಲ್ಲಿದ್ದ ಕುಡಿಯುವ ನೀರಿನ ಸಮಸ್ಯೆ ಬಹುತೇಕ ಬಗೆಹರಿದಂತಾಗಿದೆ ಎಂದರು.

ಕಷ್ಟಪಟ್ಟು ಉಳಿಸಿದೆವು: ಒತ್ತುವರಿಯಾಗಿ ಕಣ್ಮರೆಯಾಗುತ್ತಿದ್ದ ದೇವರಕೆರೆಯನ್ನು ಕಷ್ಟಪಟ್ಟು ಉಳಿಸಿದ್ದೇವೆ. ಕೆರೆ ಉಳಿದಿದ್ದರಿಂದಾಗಿ ಹಿನಕಲ್ ಗ್ರಾಮದಲ್ಲಿ ಕುಡಿಯುವ ನೀರಿಗಿದ್ದ ಬರ ಕೊನೆಯಾಗಿದೆ. ಕೆರೆಯನ್ನು ಮತ್ತಷ್ಟು ಅಭಿವೃದ್ಧಿ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಅನುದಾನ ನೀಡಬೇಕು ಎಂದು ಸಮಿತಿ ಸದಸ್ಯರೊಬ್ಬರು ಆಗ್ರಹಿಸಿದರು.

> **ಅದು ಇಲ್ಲ... ಇದು ಇಲ್ಲ...!**
> ದೇವರಕೆರೆ ಅಭಿವೃದ್ಧಿ(ಟೈಲ್ಸ್, ವಿದ್ಯುತ್ ಕಂಬ, ಫೆನ್ಸಿಂಗ್)ಮುಡಾದಿಂದ 1 ಕೋಟಿ ರೂ. ನೀಡುವ ಸಂಬಂಧ ಕ್ರಿಯಾ ಯೋಜನೆ ಮಾಡಲಾಗಿತ್ತು. ಈ ವೇಳೆ ಮೈಸೂರು ನಗರಪಾಲಿಕೆಯಿಂದ 95 ಲಕ್ಷ ರೂ. ನೀಡಲಾಗುವುದು ಎಂದಾಗ ಮುಡಾ ಕ್ರಿಯಾ ಯೋಜನೆ, ಯೋಜನೆಯಾಗಿಯೇ ಉಳಿಯಿತು. ಇತ್ತ 95 ಲಕ್ಷ ರೂ. ನೀಡುವುದಾಗಿ ಹೇಳಿದ್ದ ಪಾಲಿಕೆಯೂ ಕೈಕಟ್ಟಿಕೊಂಡಿದ್ದು, ಕೆರೆ ಅಭಿವೃದ್ಧಿಗೆ ಪಾಲಿಕೆ ಹಾಗೂ ಮುಡಾದಿಂದ ಬರಬೇಕಾಗಿದ್ದ ಅನುದಾನ ಇಲ್ಲದಂತಾಗಿದೆ. – **ಕಿರಣ್, ಶ್ರೀ ದೇವರಕೆರೆ ಅಭಿವೃದ್ಧಿ ಸಮಿತಿ ಸದಸ್ಯ**

ಕ್ರಮ ಕೈಗೊಳ್ಳಲು ಮೀನಾಮೇಷ

ಸ್ಥಳಕ್ಕೆ ಬಂದು ಸರ್ವೆ ಮಾಡಿ ಬಫರ್ ಜೋನ್ ಎಲ್ಲಿಯವರೆಗಿದೆ ಎಂಬುದನ್ನು ಗುರುತಿಸಿ, ಒತ್ತುವರಿ ಮಾಡದಂತೆ ನೋಟಿಸ್ ನೀಡಿದ್ದಾರೆ. ಆದರೂ ಒತ್ತುವರಿ ಮುಂದುವರೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸದಸ್ಯರು, ಈ ಬಗ್ಗೆ ಮುಡಾ ಅಧಿಕಾರಿಗಳು ಕೂಡಲೇ ಕ್ರಮಕೈಗೊಳ್ಳುವುದರ ಜೊತೆಗೆ ಒತ್ತುವರಿ ಮಾಡುತ್ತಿರುವ ಸಂಸ್ಥೆಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಹಾಗೆಯೇ ಕೆರೆಯ ಪೂರ್ವದಲ್ಲಿರುವ ರಾಜಕಾಲುವೆಯನ್ನೂ ಒತ್ತುವರಿ ಮಾಡಲಾಗಿದೆ. ಕೆಲ ಶಿಕ್ಷಣ ಸಂಸ್ಥೆಗಳು ರಾಜ ಕಾಲುವೆಯನ್ನು ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಿಸಿದರೆ, ದಕ್ಷಿಣ ಭಾಗದ ಸಮೀಪದಲ್ಲಿ ಹಾದುಹೋಗಿರುವ ರಾಜಕಾಲುವೆ ಕಟ್ಟಡದ ಮೇಲೆಯೇ ಶೆಡ್ ಕಟ್ಟಲಾಗಿದೆ. ಇದರಿಂದ ರಾಜಕಾಲುವೆಗೆ ಕುಸಿದು ಬೀಳುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಮುಡಾದಿಂದ ನೋಟಿಸ್: ದೇವರಕೆರೆಯ ದಕ್ಷಿಣ ಭಾಗದಲ್ಲಿ ಸಿಎ ನಿವೇಶನ ಪಡೆದಿರುವ ಸಂಸ್ಥೆಗೆ ಮುಡಾ ನೋಟಿಸ್ ನೀಡಿದ್ದು, ಕೆರೆಯ ಅಂಚಿನಿಂದ 30 ಮೀಟರ್ ಬಫರ್ ಜೋನ್‌ನಲ್ಲಿ ಯಾವುದೇ ಕಾಮಗಾರಿ ನಡೆಸದಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ. ಇಷ್ಟಾದರೂ ಕಾಮಗಾರಿ ಮುಂದುವರೆದಿದ್ದು, ಕೆರೆಯ ಏರಿಯನ್ನು ಬಹುತೇಕ ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ಸಮಿತಿ ಖಜಾಂಚಿ ಕೃಷ್ಣಾರೆಡ್ಡಿ ದೂರಿದರು.

ರೈತ ನೇಣಿಗೆ ಶರಣು

ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೂ ಕೂಡ ಸೂಚಿಸಲಾಗಿತ್ತು. ತನಗೆ ಉದ್ಯೋಗ ನೀಡುವಂತೆ ಸಿದ್ದ ರಾಜು ಕಳೆದ 4 ವರ್ಷಗಳಿಂದ ಕಾರ್ಖಾನೆ ಆಡಳಿತ ಮಂಡಳಿ ಮುಂದೆ ಮನವಿ ಸಲ್ಲಿಸುತ್ತಲೇ ಇದ್ದ ಎಂದು ಹೇಳಲಾಗಿದೆ. ಕಾರ್ಖಾನೆಯವರು ಉದ್ಯೋಗ ನೀಡ ದಿದ್ದಾಗ ಹಲವಾರು ಬಾರಿ ಕೆಐಎಡಿಬಿ ಅಧಿಕಾರಿಗಳಿಗೂ ಮನವಿ ಸಲ್ಲಿಸಿದ್ದಾನೆ. ಕೆಐಎಡಿಬಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಭೆಗಳಲ್ಲಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗ ನೀಡ ಬೇಕೆಂದು ತಿಳಿಸಿದ್ದರೂ ಕಾರ್ಖಾನೆಯವರು ತನಗೆ ಉದ್ಯೋಗ ನೀಡಿಲ್ಲ ಎಂದು ಸಿದ್ದರಾಜು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದಾನೆ.

ಇತ್ತೀಚೆಗೆ ಕಾರ್ಖಾನೆಯವರು ತನ್ನ ಹಾಗೂ ತನ್ನ ಕುಟುಂಬದವರ ವಿರುದ್ಧ ಕೇಸ್‌ಗಳನ್ನು ಹಾಕಿಸಿದ್ದರಿಂದ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿಯೂ ಪಾರ್ಲೆ ಆಗ್ರೋ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಪ್ಲಾಂಟ್ ಹೆಡ್ ರಾಮಪ್ರಸಾದ್ ಮತ್ತು ಹೆಚ್‌ಆರ್ ಮುಷೀದ್ ಉಲ್ಲಾಖಾನ್ ಅವರುಗಳೇ ತನ್ನ ಸಾವಿಗೆ ಕಾರಣ ಎಂದು ಸಿದ್ದರಾಜು ಡೆತ್ ನೋಟ್‌ನಲ್ಲಿ ಬರೆದಿದ್ದಾನೆ. ಈ ಸಂಬಂಧ ಡೆತ್ ನೋಟ್ ಸಮೇತ ಸಿದ್ದರಾಜು ಪತ್ನಿ ಬಿ. ರಕ್ಷಿತ ಸೋಮವಾರ ಬೆಳಗ್ಗೆ ನೀಡಿದ ದೂರಿನನ್ವಯ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಮುಷೀದ್ ಉಲ್ಲಾಖಾನ್ ಮತ್ತು ರಾಮಪ್ರಸಾದ್ ವಿರುದ್ಧ ಭಾರತೀಯ ದಂಡ ಸಂಹಿತೆ 306, 34ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಸಿದ್ದರಾಜು ಸಾವಿಗೆ ಕಾರ್ಖಾನೆಯವರೇ ಕಾರಣರಾಗಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಸಿದ್ದರಾಜು ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕೆಂದು ಆಗ್ರಹಿಸಿ ರೈತರು ಹಾಗೂ ಮೃತನ ಸಂಬಂಧಿಕರು ಕಾರ್ಖಾನೆ ಮುಂದೆ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಕಾರ್ಖಾನೆಗಾಗಿ ಭೂಮಿ ಪಡೆದುಕೊಂಡವರಿಗೆ ಕಾರ್ಖಾನೆಯವರು ಉದ್ಯೋಗ ನೀಡಬೇಕಾಗಿತ್ತು. ಸರ್ಕಾರ ಸೂಚಿಸಿದರೂ ಕೂಡ ಅವರು ಉದ್ಯೋಗ ನೀಡದೇ ಸರ್ಕಾರದ ಆದೇಶವನ್ನು ಉಲ್ಲಂಘಿಸಿದ್ದಾರೆ. ಈಗಾಗಲೇ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಸಿದ್ದರಾಜು ಕುಟುಂಬದವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಲಕ್ಷ ರೂ. ನೀಡಲಾಗುವುದು. ಕಾರ್ಖಾನೆ ವತಿಯಿಂದಲೂ ಪರಿಹಾರ ಕೊಡಿಸಲು ಪ್ರಯತ್ನಿಸಲಾಗುವುದು. ಸಿದ್ದರಾಜು ಪತ್ನಿಗೆ ಸರ್ಕಾರಿ ಕೆಲಸ ಕೊಡುವ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಬೆಂಬಲ ಬೆಲೆಯಡಿ ಖರೀದಿ

ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್ ಮಾತನಾಡಿ, 2023-2024 ನೇ ಸಾಲಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರ, ಸಾಮಾನ್ಯ ಭತ್ತ ಪ್ರತಿ ಕ್ವಿಂಟಾಲ್‌ಗೆ 2,183 ರೂ. ಹಾಗೂ ರಾಗಿ ಪ್ರತಿ ಕ್ವಿಂಟಾಲ್‌ಗೆ 3,846 ರೂ. ದರ ನಿಗದಿಪಡಿಸಿದೆ ಎಂದು ತಿಳಿಸಿದರು. ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್, ರಾಜ್ಯ ಉಗ್ರಾಣ ನಿಗಮದ ಪ್ರಾದೇಶಿಕ ಆಯುಕ್ತ ರೇಣುಕಾ ಸ್ವಾಮಿ ಹಾಗೂ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯರು ಹಾಜರಿದ್ದರು.

ಸಂಶೋಧನಾ ಕಾರ್ಯ ಗುಣಮಟ್ಟ ಆಧರಿಸಿ ವಿವಿಗಳ ಅನುದಾನಕ್ಕೆ ಶಿಫಾರಸ್ಸು

ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ॥ ಎಸ್.ಆರ್.ನಿರಂಜನ್

ಮೈಸೂರು, ನ.20(ಎಂಟಿವೈ)- ಶಿಕ್ಷಣ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಮುಂಬರುವ ಸಂಶೋಧನಾ ಕಾರ್ಯಗಳ ಗುಣಮಟ್ಟದ ಆಧಾರದ ಮೇಲೆ ವಿಶ್ವವಿದ್ಯಾಲಯಗಳಿಗೆ ಅನುದಾನ ಹಾಗೂ ಇನ್ನಿತರ ಸೌಲಭ್ಯ ಒದಗಿಸಲು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ತಿಳಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ಕೌಶಲಾಭಿವೃದ್ಧಿ ನಿಗಮ, ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಹಯೋಗದಲ್ಲಿ ನಾಲ್ಕು ಜಿಲ್ಲೆಗಳ ಪ್ರಥಮ ದರ್ಜೆ ಕಾಲೇಜುಗಳು ಬೋಧಕ ರಿಗಾಗಿ ಸೋಮವಾರ ಆಯೋಜಿಸಿದ್ದ 'ಔದ್ಯೋಗಿಕ ಕೌಶಲ್ಯ' ಬೋಧನೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧನಾ ಕೇಂದ್ರಗಳಲ್ಲಿ ಎಷ್ಟು ಮಂದಿ ಸಂಶೋಧನೆ ಮಾಡುತ್ತಿದ್ದಾರೆ, ಯಾವ ವಿಷಯ ಕುರಿತು ಸಂಶೋಧನೆ ನಡೆಯುತ್ತಿದೆ, ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಷ್ಟು ಸಂಶೋಧನೆ ನಡೆಯುತ್ತಿದೆ ಎಂದು ಮಾಹಿತಿ ಒದಗಿಸುವಂತೆ ರಾಜ್ಯದ ಎಲ್ಲಾ ವಿವಿಗಳಿಗೆ ಪತ್ರ ಬರೆದು ಮನವಿ ಮಾಡಿಕೊಳ್ಳಲಾಗಿದೆ. ಸಂಶೋಧನಾ ಕೇಂದ್ರಗಳ ಕಾರ್ಯವ್ಯಾಪ್ತಿ ಹಾಗೂ ಗುಣಮಟ್ಟ ಗಮನಿಸಿ ಸಂಶೋಧನಾ ಕೇಂದ್ರಗಳಿಗೆ ಅಗತ್ಯ ಸೌಲಭ್ಯ ಒದಗಿಸಲಾಗುತ್ತದೆ. ಸಂಶೋಧನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿರುವ ವಿವಿಗೆ ಪ್ರೋತ್ಸಾಹ, ಅನುದಾನ ದೊರೆಯಲಿದ್ದು, ಪ್ರಗತಿ ಕುಂಠಿತ ವಿವಿಗಳು ಸಂಶೋಧನೆ ಕಡೆಗೆ ಗಮನ ಹರಿಸುವಂತೆ ಸಲಹೆ ನೀಡಿದರು.

ನಮ್ಮ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸರಿಸಮವಾಗಿ ಬೆಳೆಯಬೇಕು. ಸ್ಪರ್ಧಾತ್ಮಕ ಯುಗಕ್ಕೆ ಅನುಗುಣವಾಗಿ ಗುಣಮಟ್ಟದ ಉನ್ನತ ಶಿಕ್ಷಣ ಒದಗಿಸುವ ಉದ್ದೇಶ ಉನ್ನತ ಶಿಕ್ಷಣ ಪರಿಷತ್‌ನದ್ದಾಗಿದೆ. ಆದ್ದರಿಂದ ಯಾವ ರೀತಿ ಶಿಕ್ಷಣ ಕೊಡಬೇಕು ಎಂಬುದು ಈಗಿನ ಸವಾಲು. ಇದರೊಂದಿಗೆ ಶಿಕ್ಷಣದೊಂದಿಗೆ ಕೌಶಲ್ಯವನ್ನೂ ವಿದ್ಯಾರ್ಥಿಗಳಿಗೆ ಕಲಿಸುವ ದೊಡ್ಡ ಜವಾಬ್ದಾರಿಯೂ ಬೋಧಕರ ಮೇಲಿದೆ. ಉತ್ಕೃಷ್ಟ, ಮೌಲ್ಯಾಧಾರಿತ, ಗುಣಮಟ್ಟ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಇದಕ್ಕೆ ಪೂರಕವಾಗಿ ಸಂಶೋಧನೆಗಳಾಗಬೇಕು. ಮುಂದುವರಿದ ವಿದೇಶ ವಿಶ್ವವಿದ್ಯಾಲಯಗಳಿಗೆ ಹೋಲಿಕೆ ಮಾಡಿದರೆ ನಮ್ಮಲ್ಲಿ ಸಂಶೋಧನೆಗಳ ಸಂಖ್ಯೆ ಕಡಿಮೆ. ಗುಣಮಟ್ಟದಲ್ಲೂ ಕೊರತೆ ಎದ್ದು ಕಾಣುತ್ತಿದೆ. ವಿದ್ಯಾರ್ಥಿಗಳಿಗೆ ಕಲಿಸುವುದರಷ್ಟೇ ಅಲ್ಲದೆ, ಕೌಶಲ್ಯ ಬೆಳೆಸಬೇಕು. ವಿದ್ಯಾರ್ಥಿಗಳು ಸಂವಹನ, ತಂಡದೊಂದಿಗೆ ಕಾರ್ಯ, ಸಮಸ್ಯೆಗೆ ಪರಿಹಾರಾತ್ಮಕ ಮನೋಭಾವ, ನಿರ್ವಹಣೆ ಸೇರಿದಂತೆ ಇನ್ನಿತರ ಕೌಶಲಗಳ ಕೊರತೆಯಿಂದ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳು ತನ್ನ ಸಾಮರ್ಥ್ಯ ಪ್ರದರ್ಶಿಸಲು ವಿಫಲವಾಗುತ್ತಿದ್ದಾರೆ. ಎಲ್ಲ ವಿದ್ಯಾರ್ಥಿಗಳ ಶೈಕ್ಷಣಿಕ ಹಿನ್ನೆಲೆ ಉತ್ತಮವಾಗಿ ಇರುವುದಿಲ್ಲ. 34 ಅಂಕ ಪಡೆದು ಉನ್ನತ ಶಿಕ್ಷಣಕ್ಕೆ ಬಂದಿರುವ ವಿದ್ಯಾರ್ಥಿಯನ್ನು 95 ಅಂಕ ಪಡೆದುಕೊಳ್ಳುವಂತೆ ಬೋಧಕರು ತಯಾರು ಮಾಡಬೇಕು ಎಂದು ಸಲಹೆ ನೀಡಿದರು.



ಇದೇ ವೇಳೆ ಕರ್ನಾಟಕ ರಾಜ್ಯ ಕೌಶಲಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಡಿ.ಗೌಡ ಮಾತನಾಡಿ, ಪ್ರಸ್ತುತ ಕಲಿಕಾ ಪ್ರಕ್ರಿಯೆ ಪಠ್ಯಕ್ರಮ ಕೇಂದ್ರೀತವಾಗಿದೆ. ಇದರಿಂದ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಾಗುತ್ತಿಲ್ಲ. ಇದರಿಂದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ರಾಜ್ಯದ ಮಕ್ಕಳು ವಿಫಲರಾಗುತ್ತಿದ್ದಾರೆ. ರೈಲ್ವೆ, ಆರ್‌ಬಿಐ, ಬ್ಯಾಂಕಿಂಗ್ ಸೇರಿದಂತೆ ರಾಷ್ಟ್ರಮಟ್ಟದ ಸ್ವಾಯತ್ತತೆ ಸಂಸ್ಥೆಗಳು ವರ್ಷಕ್ಕೆ 3 ಲಕ್ಷ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುತ್ತವೆ. ಅದರಲ್ಲಿ ರಾಜ್ಯದಿಂದ ಶೇ.2ರಷ್ಟು (600 ಜನರು) ಮಾತ್ರ ಆಯ್ಕೆಯಾಗುತ್ತಿದ್ದಾರೆ. 150 ಪಿಎಸ್‌ಐ ಹುದ್ದೆಗಳಿಗೆ 2 ಲಕ್ಷ ಅರ್ಜಿಗಳು ಬರುತ್ತವೆ. ಆದರೆ, ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ರಾಜ್ಯದವರು ಆಸಕ್ತಿ ತೋರುತ್ತಿಲ್ಲ. ಇದಕ್ಕೆ ಕಾರಣ ಕೌಶಲ ಕೊರತೆ ಎಂದು ಹೇಳಿದರು.

ರಾಜ್ಯದಲ್ಲಿ ವರ್ಷಕ್ಕೆ 60 ಸಾವಿರ ಇಂಜಿನಿಯರ್‌ಗಳು ಉತ್ತೀರ್ಣರಾಗಿ ಹೊರಬರುತ್ತಿದ್ದಾರೆ. ಈ ಪೈಕಿ ಶೇ.10-12ರಷ್ಟು ವಿದ್ಯಾರ್ಥಿಗಳಿಗೆ ಕೆಲಸ ದೊರೆಯುತ್ತಿದೆ. 36 ಸಾವಿರ ವಿದ್ಯಾರ್ಥಿಗಳಿಗೆ ಕೆಲಸ ದೊರೆಯುತ್ತಿಲ್ಲ. ಆದ್ದರಿಂದ ಪಠ್ಯಕ್ರಮದೊಂದಿಗೆ ಔದ್ಯೋಗಿಕ ಕೌಶಲವನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ ವಿಶೇಷಾಧಿಕಾರಿ ಡಾ.ಜಯಪ್ಪ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ವಿ.ಆರ್.ಶೈಲಜಾ, ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪ್ರೊ.ಡಿ.ಆನಂದ್, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕ ಪ್ರೊ.ಎನ್.ನಾಗರಾಜು ಸೇರಿದಂತೆ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಯಿಂದ ಅಂದಾಜು 400 ಜನ ಉಪನ್ಯಾಸಕರು ಪಾಲ್ಗೊಂಡಿದ್ದರು.

> **ಖಾಲಿ ಹುದ್ದೆ ಭರ್ತಿಗೆ ಮನವಿ**
> ರಾಜ್ಯದಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಇನ್ನು ಎರಡು ವರ್ಷದಲ್ಲಿ ಭರ್ತಿ ಮಾಡುವ ಭರವಸೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದು ಅನ್ನ ದಾಸೋಹದೊಂದಿಗೆ ಶಿಕ್ಷಣ ದಾಸೋಹ ನೀಡಲು ಮುಂದಾಗಿದ್ದಾರೆ. ರಾಜ್ಯ ಶಿಕ್ಷಣ ನೀತಿ ರಚನೆಗೂ ಆಯೋಗವನ್ನು ರಚಿಸ ಲಾಗಿದೆ. ಮುಂದಿನ ದಿನಗಳಲ್ಲಿ ಶಿಕ್ಷಣ, ಸಂಶೋಧನೆಗಳಿಗೆ ಹೆಚ್ಚಿನ ಅವಕಾಶ, ಉತ್ತೇಜನ ಸಿಗಲಿದೆ. ಬೋಧಕರ ವೇತನದ ಮೇಲೆಯೇ ಎಲ್ಲರಿಗೂ ಕಣ್ಣು. ಆದರೆ, ಅಷ್ಟೇ ಕೆಲಸ, ಜವಾಬ್ದಾರಿ ಇದೆ. ಅದಕ್ಕಾಗಿ ಇಷ್ಟು ವೇತನ ನೀಡಲಾಗುತ್ತದೆ. ಇದನ್ನು ಬೋಧಕರು ಕೆಲಸ ಮೂಲಕ ತೋರಿಸಿ ಕೊಡಬೇಕು. ಉನ್ನತ ಶಿಕ್ಷಣ ದಾಖಲಾತಿ ಪ್ರಮಾಣ ರಾಜ್ಯದಲ್ಲಿ ಶೇ.35ರಷ್ಟಿದೆ. ಇದನ್ನು ಶೇ.50ರಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದಕ್ಕೆ ಬೋಧಕರು ಸಹ ಸಜ್ಜಾಗಬೇಕು.
> - **ಪ್ರೊ.ಎಸ್.ಆರ್.ನಿರಂಜನ,** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ

ಅರಣ್ಯ ಭೂಮಿಯಲ್ಲಿ ಆಶ್ರಯ ನಿವೇಶನ

ಸಾಮಾಜಿಕ ಹೋರಾಟಗಾರ ಅಮೃತೇಶ್ ಆರೋಪ



ಮೈಸೂರು,ನ.20(ಎಂಟಿವೈ)- ಪಿರಿಯಾಪಟ್ಟಣ ತಾಲೂಕು ಬೈಲುಕುಪ್ಪೆ ಗ್ರಾಮದ ಗಡಿ ಭಾಗದಲ್ಲಿ 3 ಎಕರೆ ಅರಣ್ಯ ಭೂಮಿಯನ್ನು ಸ್ಥಳೀಯ ಶಾಸಕರ ಕುಮ್ಮಕ್ಕಿನಿಂದ ಆಶ್ರಯ ನಿವೇಶನಗಳಾಗಿ ಪರಿವರ್ತಿಸುವ ಹುನ್ನಾರ ನಡೆಯುತ್ತಿದೆ ಎಂದು ಸಾಮಾಜಿಕ ಹೋರಾಟಗಾರ ಎನ್.ಪಿ.ಅಮೃತೇಶ್ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೈಲುಕುಪ್ಪೆ ಗ್ರಾಮದ ಬಳಿ ಅರಣ್ಯ ಇಲಾಖೆಗೆ ಸೇರಿದ ಸರ್ವೆ ನಂ.76 ಮತ್ತು 31ರಲ್ಲಿ 238 ಎಕರೆ ಅರಣ್ಯ ಪ್ರದೇಶವಿದ್ದು, ಅದರಲ್ಲಿ 3 ಎಕರೆ ಭೂಮಿಯನ್ನು ಸ್ಥಳೀಯ ಶಾಸಕ ಹಾಗೂ ರೇಷ್ಮೆ ಮತ್ತು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರ ಕುಮ್ಮಕ್ಕಿನಿಂದ ವಸತಿ ಪ್ರದೇಶವನ್ನಾಗಿ ಪರಿವರ್ತಿಸಲು ಅಧಿಕಾರಿಗಳು ಮುಂದಾಗಿದ್ದಾರೆ. ಈಗಾಗಲೇ ರಾಜ್ಯದ ಎಲ್ಲೆಡೆ ಅರಣ್ಯ ಒತ್ತುವರಿ ತೆರವುಗೊಳಿಸುವುದಾಗಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿಕೆ ನೀಡುತ್ತ ಇರುವಾಗಲೇ, ಮೈಸೂರು ಜಿಲ್ಲೆಯಲ್ಲಿ ಉತ್ತಮ ವಾತಾವರಣದಿಂದ ಕೂಡಿದ್ದ ಅರಣ್ಯ ಪ್ರದೇಶದ ಭೂಮಿಯನ್ನು ವಸತಿ ಪ್ರದೇಶವಾಗಿ ಪರಿವರ್ತಿಸಲಾಗುತ್ತಿದೆ ಎಂದು ಕಿಡಿಕಾರಿದರು.

ಪಿರಿಯಾಪಟ್ಟಣ ತಾಲೂಕು ಬೈಲುಕುಪ್ಪೆ ಗಡಿ ಭಾಗದಲ್ಲಿ ಆಶ್ರಯ ಯೋಜನೆಗಾಗಿ 3 ಎಕರೆ ಜಮೀನು ಒತ್ತುವರಿ ಮಾಡಲಾಗಿದೆ. ಈ ಜಾಗದಲ್ಲಿ ಬೆಳೆದಿರುವ ಮರಗಳನ್ನು ತೆರವುಗೊಳಿಸಲಾಗುತ್ತಿದೆ. ಮರ ಕಡಿದು, ಭೂಮಿ ಸಮತಟ್ಟು ಮಾಡಲಾಗುತ್ತಿದೆ. ಈ ಬಗ್ಗೆ ಸರ್ಕಾರಿ ಆದೇಶ ನೀಡುವಂತೆ ಸ್ಥಳೀಯರು ಅಧಿಕಾರಿಗಳನ್ನು ಕೇಳಿದರೆ ಸಚಿವರ ಮೌಖಿಕ ಆದೇಶ ಇದೆ ಎಂದು ಹೇಳುತ್ತಾರೆ. ಅಧಿಕಾರಿಗಳ ಬೇಜವಾಬ್ದಾರಿ ಹೇಳಿಕೆಯಾಗಿದ್ದು, ಸಾರ್ವಜನಿಕರು ಪ್ರತಿಭಟನೆ ನಡೆಸಿದ ಪರಿಣಾಮ ಕಾಮಗಾರಿ ಸ್ಥಗಿತವಾಗಿದೆ. ಅರಣ್ಯ ಸಚಿವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ವಾಯ್ಸ್ ಆಫ್ ಪಬ್ಲಿಕ್ ಸಂಘಟನೆಯ ಸಂಚಾಲಕಿ ದೀಕ್ಷಾ ಅಮೃತೇಶ್, ವಕೀಲ ಸಾ.ತಿ.ಸದಾನಂದಗೌಡ ಇದ್ದರು.

ಅಮಿಟಿ ರೌಂಡ್ ಟೇಬಲ್‌ನಿಂದ ಇಂದು ಕೃತಕ ಕಾಲು ವಿತರಣೆ



ಮೈಸೂರು, ನ20(ಎಂಟಿವೈ)- ಮೈಸೂರು ಅಮಿಟಿ ರೌಂಟ್ ಟೇಬಲ್-156 ಹಾಗೂ ಮೈಸೂರು ಅಮಿಟಿ ಲೇಡಿಸ್ ಸರ್ಕಲ್-108 ವತಿಯಿಂದ ನಾಳೆ(ನ.21) ಮಧ್ಯಾಹ್ನ 12ಕ್ಕೆ ಅಗ್ರಹಾರದ ಶ್ರೀ ಅರ್ಥೋಟಿಕ್ಸ್ ಸೆಂಟರ್‌ನಲ್ಲಿ 11 ಮಂದಿಗೆ ಕೃತಕ ಕಾಲು ಹಾಗೂ ಇನ್ನಿತರ ಸಾಮಗ್ರಿ ವಿತರಿಸಲಾಗುತ್ತಿದೆ ಎಂದು ಮೈಸೂರು ಅಮಿಟಿ ರೌಂಟ್ ಟೇಬಲ್-156 ಸಂಸ್ಥೆಯ ಅಧ್ಯಕ್ಷ ವಿ.ದರ್ಶನ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜ ಸೇವಾ ಹಿನ್ನೆಲೆಯಲ್ಲಿ ಪ್ರತಿ ವರ್ಷವೂ ಮೈಸೂರು ಅಮಿಟಿ ರೌಂಟ್ ಟೇಬಲ್-156 ಹಾಗೂ ಮೈಸೂರು ಅಮಿಟಿ ಲೇಡಿಸ್ ಸರ್ಕಲ್-108 ವತಿಯಿಂದ ಕೃತಕ ಕಾಲು ಹಾಗೂ ಇನ್ನಿತರ ಸಾಮಗ್ರಿ ವಿತರಿಸಲಾಗುತ್ತಿದೆ. ಈ ವರ್ಷ 11 ಮಂದಿಗೆ 78 ಸಾವಿರ ರೂ. ಮೌಲ್ಯದ ಸಾಮಗ್ರಿ ವಿತರಿಸಲಾಗುತ್ತಿದೆ. ಕೃತಕ ಕೈ, ಕಾಲು ಸೇರಿದಂತೆ ಇನ್ನಿತರ ಕೃತಕ ಅಂಗಾಂಗ ಬಳಸುವ ವಿಕಲಚೇತನರು ಪ್ರತಿ 6 ತಿಂಗಳಿಂದ ವರ್ಷಕ್ಕೊಮ್ಮೆ ಕೃತಕ ವಸ್ತುಗಳನ್ನು ಬದಲಿಸಬೇಕಾಗಿದೆ. ಬಡ ಕುಟುಂಬದ ವಿಕಲಚೇತನರಿಗೆ ಕೃತಕ ಅಂಗಾಂಗ ಹೊಸದಾಗಿ ಖರೀದಿಸಲು ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಸಂಸ್ಥೆಯಿಂದ ನೆರವು ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 98450 52200 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಅಮಿಟಿ ರೌಂಟ್ ಟೇಬಲ್-156 ಕಾರ್ಯದರ್ಶಿ ಭುವನೇಶ್ವರ್ ಸಿಂಗ್, ಸದಸ್ಯ ದಕ್ಷ್, ಮೈಸೂರು ಅಮಿಟಿ ಲೇಡಿಸ್ ಸರ್ಕಲ್-108 ಅಧ್ಯಕ್ಷೆ ಕೆ. ರಶ್ಮಿ, ರೂಪಲ್ ಮೆಹ್ತಾ ಇದ್ದರು.

ಪಡುವಾರಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣೆ

ಮೈಸೂರು, ನ.20(ಎಂಕೆ)- ನಗರದ ಪಡುವಾರಹಳ್ಳಿಯ ಗಣಪತಿ ದೇವಸ್ಥಾನದ ಬಳಿ ಶ್ರೀ ವಿದ್ಯಾಗಣಪತಿ ಮತ್ತು ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಹಾಗೂ ಕನ್ನಡ ಕಲಾಭಿಮಾನಿಗಳ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಕನ್ನಡಾಂಬೆ ಭುವನೇಶ್ವರಿ ದೇವಿ ಫೋಟೋಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿದರು. ಶಿಬಿರದಲ್ಲಿ ಸುಯೋಗ್ ಆಸ್ಪತ್ರೆ, ಗೋಪಾಲಗೌಡ ಹಾಗೂ



ಎಎಸ್‌ಜಿ ಕಣ್ಣಿನ ಆಸ್ಪತ್ರೆ ವೈದ್ಯರಿಂದ ಆರೋಗ್ಯ ತಪಾಸಣೆ ನಡೆಸಲಾಯಿತು.

ನಗರಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್, ಗೋಪಾಲಗೌಡ ಆಸ್ಪತ್ರೆಯ ಡಾ.ಸುಶ್ರುತ್, ಸಂಘದ ಅಧ್ಯಕ್ಷ ರಾಮಚಂದ್ರ, ಮುಖಂಡರಾದ ಕೃಷ್ಣ, ಹೇಮಂತ್, ಪಾಪಣ್ಣ, ಕೃಪಾನಂದ, ಶ್ರೀನಿವಾಸ್, ಸೋಮಶೇಖರ್, ಯೋಗೇಶ್, ನರೇಂದ್ರಕುಮಾರ್, ಮಾದೇಶ್, ಆಕಾಶ್ ಮತ್ತಿತರರಿದ್ದರು.

ಬಸ್ ಡಿಕ್ಕಿ: ಪಾದಚಾರಿ ಮಹಿಳೆ ಸಾವು

ಮೈಸೂರು, ನ. 20- ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಪಾದಚಾರಿ ಮಹಿಳೆ ಸಾವನ್ನಪ್ಪಿದ ಘಟನೆ ಮೈಸೂರಿನ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ ಸಂಭವಿಸಿದೆ. ಕೆ.ಆರ್.ಮಿಲ್ ಕಾಲೋನಿ ನಿವಾಸಿ ಸತ್ಯಭಾಮ(55) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ನವೆಂಬರ್ 18ರಂದು ಸಂಜೆ 6.30ರ ಸಮಯದಲ್ಲಿ ಮನೆ ಕೆಲಸ ಮುಗಿಸಿಕೊಂಡು ನೆಲ್ಸನ್ ಮಂಡೇಲಾ ರಸ್ತೆಯ ಡಾಲ್ಫಿನ್ ಹೋಟೆಲ್ ಬಳಿ ರಸ್ತೆ ದಾಟುತ್ತಿದ್ದಾಗ ಎಲ್‌ಐಸಿ ವೃತ್ತದಿಂದ ಹೈವೇ ವೃತ್ತದ ಕಡೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ಕೆಎ 09-ಎಫ್ 5111) ಇವರಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಕೆಆರ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಎನ್‌ಆರ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತನ ಆತ್ಮಹತ್ಯೆಗೆ ಕಾರಣವಾದ ಖಾಸಗಿ ಕಂಪನಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರೈತಸಂಘ ಪ್ರತಿಭಟನೆ

ಮೈಸೂರು,ನ.20(ಎಂಟಿವೈ)- ಕೈಗಾರಿಕೆ ಸ್ಥಾಪನೆಗಾಗಿ ಭೂಮಿ ವಶಪಡಿಸಿಕೊಂಡು ಉದ್ಯೋಗ ನೀಡದೆ ಸುಳ್ಳು ದೂರು ದಾಖಲಿಸುವ ಮೂಲಕ ಯುವ ರೈತನ ಆತ್ಮಹತ್ಯೆಗೆ ಕಾರಣವಾದ ಖಾಸಗಿ ಕಂಪನಿ ಆಡಳಿತ ಮಂಡಳಿ ವಿರುದ್ಧ ಕಠಿಣ ಕ್ರಮ ಕೈಗೊಂಡು ಮೃತ ರೈತನ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ರೈತ ಸಂಘಟನೆ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಸರ್ಕಾರಿ ಮೆಡಿಕಲ್ ಕಾಲೇಜಿನ ಶವಾಗಾರದ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು ನಂಜನಗೂಡು ತಾಲೂಕಿನ ಅಡಕನಹಳ್ಳಿ ಗ್ರಾಮದ ಯುವ ರೈತ ಸಿದ್ದರಾಜು ಆತ್ಮಹತ್ಯೆ ಪ್ರಕರಣವನ್ನು ಸರ್ಕಾರ, ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಬೇಕು. ಕಾರ್ಖಾನೆ ಸ್ಥಾಪನೆಗಾಗಿ ರೈತ ಸಿದ್ದರಾಜು ಅವರ ಜಮೀನನ್ನು ವಶಪಡಿಸಿಕೊಂಡ ಜಿಲ್ಲಾಡಳಿತ ರೈತರಿಗೆ ನ್ಯಾಯ ಒದಗಿಸಲು ವಿಫಲವಾಗಿದೆ. ಭೂಮಿ ನೀಡಿದ ರೈತರಿಗೆ ಉದ್ಯೋಗ ನೀಡುವಂತೆ ಜಿಲ್ಲಾಡಳಿತ ಆದೇಶಿಸಿದ್ದರೂ, ಕಳೆದ ನಾಲ್ಕು ವರ್ಷದಿಂದ ಉದ್ಯೋಗ ನೀಡದೆ, ರೈತನ ವಿರುದ್ಧವೇ ಸುಳ್ಳು ಕ್ರಿಮಿನಲ್ ಕೇಸ್ ದಾಖಲಿಸಿದ ಕಾರಣ ಯುವ ರೈತ ಸಿದ್ದರಾಜು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಯಾರು ಕಾರಣ ಎಂದು



ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು, ಮೃತರ ಕುಟುಂಬದ ಸದಸ್ಯರಿಗೆ ನ್ಯಾಯ ಒದಗಿಸಿಕೊಡುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಈ ವೇಳೆ ರಾಜ್ಯ ರೈತ ಸಂಘದ ಮುಖಂಡ ಹೊಸೂರು ಕುಮಾರ್ ಮಾತನಾಡಿ, ಕೆಐಎಡಿಬಿ ನಂಜನಗೂಡು ತಾಲೂಕಿನ ವಿವಿಧ ಗ್ರಾಮ ವ್ಯಾಪ್ತಿಯ ನೂರಾರು ರೈತರಿಗೆ ಸೇರಿದ ಭೂಮಿಯನ್ನು ಕೈಗಾರಿಕಾ ಸ್ಥಾಪನೆ ಉದ್ದೇಶದಿಂದ ಭೂಸ್ವಾಧೀನಪಡಿಸಿಕೊಂಡಿದೆ. ರೈತರ ಭೂಮಿಯಲ್ಲಿ ವಿವಿಧ ಕೈಗಾರಿಕೆ ತಲೆ ಎತ್ತಿವೆ. ಸ್ಥಾಪನೆಯಾದ ಕೈಗಾರಿಕೆಯಲ್ಲಿ ಭೂಮಿ ನೀಡಿದ ರೈತ ಕುಟುಂಬಕ್ಕೆ ಉದ್ಯೋಗ ನೀಡುವಂತೆ ಜಿಲ್ಲಾಡಳಿತ ಆದೇಶ ನೀಡಿದೆ. ಆದರೂ ರೈತ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡದೆ ವಂಚಿಸಲಾಗುತ್ತಿದೆ. ನಾಲ್ಕು ವರ್ಷಗಳಿಂದ ಉದ್ಯೋಗಕ್ಕಾಗಿ ಅಲೆದು ಕೊನೆಗೆ ಉದ್ಯೋಗ ನೀಡುವಂತೆ ಒತ್ತಾಯಿಸಿ ಕಾರ್ಖಾನೆ ಮುಂದೆ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಸಿದ್ದರಾಜು ಹಾಗೂ ಅವರ ಕುಟುಂಬದ ಸದಸ್ಯರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ಇದರಿಂದ ಬೇಸತ್ತು ಸಿದ್ದರಾಜು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಜಮೀನು ಪಡೆದ ಪಾರ್ಲೆ ಆಗ್ರೋ ಕಂಪನಿಗೆ ಈ ಹಿಂದೆಯೇ ಜಿಲ್ಲಾಡಳಿತ ಉದ್ಯೋಗ ನೀಡುವಂತೆ ಆದೇಶಿಸಿತ್ತು. ಆದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಇದರಿಂದ ಮನನೊಂದ ಸಿದ್ದರಾಜು ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಕಾರಣವಾದ ಕಂಪನಿಯ ಹೆಚ್‌ಆರ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಕಂಪನಿ ಮಾಲೀಕರು ಸ್ಥಳಕ್ಕೆ ಬಂದು ಪರಿಹಾರ ಘೋಷಣೆ ಮಾಡಬೇಕು. ಜಿಲ್ಲಾ ಉಸ್ತುವಾರಿ ಸಚಿವರು ಮೃತ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೃತನ ತಂದೆ, ತಾಯಿ, ಪತ್ನಿ, ಸಹೋದರ, ಪ್ರಗತಿಪರ ಚಿಂತಕ ಉಗ್ರನರಸಿಂಹೇಗೌಡ, ರೈತ ಮುಖಂಡ ಹೊಸಕೋಟೆ ಬಸವರಾಜು, ಸಿಐಟಿಯು ಚಂದ್ರಶೇಖರ ಮೇಟಿ, ಬೊಕ್ಕಹಳ್ಳಿ ನಂಜುಂಡಸ್ವಾಮಿ, ಶಿರಮಳ್ಳಿ ಸಿದ್ದಪ್ಪ, ಹೆಜ್ಜಿಗೆ ಪ್ರಕಾಶ್, ಬಸವರಾಜು, ಪ್ರೇಮ್‌ಕುಮಾರ್, ಮರಂಕಯ್ಯ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿ 15 ವರ್ಷವಾಯ್ತು: ಸ್ವಾಯತ್ತತೆ ಮಾತ್ರ ಇಲ್ಲ

● ಕನ್ನಡ ಭಾಷೆಯ ಶಾಸ್ತ್ರೀಯ ಅಧ್ಯಯನ ತೆವಳುತ್ತಿದೆ! ● ಕರ್ನಾಟಕ ಸುವರ್ಣ ಸಂಭ್ರಮದಲ್ಲಿ ಈಡೇರದ ಬೇಡಿಕೆ ● ತಮಿಳಿಗೆ 10 ಕೋಟಿ, ಕನ್ನಡಕ್ಕೆ 1.60 ಕೋಟಿ ● ತಮಿಳಿನಲ್ಲಿ 90 ಪುಸ್ತಕ, ಕನ್ನಡದಲ್ಲಿ ಬರೀ 8 ಪುಸ್ತಕ ಪ್ರಕಟ ● ಶಾಶ್ವತ ಕಚೇರಿ ಇಲ್ಲ; ಕೇಂದ್ರ, ರಾಜ್ಯ ಸರ್ಕಾರದ ಇಚ್ಛಾಶಕ್ತಿ ಕೊರತೆ

● ಬಾಪುಲಿಂಗರಾಜ್ ಅರಸ್

ಮೈಸೂರು, ನ.20– ಭಾರತದ ಪುರಾತನ ಭಾಷೆಗಳಲ್ಲಿ ಒಂದಾದ ಕನ್ನಡಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಗೆ ಕೇಂದ್ರ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿದೆ. ಕನ್ನಡ ಶಾಸ್ತ್ರೀಯ ಭಾಷೆಯ ಇತಿಹಾಸದ ಬಗ್ಗೆ ಸಂಶೋಧನೆ ನಡೆಸಿ, ದಾಖಲು ಮಾಡಲು ನೀಡಿರುವ ಶಾಸ್ತ್ರೀಯ ಸ್ಥಾನಮಾನದ ಅಧ್ಯಯನ ಮಾತ್ರ 15 ವರ್ಷವಾದರೂ ಕುಂಟುತ್ತಾ ಸಾಗಿದೆ. 'ಕರ್ನಾಟಕ'ವೆಂದು ನಾಮಕರಣಗೊಂಡು 50 ವರ್ಷವಾಗಿರುವ ಈ ಸುಸಂದರ್ಭದ ವೇಳೆಯಾದರೂ ಕನ್ನಡ ಶಾಸ್ತ್ರೀಯ ಸ್ಥಾನ ಮಾನದ ನಿರೀಕ್ಷಿತ ಗುರಿ ತಲುಪಬಹುದು ಎಂಬ ಭರವಸೆ ಕೂಡ ಹುಸಿ



ಯಾಗಿದೆ. 15 ವರ್ಷವಾದರೂ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ದೊರೆತಿಲ್ಲ. ಶಾಶ್ವತ ನೆಲೆ ಕೂಡ ಇಲ್ಲದಂತಾಗಿದೆ. ಪ್ರಸ್ತುತ ಮಾನಸ ಗಂಗೋತ್ರಿಯ ಸಮಾಜ ಕಾರ್ಯ ವಿಭಾಗದ ಆವರಣದ ಕಟ್ಟಡವೊಂದರಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಭಾರತದಲ್ಲಿ 1,500 ಕ್ಕೂ ಹೆಚ್ಚಿನ ಭಾಷೆಗಳಿದ್ದು, 447 ಭಾಷೆಗಳು ಪ್ರಧಾನವಾಗಿವೆ. ಇದರಲ್ಲಿ 270 ಮಾತೃಭಾಷೆಗಳನ್ನು ವಿಶೇಷವಾಗಿ ಗುರುತಿಸಲಾಗಿದೆ. ಇವುಗಳಲ್ಲಿ 22 ಭಾಷೆಗಳನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸಲಾಗಿದೆ. ಇದರಲ್ಲಿ ಕನ್ನಡ ಕೂಡ ಒಂದಾಗಿದೆ. ಭಾರತದ ಪುರಾತನ ಇತಿಹಾಸ ಹೊಂದಿರುವ ದ್ರಾವಿಡ ಭಾಷಾ ವರ್ಗಕ್ಕೆ ಕನ್ನಡವೂ ಸೇರಿದೆ. ಇದಕ್ಕೆ 2 ಸಾವಿರ ವರ್ಷಗಳ ಇತಿಹಾಸವಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 2008, ಅಕ್ಟೋಬರ್ 31 ರಂದು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಮಾನ್ಯತೆ ನೀಡಿತು. ಹತ್ತಾರು ವರ್ಷಗಳಿಂದ ನಡೆದ ಹೋರಾಟದಿಂದ ಕನ್ನಡಿಗರ ಬೇಡಿಕೆ ಕೊನೆಗೂ ಈಡೇರಿತು. ಆದರೆ ಕನ್ನಡ ಶಾಸ್ತ್ರೀಯ ಸ್ಥಾನಮಾನದ ಅಧ್ಯಯನ ಕಾರ್ಯಗಳು 2015ರ ನಂತರ ಆರಂಭವಾಯಿತು. ಅಂದರೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಮಾನ್ಯತೆ ದೊರೆತರೂ ಅಧ್ಯಯನ ಹಾಗೂ ಸಂಶೋಧನಾ ಕಾರ್ಯ ಆರಂಭಗೊಳ್ಳಲು 7 ವರ್ಷಗಳೇ ಬೇಕಾಯಿತು. ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಅಧೀನದಲ್ಲಿ ಕಳೆದ 8 ವರ್ಷಗಳಿಂದ ವಿಶೇಷ ಅಧ್ಯಯನ ನಡೆಯುತ್ತಿದೆ. ಆದರೆ ಸಾಧಿಸಿರುವ ಗುರಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲ ಎಂಬುದು ಬೇಸರದ ಸಂಗತಿ.

2004, ಅಕ್ಟೋಬರ್ 12 ರಂದು ಕೇಂದ್ರ ಸರ್ಕಾರ ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಮಾನ್ಯತೆ ನೀಡಿತು. ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ ನಂತರ ಆ ಭಾಷೆಯಲ್ಲಿ ಆಗಿರುವ ಸಂಶೋಧನೆ, ಅಧ್ಯಯನ, ವಿಚಾರ ಸಂಕಿರಣಗಳು, ಪುಸ್ತಕ ಪ್ರಕಟಣೆ, ಗ್ರಂಥಾಲಯ ನಿರ್ಮಾಣ, ಹಸ್ತಪ್ರತಿಗಳ ಸಂಗ್ರಹ, ಶಾಸನಗಳ ಪತ್ತೆ ಸೇರಿದಂತೆ ಇತರೆ ಕಾರ್ಯಗಳು ಕನ್ನಡದಲ್ಲಿ ಆಗಿಲ್ಲ. ತಮಿಳಿಗೆ ಹೋಲಿಸಿದರೆ ನಮ್ಮ ಗುರಿ ಶೇಕಡ 30 ರಷ್ಟನ್ನು ದಾಟಿಲ್ಲ.

ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡಿದ ಒಂದು ವರ್ಷದ ನಂತರ ಕೇಂದ್ರ ಸರ್ಕಾರ ಸ್ವಾಯತ್ತತೆ ಕೂಡ ನೀಡಿತು. ಜೊತೆಗೆ ತಮಿಳು ಭಾಷೆಯ ಅಧ್ಯಯನ, ಸಂಶೋಧನೆ ಸೇರಿದಂತೆ ಇತರೆ ಸೌಲಭ್ಯಕ್ಕಾಗಿ ಒಂದು ವರ್ಷಕ್ಕೆ 10 ಕೋಟಿ ರೂಪಾಯಿ ನೀಡುತ್ತಿದೆ. ಸ್ವಾಯತ್ತತೆ ದೊರೆತ ಕಾರಣದಿಂದ ಸ್ವತಂತ್ರವಾಗಿ ಕೆಲಸ ನಿರ್ವಹಿಸುತ್ತಿದೆ. ತಮಿಳು ಶಾಸ್ತ್ರೀಯ ಸ್ಥಾನಮಾನದ ಉನ್ನತ ಸಂಸ್ಥೆಯ ಕಚೇರಿ ವಿಶಾಲವಾಗಿದ್ದು, ಅಂತರರಾಷ್ಟ್ರೀಯ ಗುಣಮಟ್ಟದ ಸುಸಜ್ಜಿತ ಕಟ್ಟಡವಿದೆ.

ಆದರೆ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ತಾರತಮ್ಯದಿಂದ ನೋಡಿದೆ ಎಂಬುದು ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಕನ್ನಡಕ್ಕೆ ಒಂದು ವರ್ಷಕ್ಕೆ ಗರಿಷ್ಠ 1.60 ಕೋಟಿ ರೂಪಾಯಿ ಅನುದಾನ ದೊರೆಯುತ್ತಿದೆ. ಈ ತನಕ ಎಷ್ಟೇ ಮನವಿ ಮಾಡಿದರೂ ಸ್ವಾಯತ್ತತೆ ನೀಡಿಲ್ಲ. 15 ವರ್ಷ ವಾದರೂ ಶಾಶ್ವತ ಸೂರಿಗೂ ಗತಿ ಇಲ್ಲದಂತಾಗಿದೆ.

ಮೈಸೂರಿನ ಮಾನಸಗಂಗೋತ್ರಿಯಲ್ಲಿ 4.14 ಎಕರೆ ಜಾಗ ಕೇಳಲಾಗಿತ್ತು. ತರುವಾಯ ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್ ಕಟ್ಟಡ ನೀಡುವಂತೆ ಮನವಿ ಮಾಡಲಾಯಿತು. ಆದರೆ ಈ ತನಕ ಶಾಶ್ವತ ಸೂರು ಕಲ್ಪಿಸುವ ಪ್ರಕ್ರಿಯೆಗಳು ನಡೆಯದಿರುವುದು ಬೇಸರದ ಸಂಗತಿ.

15 ವರ್ಷವಾದರೂ ಶಾಶ್ವತ ಕಚೇರಿ ತೆರೆಯಲು ಸಾಧ್ಯವಾಗದ ಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಸ್ವಾಯತ್ತತೆ ನೀಡುವುದೇ ಎಂಬ ಪ್ರಶ್ನೆ ಎದುರಾಗಿದೆ. ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಬೀದರ್‌ನಿಂದ ಚಾಮರಾಜನಗರದ ತನಕ ಜನಪ್ರತಿನಿಧಿಗಳು, ಅಧಿಕಾರಿಗಳು ಕನ್ನಡ ಪ್ರೇಮ ಮೆರೆದರು. ಕನ್ನಡ ಭಾಷೆ ಬಗ್ಗೆ ಭಾಷಣ ಬಿಗಿದರು. ಆದರೆ ಕನ್ನಡ ಶಾಸ್ತ್ರೀಯ ಸ್ಥಾನಮಾನದ ವಿಚಾರದಲ್ಲಿ ಕನ್ನಡ ಭಾಷೆಗೆ ಸಿಗಬೇಕಾದ ನ್ಯಾಯ ಪಡೆಯಲು ಯಾರೂ ದನಿ ಎತ್ತಲಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಇಚ್ಛಾಶಕ್ತಿ ಕೊರತೆ ಈ ಎಲ್ಲಾ ಲೋಪಗಳಿಗೆ ಮತ್ತೊಂದು ಪ್ರಮುಖ ಕಾರಣವಾಗಿದೆ.

ಚಿಂತನೆ, ಯೋಜನೆ, ಬದ್ಧತೆ ಇದೆ, ಆದರೆ ಸ್ವಾಯತ್ತತೆ ಇಲ್ಲ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ನಂತರ ಸ್ವಾಯತ್ತತೆ ನೀಡುವಂತೆ ಮನವಿ ಮಾಡಲಾಗಿದೆ. ಆದರೆ ಹಲವು ವರ್ಷಗಳಿಂದ ಈಡೇರಿಲ್ಲ. ಆದರೂ ಸರ್ಕಾರದಿಂದ ದೊರೆಯುವ ಅನುದಾನದಲ್ಲಿ ಅಧ್ಯಯನ, ಸಂಶೋಧನಾ ಕಾರ್ಯ ಅವಿರತವಾಗಿ ನಡೆಯುತ್ತಿದೆ. ಅಧ್ಯಯನ ಹಾಗೂ ಸಂಶೋಧನೆ ಮಾಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಹಳೆಗನ್ನಡ ಕಾವ್ಯದ ಅಧ್ಯಯನ, ಕನ್ನಡ ಶಾಸನ ಅಧ್ಯಯನ, ಹಸ್ತಪ್ರತಿ ಅಧ್ಯಯನ ಮತ್ತು ಜಾಗೃತಿ ಮೂಡಿಸುವ ಕಾರ್ಯಕ್ರಮ ಮಾಡಲು ಯೋಜಿಸಲಾಗಿದೆ.



ಎರಡು ವಿವಿಧ ಬಗೆಯ ಅಂತರರಾಷ್ಟ್ರೀಯ ವಿಚಾರ ಸಂಕಿರಣ ನಡೆಸಿ, ಪ್ರಬಂಧೋಪನ್ಯಾಸದ 8 ಪುಸ್ತಕಗಳನ್ನು ಬಿಡುಗಡೆ ಮಾಡಲು ತಯಾರಿ ಮಾಡಿಕೊಳ್ಳಲಾಗಿದೆ.

ಮೈಸೂರಿನ ಹೆಚ್.ಡಿ.ಕೋಟೆ, ವಿರಾಜಪೇಟೆ ಸೇರಿದಂತೆ ಇತರೆಡೆ ಅಪ್ರಕಟಿತ ಶಾಸನ ಹಾಗೂ ಶಿಲ್ಪ ಪತ್ತೆ ಹಚ್ಚುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಜೊತೆಗೆ ಮೈಸೂರು, ಬಳ್ಳಾರಿ ಸೇರಿದಂತೆ ಇತರೆಡೆಯ ವಿದ್ವಾಂಸರಿಂದ ಕನ್ನಡದ ಹಸ್ತಪ್ರತಿ ಸಂಗ್ರಹಿಸಲು ಸಿದ್ಧತೆ ನಡೆಸಲಾಗಿದೆ.

ಇದೆಲ್ಲರ ಜೊತೆಗೆ ಪ್ರಮುಖವಾಗಿ ಪಂಪ ಕಾವ್ಯದ ಬಗ್ಗೆ ಪ್ರತ್ಯೇಕವಾದ ಪ್ರಾಚೀನ ಪಠ್ಯಗಳ ಗ್ರಂಥಾಲಯ ಸ್ಥಾಪನೆ ಮಾಡುವ ಚಿಂತನೆ ಕೂಡ ಮಾಡಲಾಗಿದೆ. ಆದರೆ ಸ್ವಾಯತ್ತತೆ ಇಲ್ಲ, ಜೊತೆಗೆ ಹೆಚ್ಚಿನ ಅನುದಾನವಿಲ್ಲ.

- ಎಂ.ಎನ್.ತಳವಾರ್, ನಿರ್ದೇಶಕರು, ಕನ್ನಡ ಶಾಸ್ತ್ರೀಯ ಸ್ಥಾನಮಾನ ಕೇಂದ್ರ, ಮೈಸೂರು.

ನಾವು ಕೊಟ್ಟ ವರದಿ ಮೂಲೆಗೆ ಎಸೆದಿದ್ದಾರೆ

ಕೇಂದ್ರ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿದ ನಂತರ ನಾನು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತ ಕೆ.ಆರ್.ರಾಮಕೃಷ್ಣ ಚೆನ್ನೈಗೆ ಹೋಗಿ ತಮಿಳು ಶಾಸ್ತ್ರೀಯ ಸ್ಥಾನಮಾನದ ಅಧ್ಯಯನ ಹಾಗೂ ಸಂಶೋಧನೆ ಬಗ್ಗೆ ಮಾಹಿತಿ ಪಡೆದವು. ಕನ್ನಡ ಭಾಷೆಯ ಶಾಸ್ತ್ರೀಯ ಅಧ್ಯಯನ ಹಾಗೂ ಸಂಶೋಧನೆ ಮುಂದಿನ ಹತ್ತು ವರ್ಷದಲ್ಲಿ ಹೇಗಿರಬೇಕು ಎಂಬ ಬಗ್ಗೆ ಸರ್ಕಾರಕ್ಕೆ ವರದಿ ಕೂಡ ನೀಡಿದ್ದೆವು. ಆದರೆ ನಾವು ಕೊಟ್ಟ ವರದಿಯನ್ನು ಮೂಲೆಗೆ ಎಸೆದರು.



ಕನ್ನಡ ಶಾಸ್ತ್ರೀಯ ಸ್ಥಾನಮಾನ ಕೇಂದ್ರದ ಕಚೇರಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿದೆ. ಭಾರತೀಯ ಭಾಷಾ ಸಂಸ್ಥಾನದವರು ಇದನ್ನು ನಿಯಂತ್ರಿಸುತ್ತಿದ್ದಾರೆ. ಇದು ತಮ್ಮ ನಿಯಂತ್ರಣದಲ್ಲೇ ಇರಬೇಕೆಂಬುದು ಅವರ ಉದ್ದೇಶ. ಈ ತನಕ ಇದನ್ನು ಗಂಭೀರವಾಗಿ ಪರಿಗಣಿಸಿ ಯಾರೂ ಕೂಡ ವಿರೋಧ ಮಾಡಿಲ್ಲ.

ಕನ್ನಡ ಹಸ್ತಪ್ರತಿಗಳ ಸಂಗ್ರಹವಿರುವ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಸ್ತು ಸಂಶೋಧನಾಲಯದ ನಿರ್ದೇಶಕರಾಗಿ ಬಂದವರು ಸರಿಯಾದ ಯೋಜನೆ ರೂಪಿಸಲಿಲ್ಲ. ಈ ತನಕ ಸರಿಯಾದ ಕಾರ್ಯ ಮಾಡಿಲ್ಲ.

ತಮಿಳು ಶಾಸ್ತ್ರೀಯ ಸ್ಥಾನಮಾನ ಕೇಂದ್ರದವರು ಬಹಳಷ್ಟು ಕೆಲಸ ಮಾಡಿದ್ದಾರೆ. ಸುಸಜ್ಜಿತ ಕಟ್ಟಡ ಹೊಂದಿದ್ದು, ಸಂಶೋಧನೆ ಹಾಗೂ ಅಧ್ಯಯನದಲ್ಲಿ ಗರಿಷ್ಠ ಕೆಲಸ ಮಾಡಿದ್ದಾರೆ. ಈ ತನಕ 90 ಪುಸ್ತಕ ಪ್ರಕಟಿಸಿದ್ದಾರೆ. ಆದರೆ ಕನ್ನಡದಲ್ಲಿ ಕೇವಲ 8 ಪುಸ್ತಕಗಳನ್ನು ಮಾತ್ರ ಪ್ರಕಟಿಸಲಾಗಿದೆ.

- ಡಾ.ಪ್ರಧಾನ ಗುರುದತ್, ಸಾಹಿತಿ

ಸ್ವಾಯತ್ತತೆ ಪಡೆಯಲು ಈ ತನಕ ಪತ್ರವನ್ನೇ ಬರೆದಿಲ್ಲ

ಕನ್ನಡ ಶಾಸ್ತ್ರೀಯ ಸ್ಥಾನಮಾನದ ಅಧ್ಯಯನ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಎಂಬುದು ಬೇಸರದ ಸಂಗತಿ. ಸ್ವಾಯತ್ತತೆ ದೊರೆಯದಿರುವುದು ಸೇರಿದಂತೆ ಹಲವು ಅಂಶಗಳು ಇದಕ್ಕೆ ಕಾರಣ. ಕನ್ನಡ ಶಾಸ್ತ್ರೀಯ ಸ್ಥಾನಮಾನದ ಕಚೇರಿಯನ್ನು ಬೆಂಗಳೂರಿಗೆ ಸ್ಥಳಾಂತರ ಮಾಡಲು ಮುಂದಾದ ಸಂದರ್ಭದಲ್ಲಿ ನಾನು ಸೇರಿದಂತೆ ಸಾಹಿತಿಗಳೆಲ್ಲಾ ಸೇರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ವಿರೋಧ ಮಾಡಿದ್ದೆವು. ಮೈಸೂರಿನಲ್ಲಿ ಕನ್ನಡ ಭಾಷೆಯ ಹಸ್ತಪ್ರತಿ ಗ್ರಂಥಾಲಯ ಇರುವ ಕಾರಣ ಕಚೇರಿ ಮೈಸೂರಿನಲ್ಲೆ ಇರಬೇಕು. ಬೆಂಗಳೂರಿನಲ್ಲಿದ್ದರೆ ಕೆಲಸ ಮಾಡುವುದು ಕಷ್ಟ ಎಂದು ಮನವರಿಕೆ ಮಾಡಿದ್ದೆವು. ಇದರಿಂದ ಶಾಸ್ತ್ರೀಯ ಸ್ಥಾನಮಾನದ ಕಚೇರಿ ಕೊನೆಗೂ ಮೈಸೂರಿನಲ್ಲೇ ಉಳಿಯಿತು.



ತಮಿಳು ಶಾಸ್ತ್ರೀಯ ಕೇಂದ್ರಕ್ಕೆ ಸ್ಥಾನಮಾನಕ್ಕೆ ಸ್ವಾಯತ್ತತೆ ದೊರೆತಿದೆ. ಇದರಿಂದ ಆ ಭಾಷಿಗರು ಸ್ವತಂತ್ರವಾಗಿ ಕೆಲಸ ಮಾಡುತ್ತಾರೆ. ಅದರಂತೆ ಕನ್ನಡಕ್ಕೂ ಸ್ವಾಯತ್ತತೆ ದೊರೆಯಬೇಕು. ಇದರಿಂದ ಹೆಚ್ಚಿನ ಅನುದಾನ ದೊರೆತು ಸ್ವತಂತ್ರವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಆದರೆ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರು ಈ ತನಕ ಸ್ವಾಯತ್ತತೆ ಪಡೆಯುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಪತ್ರವನ್ನೆ ಬರೆದಿಲ್ಲ ಎಂಬ ಮಾಹಿತಿ ಇದೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿಲ್ಲವೆಂದರೆ ಸ್ವಾಯತ್ತತೆ ಹೇಗೆ ದೊರೆಯುತ್ತದೆ.

ಅಧ್ಯಯನಕ್ಕೆ ನಿಯೋಜಿಸುವ ಸಿಬ್ಬಂದಿಗೆ ಕೆಲಸದ ಭದ್ರತೆ ಇಲ್ಲ. ಜೊತೆಗೆ ನಿರ್ದೇಶಕರ ಅವಧಿ ಕೂಡ ಒಂದು ವರ್ಷಕ್ಕೆ ಸೀಮಿತಗೊಳಿಸಲಾಗಿದೆ. ಇಂತಹ ಆಡಳಿತಾತ್ಮಕ ವಿಚಾರಗಳಿಂದ ಸುಲಲಿತ ಹಾಗೂ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗೆಂದ ಮಾತ್ರಕ್ಕೆ ಅಧ್ಯಯನ ಕಾರ್ಯಗಳು ನಡೆದೇ ಇಲ್ಲ ಎಂದು ಹೇಳುವುದಿಲ್ಲ. ಆದರೆ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ.

- ಅರವಿಂದ ಮಾಲಗತ್ತಿ, ಸಾಹಿತಿ

ಇಂದು ಕೆಜಿ ಕೊಪ್ಪಲು ಶ್ರೀ ಮಾರಮ್ಮ 16ನೇ ವಾರ್ಷಿಕೋತ್ಸವದ ಅನ್ನ ಸಂತರ್ಪಣೆ



ಮೈಸೂರು, ನ20(ಎಸ್‌ಬಿಡಿ)– ಮೈಸೂರಿನ ಕನ್ನೇಗೌಡನ ಕೊಪ್ಪಲು(ಕೆಜಿ ಕೊಪ್ಪಲು) ಶ್ರೀ ಮಾರಮ್ಮ ದೇವಾಲಯದ 16ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ ಅಂಗವಾಗಿ ಮಂಗಳವಾರ ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಇದಕ್ಕೂ ಮುನ್ನ ಪ್ರಾತಃ ಪುಣ್ಯಾಹ, ಪ್ರಧಾನ ಕಳಸ ಸ್ಥಾಪನೆ, ಪೂಜೆ ಹಾಗೂ ದುರ್ಗಾ ಹೋಮ, ಪೂರ್ಣಾಹುತಿ, ಕಳಾ ಹೋಮ, ಕುಂಭಾಭಿಷೇಕ, ಅಲಂಕಾರ, ಮಹಾನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದದ ವಿನಿಯೋಗ ಜರುಗಲಿದೆ.

ಉತ್ಸವದ ಮೊದಲ ದಿನವಾದ ಇಂದು ಸಂಜೆ ಗೋಧೂಳಿ ಲಗ್ನದಲ್ಲಿ ಅನುಜ್ಞೆ, ಅಗ್ರತೀರ್ಥ ಸಂಗ್ರಹ ಸಮೇತ ಯಾಗಶಾಲೆ ಪ್ರವೇಶ, ಪ್ರವೇಶ ಬಲಿ, ಗಣಪತಿ ಪೂಜಾ ಪೂರ್ವಕ ಪುಣ್ಯಾಹ, ಪಂಚಗವ್ಯ ಸಾಧನ, ಪ್ರೋಕ್ಷಣೆ, ವಾಸ್ತು ಪೂಜೆ, ಗಣ ಹೋಮ, ನವಗ್ರಹ ಮೃತ್ಯುಂಜಯ ಪೂಜೆ ಹೋಮ, ಪೂರ್ಣಾಹುತಿ ನೆರವೇರಿತು. ನೂರಾರು ಭಕ್ತರು ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡಿದ್ದರು.

ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಚಾಮರಾಜೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಉತ್ಸವ

ಮೈಸೂರು, ನ.20(ಎಸ್‌ಬಿಡಿ)– ಮೈಸೂರಿನ ಡಿ.ಬನುಮಯ್ಯ ರಸ್ತೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮೊದಲ ಕಾರ್ತಿಕ ಸೋಮವಾರದ ವಿಶೇಷ ಪೂಜೆ ಹಾಗೂ ಉತ್ಸವ ನೆರವೇರಿತು.

ಶ್ರೀ ವೀರಭದ್ರೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ನಂತರ ಮಹಾಮಂಗಳಾರತಿ, ಸುಮಂಗಲಿಯರ ಪೂಜೆ ನೆರವೇರಿದ ನಂತರ ದೇವಾಲಯದ ಒಳಾವರಣದಲ್ಲಿ ದೇವರ ಉತ್ಸವ ಸೇರಿದಂತೆ ವಿವಿಧ ಕೈಂಕರ್ಯಗಳು ಪ್ರಧಾನ ಅರ್ಚಕ ಎಂ.ಎಸ್ ಮಹೇಶ್ ನೇತೃತ್ವದಲ್ಲಿ ಜರುಗಿದವು. ನೆರೆದಿದ್ದ ನೂರಾರು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ರಾತ್ರಿ ನಂದಿಧ್ವಜದ ಮೆರುಗಿನೊಂದಿಗೆ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ಸ್ವಾಮಿಯ ಉತ್ಸವ ನಡೆಯಿತು. ದೇವಾಲಯದ ಬಳಿಯಿಂದ ವಿವಿಧ ರಸ್ತೆಗಳಲ್ಲಿ ಸಾಗಿದ ಉತ್ಸವದಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು.



ವೀರನಗೆರೆ ನಿವಾಸಿಗಳಿಂದ ಕಾರಂಜಿಕೆರೆ ಬಳಿ ಅದ್ಧೂರಿ ಶ್ರೀ ಮಹದೇಶ್ವರ ಪರ

20 ಸಾವಿರಕ್ಕೂ ಅಧಿಕ ಭಕ್ತರಿಗೆ ಪ್ರಸಾದ ವಿನಿಯೋಗ; ದೇವರ ಉತ್ಸವ



ಮೈಸೂರು, ನ.20(ಎಸ್‌ಬಿಡಿ)– ಮೈಸೂರಿನ ವೀರನಗೆರೆ ನಿವಾಸಿಗಳಿಂದ ಕಾರಂಜಿಕೆರೆ ಸಮೀಪದ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಬಳಿ ಮೊದಲ ಕಾರ್ತಿಕ ಸೋಮವಾರ ಶ್ರೀ ಮಹದೇಶ್ವರ ಪರ ಅದ್ಧೂರಿಯಾಗಿ ನೆರವೇರಿತು.

ವೀರನಗೆರೆಯಲ್ಲಿರುವ ಪುರಾತನ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಹಾರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ ನೆರವೇರಿದ ಬಳಿಕ ಸಂಜೆ ಆರಂಭಗೊಂಡ ಬಾಯಿಬೀಗ ಮತ್ತಿತರ ಹರಕೆ ಸಮೇತ ಶ್ರೀ ಮಲೈಮಹದೇಶ್ವರಸ್ವಾಮಿ ಉತ್ಸವ ಕಾರಂಜಿಕೆರೆ ಏರಿ ಬಳಿಯ ಶ್ರೀ ಆಂಜನೇಯಸ್ವಾಮಿ ದೇವಾಲಯದ ಬಳಿ ತಲುಪಿತು. ನಂತರ ಕಳಸ ಪೂಜಾ ಕೈಂಕರ್ಯ ಹಾಗೂ ಶ್ರೀ ಮಹದೇಶ್ವರ ಪರ ಜರುಗಿತು. 20 ಸಾವಿರಕ್ಕೂ ಹೆಚ್ಚು ಭಕ್ತರು ಪ್ರಸಾದ ಸ್ವೀಕರಿಸಿ, ದೇವರ ಕೃಪೆಗೆ ಪಾತ್ರರಾದರು. ಅನ್ನ ಸಂತರ್ಪಣೆ ಬಳಿಕ ಅಶೋಕ ರಸ್ತೆ ಮೂಲಕ ಉತ್ಸವ ಸಾಗಿ, ವೀರನಗೆರೆ ಮಹದೇಶ್ವರ ದೇವಸ್ಥಾನದಲ್ಲಿ ಸಂಪನ್ನಗೊಂಡಿತು.

ಪರಂಪರಾಗತ ಆಚರಣೆ: ವೀರನಗೆರೆ ಸೇರಿದಂತೆ ವಿವಿಧೆಡೆಯ ಮಹದೇಶ್ವರ ಭಕ್ತರು ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಮೂಲಕ ತೆರಳಿ ದೇವರ ದರ್ಶನ ಮಾಡುವ ಪ್ರತೀತಿ ಇದೆ. ಪಾದಯಾತ್ರೆಯಲ್ಲಿ ತೆರಳುವ ಭಕ್ತರನ್ನು ಅತ್ಯಂತ ಭಕ್ತಿಭಾವದಿಂದ ಬೀಳ್ಕೊಡಲಾಗುತ್ತದೆ. ಮಹದೇಶ್ವರ ಬೆಟ್ಟದಿಂದ ಭಕ್ತರು ವಾಪಸ್ಸಾದ ನಂತರ ಮೊದಲ ಕಾರ್ತಿಕ ಸೋಮವಾರ ಮಹದೇಶ್ವರ ಸ್ವಾಮಿಯ ಉತ್ಸವ ನಡೆಸಿ, ಕಾರಂಜಿ ಕೆರೆ ಬಳಿಕ ಶ್ರೀ ಆಂಜನೇಯ ದೇವಸ್ಥಾನದ ಬಳಿ ಪರ ನಡೆಸುವುದು ತಲತಲಾಂತರಗಳಿಂದ ನಡೆದು ಬಂದಿದೆ. ವೀರನಗೆರೆಯ ವೀರಶೈವ ಲಿಂಗಾಯತರು, ಒಕ್ಕಲಿಗರು, ನಾಯಕ ಜನಾಂಗದವರು ಸೇರಿದಂತೆ ಎಲ್ಲಾ ಸಮುದಾಯದವರೂ ಒಮ್ಮತದಿಂದ ಈ ಆಚರಣೆಯನ್ನು ಮುನ್ನಡೆಸಿಕೊಂಡು ಬಂದಿರುವುದು ವಿಶೇಷ.



ದೋಷಪೂರಿತ, ನಕಲಿ ನಂಬರ್ ಪ್ಲೇಟ್, ತ್ರಿಬಲ್ ರೈಡಿಂಗ್ ವಿರುದ್ಧ ಕಾರ್ಯಾಚರಣೆ

ಮೈಸೂರು ಸಂಚಾರ ಪೊಲೀಸರಿಂದ 1713 ಪ್ರಕರಣ ದಾಖಲು



ಮೈಸೂರು, ನ.20(ಎಂಕೆ)– ಮೈಸೂರು ನಗರ ಸಂಚಾರ ಪೊಲೀಸ್ ವತಿಯಿಂದ ಕೈಗೊಂಡಿರುವ ದೋಷಪೂರಿತ, ನಕಲಿ ನಂಬರ್ ಪ್ಲೇಟ್ ಹಾಗೂ ತ್ರಿಬಲ್ ರೈಡಿಂಗ್ ವಿಶೇಷ ಕಾರ್ಯಾಚರಣೆಯಲ್ಲಿ 1713 ಪ್ರಕರಣಗಳನ್ನು ದಾಖಲಿಸಿ, ದಂಡ ವಸೂಲಿ ಮಾಡಲಾಗಿದೆ.

ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ 1713 ತ್ರಿಬಲ್ ರೈಡಿಂಗ್ ಪ್ರಕರಣಗಳನ್ನು ದಾಖಲಿಸಲಾಗಿದೆ. ನ.1 ರಿಂದ 19 ವರೆಗೆ 63 ದ್ವಿಚಕ್ರ ವಾಹನಗಳನ್ನು ತ್ರಿಬಲ್ ರೈಡಿಂಗ್ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿದೆ. ಹಾಗೆಯೇ ಕಳೆದ 18 ದಿನಗಳಲ್ಲಿ ದೋಷಪೂರಿತ, ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡು ಅಡ್ಡಾಡುತ್ತಿದ್ದವರ ವಿರುದ್ಧ ಐಪಿಸಿ ಸೆಕ್ಷನ್ 420 ರೀತ್ಯಾ ಕ್ರಮ ಜರುಗಿಸಿ, 12 ದ್ವಿಚಕ್ರವಾಹನಗಳನ್ನು ವಶಪಡಿಸಿಕೊಂಡು ದೋಷಪೂರಿತ ನಂಬರ್ ಪ್ಲೇಟ್ ವಿಶೇಷ ಕಾರ್ಯಾಚರಣೆಯಲ್ಲಿ 94 ಪ್ರಕರಣಗಳನ್ನು ದಾಖಲಿಸಲಾಗಿದೆ.

ಪ್ರಸಕ್ತ ವರ್ಷ ದೋಷಪೂರಿತ ನಂಬರ್ ಪ್ಲೇಟ್ ವಿಶೇಷ ಕಾರ್ಯಾಚರಣೆಯಲ್ಲಿ 1964 ಪ್ರಕರಣಗಳನ್ನು ದಾಖಲಿಸಿ, ದಂಡ ವಸೂಲಿ ಮಾಡಲಾಗಿದೆ ಎಂದು ಮೈಸೂರು ನಗರ ಸಂಚಾರ ಪೊಲೀಸ್ ವಿಭಾಗದ ಎಸಿಪಿ ಹೆಚ್.ಪರಶುರಾಮಪ್ಪ ತಿಳಿಸಿದರು.

ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ವಿಶೇಷ ತಪಾಸಣಾ ಕಾರ್ಯಾಚರಣೆ ಮುಂದುವರೆಯಲಿದೆ. ಸಂಚಾರ ನಿಯಮ ಉಲ್ಲಂಘಿಸಿದರೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಿದ್ದಾರ್ಥನಗರ ಸಂಚಾರ ಪೊಲೀಸ್ ಠಾಣೆ ಇನ್ಸ್‌ಸ್ಪೆಕ್ಟರ್ ಡಿ.ಯೋಗೇಶ್, ದೇವರಾಜ ಸಂಚಾರ ಠಾಣೆ ಇನ್ಸ್‌ಸ್ಪೆಕ್ಟರ್ ಮಮತ, ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ಇನ್ಸ್‌ಸ್ಪೆಕ್ಟರ್ ಲವ, ನರಸಿಂಹರಾಜ ಸಂಚಾರ ಪೊಲೀಸ್ ಠಾಣೆ ಇನ್ಸ್‌ಸ್ಪೆಕ್ಟರ್ ರೇಖಾಬಾಯಿ, ಕೆ.ಆರ್.ಸಂಚಾರ ಠಾಣೆ ಇನ್ಸ್‌ಸ್ಪೆಕ್ಟರ್ ಇರ್ಷಾದ್ ಅಹಮದ್, ಸಬ್‌ಇನ್ಸ್‌ಸ್ಪೆಕ್ಟರ್‌ಗಳಾದ ರಮೇಶ್, ಶಬರೀಷ್, ನಟರಾಜ್ ಉಪಸ್ಥಿತರಿದ್ದರು.



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಆದಿ ಚುಂಚನಗಿರಿ ಶಾಖಾ ಮಠಕ್ಕೆ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೋಮವಾರ ಭೇಟಿ ನೀಡಿದರು. ಈ ವೇಳೆ ಅವರನ್ನು ಒಕ್ಕಲಿಗ ಮುಖಂಡರು ಸನ್ಮಾನಿಸಿದರು. ಮಾಜಿ ಶಾಸಕ ಎಲ್. ನಾಗೇಂದ್ರ, ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಎಂ.ಜೆ ಕಿರಣ್‌ಗೌಡ, ಒಕ್ಕಲಿಗ ಸಂಘದ ನಿರ್ದೇಶಕರಾದ ಪ್ರಶಾಂತ ಗೌಡ, ರಾಜಕುಮಾರ್, ಚೇತನ್ ಗೌಡ, ರಾಕೇಶ್ ಗೌಡ, ಕೀರ್ತಿಗೌಡ, ದೀಪಕ್ ಗೌಡ , ಬಾಲು, ವಿಜಯಕುಮಾರ್, ಅರುಣ್ ಕುಮಾರ್ ಗೌಡ, ಹೇಮಂತ್ ಕುಮಾರ್, ಲಕ್ಷ್ಮೀ, ಸರಸ್ವತಿ, ಹೇಮ ನಂದಿಶ್ ಮುಂತಾದವರು ಉಪಸ್ಥಿತರಿದ್ದರು.

ಪರೀಕ್ಷೆ ಮುಂದೂಡಿಕೆಗೆ ಆಗ್ರಹಿಸಿ ಮಹಾರಾಜ ಪದವಿ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು, ನ.20(ಎಂಟಿವೈ)– ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಅಧ್ಯಾಪಕರನ್ನು ನೇಮಕ ಮಾಡುವವರೆಗೂ ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಕಾಲೇಜಿನ ಶತಮಾನೋತ್ಸವ ಭವನದ ಮುಂದೆ ಸೋಮವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು, ಮಹಾರಾಜ ಪದವಿ ಕಾಲೇಜಿನಲ್ಲಿ ಅಧ್ಯಾಪಕರ ಕೊರತೆಯಿದ್ದು, ತರಗತಿ ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಪಠ್ಯಕ್ರಮ ಪೂರ್ಣಗೊಳ್ಳದಿದ್ದರೂ ಪರೀಕ್ಷೆ ವೇಳಾಪಟ್ಟಿ ಪ್ರಕಟಿಸಲಾಗಿದೆ. ಪಾಠ ಕೇಳದೆ ಪರೀಕ್ಷೆ ಬರೆಯಬೇಕಾದ ಸ್ಥಿತಿ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕಾಲೇಜಿಗೆ ಅಗತ್ಯ ಸಂಖ್ಯೆಯಲ್ಲಿ ಅಧ್ಯಾಪಕರನ್ನು ನೇಮಿಸಬೇಕು. ಪಠ್ಯಕ್ರಮ ಪೂರ್ಣಗೊಂಡ ನಂತರವೇ ಪರೀಕ್ಷೆ ನಡೆಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕಾಲೇಜು ಪ್ರಾರಂಭವಾಗಿ ಒಂದು ತಿಂಗಳು ಕಳೆದರೂ ಅಧ್ಯಾಪಕರ ನೇಮಕವಾಗದೆ ತರಗತಿಗಳು ಸರಿಯಾಗಿ ನಡೆಯುತ್ತಿಲ್ಲ.



ಹಾಗಾಗಿ ಅಗತ್ಯ ಅಧ್ಯಾಪಕರನ್ನು ಕೂಡಲೇ ನೇಮಕ ಮಾಡಬೇಕು. ಗ್ರಂಥಾಲಯಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ಕಾಲೇಜಿನಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ತರಗತಿಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಗ್ರಂಥಾಲಯದಲ್ಲಿ ಓದಲು ದಿನ ಪತ್ರಿಕೆಗಳನ್ನು ಒದಗಿಸಬೇಕು. ಸರಿಯಾಗಿ ತರಗತಿ ನಡೆಸದೇ ಇರುವುದರಿಂದ ಪರೀಕ್ಷೆಗಳನ್ನು ಮುಂದೂಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಸುಭಾಷ್, ಪದಾಧಿಕಾರಿಗಳಾದ ನಿತಿನ್, ಚಂದ್ರಿಕಾ, ಬೀರಪ್ಪ ಅಭಿ, ವಿದ್ಯಾರ್ಥಿಗಳಾದ ಪುನೀತ್, ರಕ್ಷಿತ, ಸಿದ್ದರಾಜು, ಸತೀಶ್, ರಹಿಲ್ ಸೇರಿದಂತೆ ಹಲವರು ಭಾಗವಹಿಸಿದ್ದರು.



ಗಾಂಧೀಜಿಯ ಸ್ವಚ್ಛ ಭಾರತ ಕನಸು ವಿಕಸಿತ ಯಾತ್ರೆಯಲ್ಲಿ ಬಿಂಬಿತ

ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆ ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಅಭಿಮತ

ಹುಣಸೂರು, ನ.20– ವಿಕಸಿತ ಭಾರತ ಸಂಕಲ್ಪ ಯಾತ್ರೆ ಎಲ್ಲಾ ನಾಗರಿಕರು ಹಾಗೂ ವಿಶೇಷವಾಗಿ ಬುಡಕಟ್ಟು ಜನಾಂಗದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಒದಗಿಸುತ್ತಿರುವ ಯೋಜನೆಗಳ ವಿವರ ನೀಡಿ ಅನುಕೂಲವಾಗುತ್ತಿದೆ ಎಂದು ಕೇಂದ್ರದ ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆ ಸಚಿವೆ ಮೀನಾಕ್ಷಿ ಲೇಖಿ ಅಭಿಪ್ರಾಯಪಟ್ಟಿದ್ದಾರೆ.

ತಾಲೂಕಿನ ಹನಗೋಡು ಹೋಬಳಿಯ ನೇರಳ ಕುಪ್ಪೆ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಕೆನರಾ ಬ್ಯಾಂಕ್‌ನ ಮೈಸೂರು ಪ್ರಾದೇಶಿಕ ವಿಭಾಗದ ವತಿಯಿಂದ ಆಯೋಜಿಸಿದ್ದ ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ವಚ್ಛ ಭಾರತ, ಉಜ್ವಲ ಯೋಜನೆ, ಕಿಸಾನ್ ಸಮ್ಮಾನ್ ನಿಧಿ, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆ ಸೇರಿದಂತೆ ಹತ್ತು ಹಲವು ಯೋಜನೆಗಳ ಮಾಹಿತಿಯನ್ನು ವಿಕಸಿತ ಭಾರತ ಸಂಕಲ್ಪ ಯಾತ್ರೆ ಜಾಗೃತಿ ಮೂಡಿಸುತ್ತಿದೆ ಎಂದು ತಿಳಿಸಿದರು.

ವಿಶ್ವ ಶೌಚಾಲಯ ದಿನದ ಅಂಗವಾಗಿ ಗಾಂಧೀಜಿ ಕನಸಿನಂತೆ ಪ್ರಧಾನಿ ನರೇಂದ್ರ ಮೋದಿ ಅವರ ವಿಶೇಷ ಕಾಳಜಿಯೊಂದಿಗೆ ದೇಶದಾದ್ಯಂತ ಕೋಟ್ಯಾಂತರ ಶೌಚಾಲಯಗಳು ನಿರ್ಮಾಣವಾಗಿವೆ. ಹಿಂದುಳಿದ ಜಿಲ್ಲೆಗಳಲ್ಲಿ ಹೆಚ್ಚಿನ ಯೋಜನೆಗಳನ್ನು ತಂದಿರುವ ಕೇಂದ್ರ ಸರ್ಕಾರ ಆಶಾ ಕಾರ್ಯಕರ್ತೆಯರು, ಸ್ವಸಹಾಯ ಮಹಿಳಾ ಸಂಘಗಳ ಸಹಕಾರದೊಂದಿಗೆ ಮಹಿಳೆಯರಿಗಾಗಿ ವಿಶೇಷ ಯೋಜನೆಗಳನ್ನು ತಂದಿದೆ. ಸಿಕಲ್ ಸೆಲ್ ರಕ್ತ ಹೀನತೆ ಸಮಸ್ಯೆಯಿಂದ ಬುಡಕಟ್ಟು ಜನಾಂಗ ಹೆಚ್ಚಾಗಿ ಬಳಲುತ್ತಿದ್ದು, ಇಂತವರಿಗಾಗಿ ಆರೋಗ್ಯ ಇಲಾಖೆಯ ಮೂಲಕ ವಿಶೇಷ ಹಾರೈಕೆ ಯೋಜನೆ ಯಶಸ್ವಿಯಾಗಿ ಜಾರಿಯಲ್ಲಿದೆ ಎಂದು ಮಾಹಿತಿ ನೀಡಿದರು.

ಸಂಸದ ಪ್ರತಾಪ ಸಿಂಹ ಮಾತನಾಡಿ, ಬಯಲು ಬಹಿರ್ದೆಸೆ ಮುಕ್ತ ಭಾರತದ ಗುರಿ ಪ್ರಧಾನಿ ನರೇಂದ್ರ ಮೋದಿ ಅವರದ್ದಾಗಿದೆ. ಸ್ವಚ್ಛ ಭಾರತ ಕೇಂದ್ರ ಸರ್ಕಾರದ ಬಹುದೊಡ್ಡ ಕಾರ್ಯಕ್ರಮವಾಗಿದೆ. ವಿಕಸಿತ ಭಾರತ ಸಂಕಲ್ಪ ಯಾತ್ರೆ ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿ ಬಿತ್ತರಿಸುತ್ತಿದ್ದು, ಬಡವರಿಗೆ ಉಚಿತ ಅಕ್ಕಿ, ಉಜ್ವಲ ಯೋಜನೆ ಮೂಲಕ ಉಚಿತ ಗ್ಯಾಸ್ ಸಿಲಿಂಡರ್, ಆರೋಗ್ಯ ವಿಮೆಗಳು ಪರಿಶಿಷ್ಟ ವರ್ಗಕ್ಕೆ ವಿಶೇಷ ಸೌಲಭ್ಯಗಳನ್ನು ನೀಡುತ್ತಿರುವ ಕುರಿತು ಜನರಿಗೆ ಮಾಹಿತಿ ನೀಡಲಾಗುತ್ತಿದೆ. ಈ ಭಾಗದ ಅನಧಿಕೃತ ತಂಬಾಕು ಬೆಳೆಗಾರರಿಗೆ ತಂಬಾಕು ಮಾರಾಟಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಇದೇ ವೇಳೆ 2024ರ ಕ್ಯಾಲೆಂಡರ್ ಹಾಗೂ ಕೇಂದ್ರ ಸರ್ಕಾರಗಳ ಯೋಜನೆಗಳ ಮಾಹಿತಿಯ ಕಿರುಪುಸ್ತಕವನ್ನು ಅನಾವರಣ, ಪ್ರಧಾನಿ ಜನಸುರಕ್ಷಾ ಯೋಜನೆಯ ಫಲಾನುಭವಿಗಳಿಗೆ ಪ್ರಮಾಣ ಪತ್ರ, ಕಿಸಾನ್ ಕ್ರೆಡಿಟ್ ಕಾರ್ಡ್, ಉಜ್ವಲ ಉಚಿತ ಸಿಲಿಂಡರ್‌ಗಳನ್ನು ವಿತರಿಸಲಾಯಿತು. ರಾಸಾಯನಿಕ ಗೊಬ್ಬರ ಇಲಾಖೆಯಿಂದ ಯೂರಿಯಾ ಸಿಂಪಡಣೆ ಪ್ರಾತ್ಯಕ್ಷಿಕೆ ನೀಡಲಾಯಿತು.

ನೇರಳಕುಪ್ಪೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗೀತಾ ಸುರೇಶ್, ಉಪಾಧ್ಯಕ್ಷೆ ರುಕ್ಮಿಣಿ ಸುರೇಶ್, ಎಸ್‌ಬಿಐನ ಬಿಜಿಎಂ ರಾಜಶೇಖರ್, ಕೆನರಾ ಬ್ಯಾಂಕ್‌ನ ಬಿಜೆಎಂ ರಮೇಶ್, ಕೆನರಾ ಬ್ಯಾಂಕ್ ಆರ್‌ಎಂ ಪಿ.ಎಸ್. ಉಮೇಶ್, ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ ವಿ.ಎನ್.ನಾಗೇಶ್, ಎಸ್‌ಎಲ್‌ಬಿಸಿ ಜನರಲ್ ಮ್ಯಾನೇಜರ್ ಭಾಸ್ಕರ್ ಚಕ್ರವರ್ತಿ, ಕೇಂದ್ರ ಸನ್ಮಾನ್ ಇಲಾಖೆಯ ಅಧಿಕಾರಿ ಎಸ್.ಟಿ.ಶೃತಿ, ನಬಾರ್ಡ್ ಜಿಲ್ಲಾಮಟ್ಟದ ಅಧಿಕಾರಿ ಹಿತಾ ಸುವರ್ಣ, ಕರ್ನಾಟಕ ಬ್ಯಾಂಕ್ ಡಿಜಿಎಂ ಐಯ್ಯರ್ ಸುಂದರಂ ರಮೇಶ್, ಹುಣಸೂರು ಚೀಫ್ ಮ್ಯಾನೇಜರ್ ಕೆ.ಸುಲೋಚನಾ, ಹನಗೋಡು ಬ್ಯಾಂಕ್ ವ್ಯವಸ್ಥಾಪಕ ಶ್ರೀಜಿತ್, ತಾಪಂ ಮಾಜಿ ಸದಸ್ಯ ಕೆ.ಗಣಪತಿ, ತಾಲೂಕು ಬಿಜೆಪಿ ಅಧ್ಯಕ್ಷ ನಾಗಣ್ಣ, ಮಾಜಿ ಅಧ್ಯಕ್ಷ ಹನಗೋಡು ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಕಿರಂಗೂರು ಬಸವರಾಜ್ ಹಾಜರಿದ್ದರು.

ಹೆಜ್ಜೇನು ದಾಳಿಯಿಂದ ನಿವೃತ್ತ ಅಧಿಕಾರಿಗೆ ಗಾಯ

ಕಂಪಲಾಪುರ: ಹೆಜ್ಜೇನು ದಾಳಿಯಿಂದ ಕಂಪಲಾಪುರ ಸಹಕಾರ ಸಂಘದ ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿ ಕೆ.ಟಿ.ಪಾಪಣ್ಣ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಂಪಲಾಪುರ ಗ್ರಾಮದ ಹೆಗ್ಗೆರೆ ಕೆರೆಯ ಮೀನು ಸಾಕಾಣಿಕೆಯನ್ನು ಪಾಪಣ್ಣ ಮತ್ತು ಗ್ರಾಪಂ ಮಾಜಿ ಸದಸ್ಯ ಪ್ರಕಾಶ್‌ಗೌಡ ಗುತ್ತಿಗೆ ತೆಗೆದುಕೊಂಡಿದ್ದರು. ಆದರೆ, ಪಾಪಣ್ಣ ಅವರ ಜಮೀನಿನ ಮನೆಯ ಪಕ್ಕದಲ್ಲೇ ಕೆರೆ ಇದೆ. ಎಂದಿನಂತೆ ಭಾನುವಾರ ಸಂಜೆ ಮೀನಿನ ಬಲೆ ಸರಿಯಾಗಿದೆಯೋ, ಇಲ್ಲವೋ ಎಂದು ನೋಡಲು ಕೆರೆಯ ಪಕ್ಕದಲ್ಲಿ ನಡೆದುಕೊಂಡು ಬರುವಾಗ ಹೆಜ್ಜೇನು ದಾಳಿ ಮಾಡಿವೆ. ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಖಾಸಗಿ ಆಸ್ಪತ್ರೆಗೆ ಪಾಪಣ್ಣರನ್ನು ದಾಖಲಿಸಲಾಗಿದೆ.

ಇಂದಿರಾ ಗಾಂಧಿ ಯುವ ರಾಜಕಾರಣಿಗಳಿಗೆ ಮಾದರಿ



ನಂಜನಗೂಡು: ಇಂದಿರಾ ಗಾಂಧಿ ಅದ್ಭುತ ಪ್ರಧಾನಿಯಾಗಿ ತಮ್ಮ ರಾಜಕೀಯ ನಿಷ್ಠುರತೆ ಮತ್ತು ಅನೇಕ ಮಹತ್ತರವಾದ ದಿಟ್ಟ ನಿರ್ಧಾರಗಳನ್ನು ಕೈಗೊಳ್ಳುವ ಮೂಲಕ ದೇಶವನ್ನು ಪ್ರಗತಿಶೀಲವನ್ನಾಗಿ ಮುನ್ನಡೆಸಿದ ದಿಟ್ಟ ಮಹಿಳೆ. ಅವರು ಇಂದಿನ ಯುವ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಸ್ಮರಿಸಿದರು.

ನಗರದ ಆರ್.ಪಿ.ರಸ್ತೆಯ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಇಂದಿರಾ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, 1967ರಲ್ಲಿ ಚೀನಾದೊಂದಿಗೆ ಮಿಲಿಟರಿ ಸಂಘರ್ಷ, 1971ರಲ್ಲಿನ ಪೂರ್ವ ಪಾಕಿಸ್ತಾನದ ಜೊತೆಗೆ ಯುದ್ಧ ನಡೆಸಿ ಬಾಂಗ್ಲಾದೇಶದ ಸೃಷ್ಟಿಗೆ ಕಾರಣೀಭೂತರಾಗಿದ್ದು ಅವರ ದಿಟ್ಟತನಕ್ಕೆ ಸಾಕ್ಷಿಯಾಗಿದೆ. ದೇಶದಲ್ಲಿ ಬಡತನ ನಿರ್ಮೂಲನೆಗೊಳಿಸುವ ಸಲುವಾಗಿ ಹಸಿರು ಕ್ರಾಂತಿಯೊಂದಿಗೆ 20 ಅಂಶಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದರು ಎಂದರು.

ಜೀತ ಪದ್ಧತಿ ನಿರ್ಮೂಲನೆ, ಉಳುವವನೇ ಭೂಮಿಯ ಒಡೆಯ ಯೋಜನೆಗಳಂತಹ ಕ್ರಾಂತಿಕಾರಿ ಕಾರ್ಯಕ್ರಮದ ಮೂಲಕ ಬಡವರಿಗೆ ನೆರವಾದವರು. ಅಲ್ಲದೇ, ಎಲ್ಲಾ ದೇಶಗಳೊಂದಿಗೂ ಉತ್ತಮ ಬಾಂಧವ್ಯಗಳನ್ನು ಹೊಂದುವ ಮೂಲಕ ದೇಶವನ್ನು ಆರ್ಥಿಕವಾಗಿ ಸದೃಢಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಆದ್ದರಿಂದಲೇ ಅವರನ್ನು ಉಕ್ಕಿನ ಮಹಿಳೆ ಎಂದು ಕರೆಯುತ್ತಿದ್ದರು. ಅವರು ಇನ್ನಷ್ಟು ದಿನ ಬದುಕಿದ್ದರೆ ದೇಶ ಆರ್ಥಿಕತೆಯಲ್ಲಿ ಜಗತ್ತಿನಲ್ಲೇ ಮೊದಲನೆ ಸ್ಥಾನದಲ್ಲಿರುತ್ತಿತ್ತು. ಅವರನ್ನು ಕಳೆದುಕೊಂಡು ಭಾರಿ ನಷ್ಟವಾಗಿದೆ. ಅವರ ರಾಜಕೀಯ ದಿಟ್ಟತನ ಇಂದಿನ ಯುವ ರಾಜಕಾರಣಿಗಳು ಮತ್ತು ಮಹಿಳೆಯರಿಗೆ ಪ್ರೇರಣೆಯಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಮುಖಂಡರಾದ ವಿಜಯ್ ಕುಮಾರ್, ಎಂ.ಎನ್.ಮಂಜುನಾಥ್, ಗೋವಿಂದ ರಾಜು, ಶ್ರೀನಿವಾಸ್‌ಮೂರ್ತಿ, ಪ್ರದೀಪ್, ಜಯಮಾಲ ಬೀರೇಗೌಡ, ಸೌಭಾಗ್ಯ ಮತ್ತಿತರರು ಇದ್ದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ವರುಣ ವಿಧಾನಸಭಾ ಕ್ಷೇತ್ರದ ಪಕ್ಷದ ಕಾರ್ಯಕರ್ತರು ಅಭಿನಂದಿಸಿದರು. ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗನಾಯಕ, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಆಲಗೂಡು ಮಂಜು, ಪುರಸಭಾ ಸದಸ್ಯ ದಂಡಿ ಮಹದೇವ್, ಕೆಂಡನಕಪ್ಪಲು ಶ್ರೀನಿವಾಸ್ ಮತ್ತಿತರರಿದ್ದರು.

ಸಾಹಿತಿಗಳಿಗೆ ಓದುಗರ ಪ್ರೀತಿಯೇ ಪ್ರಶಸ್ತಿ



ಸರಗೂರು: ಪುಸ್ತಕ ಪ್ರಿಯರಿಗೆ ಗ್ರಂಥಗಳೇ ಸಂಪತ್ತು. ಸಾಹಿತಿಗಳಿಗೆ ಓದುಗರ ಪ್ರೀತಿಯೇ ಪ್ರಶಸ್ತಿ ಇದ್ದಂತೆ ಎಂದು ಸರಗೂರು ಪೊಲೀಸ್ ಠಾಣೆ ಪಿಎಸ್‌ಐ ನಂದೀಶ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮದಲ್ಲಿ ಗ್ರಂಥಾಲಯ ಪಿತಾಮಹಾ ಡಾ.ಎಸ್.ಆರ್. ರಂಗನಾಥನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಓದುಗರು ಮತ್ತು ಸಾರ್ವಜನಿಕರು ಗ್ರಂಥಾಲಯದ ಉಪಯೋಗ ಪಡೆಯಬೇಕು ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ಕಷ್ಟಪಟ್ಟು ಓದುವುದಕಿಂತ ಇಷ್ಟಪಟ್ಟು ಓದಿದರೆ ಜ್ಞಾನವೃದ್ಧಿಯಾಗಿ ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಲಿದೆ ಎಂದರು.

ವಿದ್ಯಾರ್ಥಿಗಳಿಗೆ ಓದಿಕಡೆ ಹೆಚ್ಚು ಗಮನವಿರಬೇಕು. ನಿಮ್ಮನ್ನು ಸಾಕಿಸಲುಹಿದ ತಂದೆ–ತಾಯಿ–ಕುಟುಂಬ ಹಾಗೂ ಸಮಾಜಕ್ಕೆ ಮಾದರಿಯಾಗಬೇಕು ಎಂದು ಗ್ರಂಥಾಲಯ ಹಾಗೂ ಓದುಗರ ನಡುವಿನ ಸಂಬಂಧದ ಭಾವನೆಯನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಂಥಾಲಯ ಸಪ್ತಾಹ ಅಂಗವಾಗಿ ಪಿಎಸ್‌ಐ ನಂದೀಶ್ ಕುಮಾರ್ ಅವರನ್ನು ಗ್ರಂಥಾಲಯ ಪ್ರಭಾರ ಧಾರಕರು ಮತ್ತು ಓದುಗರು ಸನ್ಮಾನಿಸಿದರು.

ಮಹಮದ್ ಇಮ್ರಾನ್, ಗ್ರಂಥಪಾಲಕ ಮೇಲ್ವಿಚಾರಕರಾದ ಬಿದ ರಹಳ್ಳಿ ಮುತ್ತು. ಮಾದಾಪುರ, ಕೆ.ವಿ. ಶೈಲೇಶ್, ಹಂಚಿಪುರ ಶಶಿಕಲಾ, ಸಹಾ ಯಕಿ ವರ್ಷಾ, ಓದುಗರಾದ ಸಿಂಧು, ರಕ್ಷಿತಾ, ಚಿನ್ಮಯಿ, ಸಂಪತ್, ಸೋಮೇಶ್, ವಿವೇಕ್, ಮಧು ಇತರರು ಹಾಜರಿದ್ದರು.

ನಾಳೆ ಗಾವಡಗೆರೆಯಲ್ಲಿ ಜನತಾ ದರ್ಶನ

ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ನ.22ರಂದು ಬೆಳಗ್ಗೆ 11 ಗಂಟೆಗೆ ಗಾವಡಗೆರೆಯ ಮರಾಠ ಸಮುದಾಯ ಭವನದದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ತಾಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಭಾಗವಹಿಸಲಿದ್ದು, ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಉಪತಹಶೀಲ್ದಾರ್ ಅರುಣ್ ಕುಮಾರ್ ಹಾಗೂ ಪಿಡಿಒ ಮಂಜುಳಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಕೊಪ್ಪಲಿನಲ್ಲಿ ಸೋಮವಾರ ರಾತ್ರಿ ನೂರಾರು ಅಯ್ಯಪ್ಪ ಮಾಲಾಧಾರಿಗಳು ಇರುಮುಡಿ ಹೊತ್ತು ಶಬರಿಮಲೆಗೆ ಯಾತ್ರೆ ಹೊರಟರು.

ಮನೆಗೆ ನುಗ್ಗಿ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನ

ಬಿಡಿಸಲು ಬಂದ ಆಕೆಯ ಮಗಳಿಗೆ ಮಚ್ಚಿನಿಂದ ಹಲ್ಲೆ ನಡೆಸಿ ಪರಾರಿ

ಹುಣಸೂರು: ಮನೆಗೆ ನುಗ್ಗಿ ಮಹಿಳೆ ಮೇಲೆ ಅತ್ಯಾಚಾರಕ್ಕೆ ಮುಂದಾಗಿದ್ದ ವ್ಯಕ್ತಿ ಬಿಡಿಸಲು ಬಂದ ಆಕೆಯ ಮಗಳಿಗೆ ಮಚ್ಚಿನಿಂದ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ತಾಲೂಕಿನ ಗಾಗೇನಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಲೇಟ್ ತಮ್ಮಯ್ಯನವರ ಮಗ ಶ್ರೀನಿವಾಸ್ ಅಲಿಯಾಸ್ ಶೀನಾ ಎಂಬಾತ ಅತ್ಯಾಚಾರಕ್ಕೆ ಮುಂದಾಗಿ ಮಚ್ಚಿನಿಂದ ಹಲ್ಲೆ ನಡೆಸಿ ಪರಾರಿಯಾದ ಆರೋಪಿ. ಹಲ್ಲೆಗೊಳಗಾದ ಮಗಳು ಹುಣಸೂರಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದಾಳೆ. ಮಹಿಳೆಯ ಪತಿ ಒಂದು ವರ್ಷದ ಹಿಂದೆ ಮೃತಪಟ್ಟಿದ್ದು, ಆಗಿನಿಂದ ಆರೋಪಿ ಶ್ರೀನಿವಾಸ್ ಆಕೆಯನ್ನು ಕೆಟ್ಟದಾಗಿ ನೋಡುವುದು ಹಾಗೂ ಮಾತನಾಡುತ್ತಿದ್ದನು. ಆದರೆ, ಈತ ಭಾನುವಾರ ಸಂಜೆ ಮನೆಯಲ್ಲಿ ಯಾರೂ ಇಲ್ಲ ಎಂದು ತಿಳಿದು ಆಕೆಯ ಮೇಲೆ ಅತ್ಯಾಚಾರಕ್ಕೆ ಮುಂದಾಗಿದ್ದಾನೆ. ಈ ವೇಳೆ ತಾಯಿಯ ಕಿರುಚಾಟ ಕೇಳಿ ಮಗಳು ಬಿಡಿಸಲು ಬಂದಾಗ ಪಕ್ಕದಲ್ಲೇ ಇದ್ದ ಮಚ್ಚಿನಿಂದ ಆಕೆಯ ತಲೆಗೆ ಹೊಡೆದು ಪರಾರಿಯಾಗಿದ್ದಾನೆ.

ನಂತರ ವಿಷಯ ತಿಳಿದು ಮಹಿಳೆಯ ಮೈದ ಭೈರವ ಆರೋಪಿ ಶ್ರೀನಿವಾಸ್ ಮನೆಗೆ ತೆರಳಿ ಘಟನೆ ಬಗ್ಗೆ ಕೇಳಲು ಮುಂದಾದಾಗ ಆರೋಪಿಯ ತಮ್ಮ ಶೇಖರ ಮತ್ತು ಅಕ್ಕ ಮಂಚಮ್ಮ, ಭಾವ ದೇವರಾಜು ಹಾಗೂ ತಾಯಿ ಬೋರಮ್ಮ ಅವರು ದೊಣ್ಣೆಯಿಂದ ಭೈರವಗೆ ಹಲ್ಲೆ ನಡೆಸಿದ್ದಾರೆ. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಕ್ಕಳ ಪ್ರತಿಭೆ ಗುರುತಿಸುವುದು ಶಿಕ್ಷಕರ ಜವಾಬ್ದಾರಿ

● ಶಾಸಕ ಅನಿಲ್ ಚಿಕ್ಕಮಾದು ಅಭಿಮತ ● ಹೆಚ್.ಡಿ.ಕೋಟೆಯಲ್ಲಿ ಕಲೋತ್ಸವ



ಹೆಚ್.ಡಿ.ಕೋಟೆ: ಶಾಲಾ ಮಕ್ಕಳ ಪ್ರತಿಭೆ ಗುರುತಿಸಿ ರಾಜ್ಯ ಹಾಗೂ ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.


ಪಟ್ಟಣದ ಸೇಂಟ್ ಮೇರಿಸ್ ಶಾಲಾ ಆವರಣದಲ್ಲಿ ಆಯೋಜಿಸಿದ್ದ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳು ಬಹಳಷ್ಟು ಪ್ರತಿಭೆಯುಲ್ಲಿ ಮುಂದಿದ್ದಾರೆ. ಶಿಕ್ಷಕರು ಪಾಠ ಪ್ರವಚನದ ಜತೆಗೆ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸುವ ಕೆಲಸ ಮಾಡಬೇಕಾಗಿದೆ. ಹೆಚ್.ಡಿ.ಕೋಟೆ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿಯನ್ನ ಕಟ್ಟಿಕೊಂಡಿತ್ತು. ಆದರೆ, ಈ ಹಣೆಪಟ್ಟಿಯನ್ನ ಅಳಿಸುವ ನಿಟ್ಟಿನಲ್ಲಿ ನಾನು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದೇನೆ ಎಂದರು.

ತಾಲೂಕಿನಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ಸಾಕಷ್ಟು ಅನುದಾನಗಳನ್ನು ತಂದು ನೂತನ ಕಟ್ಟಡ ನಿರ್ಮಾಣ ಹಾಗೂ ಇತರೆ ಮೂಲ ಸೌಕರ್ಯಗಳಿಗೆ ಅನುಕೂಲ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲೂ ಸರ್ಕಾರಿ ಶಾಲೆಗಳ ಉಳಿವಿಗೆ ಶಿಕ್ಷಕರು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಹೆಚ್.ಡಿ.ಕೋಟೆ ಪಟ್ಟಣದಲ್ಲಿ ವಿಶಾಖ ವಿದ್ಯಾರ್ಥಿ ಜಿ–ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಡ್ರಾಮಾ ಜೂನಿಯರ್ಸ್‌ಗೆ ಆಯ್ಕೆಯಾಗಿರುವುದು ತಾಲೂಕಿಗೆ ಹೆಮ್ಮೆಯ ವಿಚಾರವಾಗಿದೆ. ಈ ಕಾರ್ಯಕ್ರಮದಲ್ಲಿ ಜಯಗಳಿಸಿ ರಾಜ್ಯ ಹಾಗೂ ತಾಲೂಕಿಗೆ ಕೀರ್ತಿ ತರುವಂತಾಗಲಿ ಎಂದು ಶಾಸಕರು ಹಾರೈಸಿದರು.

ವಿವಿಧ ಶಾಲಾ ಮಕ್ಕಳುಗಳು ಜಾನಪದ, ಭಕ್ತಿಗೀತೆ, ಸಮೂಹ ನೃತ್ಯ, ಭರತನಾಟ್ಯ, ಕಂಠ ಪಾಠ, ಚರ್ಚಾ ಸ್ಪರ್ಧೆ, ಆಶುಭಾಷಣ, ಮಣ್ಣಿನ ಮಾದರಿ ತಯಾರಿ, ಛದ್ಮವೇಷ ಸ್ಪರ್ಧೆಯಲ್ಲಿ ಅರ್ಧನಾರೀಶ್ವರ, ಲಕ್ಷ್ಮೀವೆಂಕಟೇಶ್ವರ, ಬುದ್ಧ, ಶಬರಿಗಿರಿ ವಾಸ ಅಯ್ಯಪ್ಪ, ಡೈನೋಸರ್, ಸರಸ್ವತಿ, ಜೇನುನೊಣ, ಕೃಷ್ಣ, ಕೇರಳದ ತಯ್ಯಂ ಸೇರಿದಂತೆ ವಿವಿಧ ವೇಷಭೂಷಣ ಧರಿಸಿ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಮಾರಯ್ಯ, ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಾದೇವಯ್ಯ, ತಾಲೂಕು ಪ್ರಾಥಮಿಕ ಶಿಕ್ಷಕರ ಅಧ್ಯಕ್ಷ ಚಂದ್ರ ಕುಮಾರ್, ದೈಹಿಕ ಶಿಕ್ಷಣ ಪರಿವೀಕ್ಷಕ ರಾಮ ಪ್ರಸಾದ್, ಪುರಸಭಾ ಸದಸ್ಯ ಮಧು, ಪಪಂ ಸದಸ್ಯೆ ಸಣ್ಣತಾಯಮ್ಮ, ನಾಗನಹಳ್ಳಿ ಪ್ರದೀಪ್, ಜಿನ್ನಳ್ಳಿ ರಾಜನಾಯಕ, ಬಿ.ಎಸ್.ಸತೀಶ್, ಸೋಮಸುಂದರ್, ಕೆಂಪರಾಜು ಪ್ರಮೋದ್, ವಸಂತ್‌ಕುಮಾರ್, ಎಂ.ಯಶ್ವಂತ್, ನಿರ್ಮಲಾ, ಕೆ.ಎಲ್.ರೂಪಾ, ರೇಖಾ, ಪ್ರತಿಭಾ, ಎಂ.ಸಿ. ರಾಜೇಶ್ವರಿ, ಬಬಿತಾರಾಣಿ, ಸುರೇಶ್, ಮಹೇಶ್, ಪೋಷಕರು ಭಾಗವಹಿಸಿದ್ದರು.



ಕಲೋತ್ಸವ ಕಾರ್ಯಕ್ರಮದಲ್ಲಿ ಗಮನ ಸೆಳೆದ ಕೃಷ್ಣನ ವೇಷ ಧರಿಸಿದ್ದ ವಿದ್ಯಾರ್ಥಿ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಂಗಳ ವರುಂ(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಪಾನ್ (ಇ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಸಪ್ತ ಸಾಗರದಾಚೆ ಎಲ್ಲೋ–ಸೈಡ್ B(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಂಗಳ ವರುಂ (ಕ)	4 ಪ್ರದರ್ಶನಗಳು
ಪ್ರಭಾ	
ನೇತ್ರಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಟೈಗರ್ 3(ಹಿಂ):** ಬೆ.10.20ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ.
ಸ್ಕ್ರೀನ್ 2	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, **ರಾಜಯೋಗ (ಕ):** ಮ.1.15ಕ್ಕೆ, **ನೇತ್ರಂ (ಕ):** ಸಂ.4.30ಕ್ಕೆ, **ಗರಡಿ (ಕ):** ರಾ.7.10ಕ್ಕೆ, **ಸ್ಪಾರ್ಕ್ ಲೈಫ್ (ತೆ):** ರಾ.10ಕ್ಕೆ.
ಸ್ಕ್ರೀನ್ 3	**ಟ್ರೋಲ್ಸ್ ಬ್ಯಾಂಡ್ ಟುಗೆದರ್ (3ಡಿ)(ಇಂ):** ಬೆ.11ಕ್ಕೆ, ಮ.3.35ಕ್ಕೆ, ಸಂ.5.30ಕ್ಕೆ, **ಬೆಂಬಿಡದ ನಾವಿಕ (ಕ):** ಮ.1ಕ್ಕೆ, **ಶೇಶಮ್ ಮೈಕ್ ಇಲ್ ಫಾತಿಮಾ (ಮ):** ರಾ.7.30ಕ್ಕೆ, **ದಿ ಹಂಗರ್ ಗೇಮ್ಸ್ (ಇಂ):** ರಾ.10.10ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.9ಕ್ಕೆ, ಮ.12.10ಕ್ಕೆ, ಸಂ.3.20ಕ್ಕೆ, ಸಂ.6.30ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	**ಟೈಗರ್ 3 (ಹಿಂ):** ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	**ಮಂಗಳವಾರಂ (ತೆ):** ಬೆ.9.10ಕ್ಕೆ, ಮ.12.25ಕ್ಕೆ, ಸಂ.6.45ಕ್ಕೆ, **ಗರಡಿ (ಕ):** ಮ.3.40ಕ್ಕೆ, **ಟೈಗರ್ 3 (ಹಿಂ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ದಿ ವೆಕೆಂಟ್ ಹೌಸ್ (ಕ):** ಬೆ.11ಕ್ಕೆ, ಸಂ.4.10ಕ್ಕೆ, **ರಾಜಯೋಗ (ಕ):** ಮ.1.05ಕ್ಕೆ, ಸಂ.6.15ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, **ಟೈಗರ್ 3 (ಹಿಂ):** ಸಂ.4.20ಕ್ಕೆ.
ಸ್ಕ್ರೀನ್ 3	**ಟೈಗರ್ 3(ಹಿಂ):** ಬೆ.11ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	**ಟಗರುಪಲ್ಯ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, **ಟೈಗರ್ 3 (ಹಿಂ):** ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವೈದ್ಯರನ್ನು ಗೌರವಿಸುವ ಕೆಲಸವಾಗಲಿ



ತಿ.ನರಸೀಪುರ: ಸಾಕಷ್ಟು ಒತ್ತಡಗಳ ನಡುವೆ ಕರ್ತವ್ಯ ನಿರ್ವಹಿಸುವ ವೈದ್ಯರಿಗೆ ನಾವು ಗೌರವಿಸುವಂತಹ ಕೆಲಸ ಮಾಡಬೇಕು ಎಂದು ಪುರಸಭಾ ಸದಸ್ಯ ಹಾಗೂ ಚಿತ್ರನಟ ಆರ್.ಅರ್ಜುನ್ ರಮೇಶ್ ಹೇಳಿದರು.

ಪಟ್ಟಣದ ಬಾಬು ಜಗಜೀವನ್ ರಾಮ್ ಸಮುದಾಯ ಭವನದಲ್ಲಿ ಪುರಸಭಾ ಸದಸ್ಯ ಆರ್.ಅರ್ಜುನ್ ರಮೇಶ್, ಜಿಲ್ಲಾ ರೋಟರಿ ಹಾಗೂ ಸಿಎಸ್‌ಐ ಹೋಲ್ಡ್ ವರ್ತ್ ಆಸ್ಪತ್ರೆಯ ಸಹಯೋಗದೊಂದಿಗೆ ನಡೆದ ಆರೋಗ್ಯ ತಪಾಸಣೆ ಉಚಿತ ಶಿಬಿರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಜನತೆಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಲು ಆಗಮಿಸಿರುವ ವೈದ್ಯರು ಹಾಗೂ ಆಸ್ಪತ್ರೆಯ ಸಿಬ್ಬಂದಿಗೆ ಪಟ್ಟಣದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ರೋಟರಿ ಸಂಸ್ಥೆಯ ಜಿಲ್ಲಾಧ್ಯಕ್ಷ ಅರುಣ್ ಬೆಳವಾಡಿ ಮಾತನಾಡಿ, ಆರೋಗ್ಯ ತಪಾಸಣೆ ಉಚಿತ ಶಿಬಿರಗಳನ್ನು ಗ್ರಾಮೀಣ ಪ್ರದೇಶದ ಜನತೆಗೆ ಹೆಚ್ಚು ಒದಗಿಸಬೇಕೆಂಬ ಆಶಯದಿಂದ ತಿ.ನರಸೀಪುರದಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶದ ಕಡುಬಡವರಿಗೂ ಖಾಸಗಿ ಆಸ್ಪತ್ರೆಯ ಸೇವೆಗಳು ದೊರೆಯುವಂತಾಗಬೇಕು. ಆ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ತಪಾಸಣೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಜನತೆ ಇದರ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.

ಶಿಬಿರದಲ್ಲಿ ಸಿಎಸ್‌ಐ ಹೋಲ್ಡ್ಸ್ ವರ್ತ್ ಆಸ್ಪತ್ರೆಯ ತಜ್ಞ ವೈದ್ಯರಿಂದ ಸ್ತ್ರೀರೋಗ ಸಂಬಂಧಿತ ಕಾಯಿಲೆ, ಹೃದಯ ಸಮಸ್ಯೆ, ದಂತ ಚಿಕಿತ್ಸೆ, ಇಸಿಜಿ ಹಾಗೂ ಸಾಮಾನ್ಯ ತಪಾಸಣೆ ನಡೆಸಲಾಯಿತು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಸಿಎಸ್‌ಐ ಹೋಲ್ಡ್ಸ್ ವರ್ತ್ ಆಸ್ಪತ್ರೆ ವೈದ್ಯರಾದ ಡಾ.ಅಭಿಷೇಕ್, ಡಾ.ಸಚಿನ್ ಶಾಸ್ತ್ರಿ, ಡಾ.ಕಾವ್ಯ, ಬೆಸ್ತಿ, ದೇಬಿಕಾ, ಆಲ್ಬರ್ಟ್ ಸಂದೇಶ್, ಅಭಿಷ್ಯ, ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ತಾಪಂ ಮಾಜಿ ಸದಸ್ಯ ಬಿ.ಎಲ್.ಮಹಾದೇವ, ರಾಜುಗೌಡ, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಿ.ಡಿ.ವೆಂಕಟೇಶ್, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರ್, ಚಾಮರಾಜ ನಗರ ಜಿಲ್ಲಾ ಸಂಚಾಲಕ ಬೆಳ್ಳಿಯಪ್ಪ, ಸಂದೀಪ್, ಮನೋಜ್, ಮಹದೇವ ಸ್ವಾಮಿ ಮತ್ತಿತರರು ಹಾಜರಿದ್ದರು.



ಇರ್ವಿನ್ ರಸ್ತೆಯಲ್ಲಿ ಮ್ಯಾನ್‌ಹೋಲ್ ಕುಸಿದು ತಿಂಗಳಾದರೂ ದುರಸ್ತಿ ಭಾಗ್ಯವಿಲ್ಲ

ಮೈಸೂರು, ನ.20(ಎಂಕೆ)– ನಗರದ ಹೃದಯ ಭಾಗದಲ್ಲಿರುವ ಇರ್ವಿನ್ ರಸ್ತೆಯಲ್ಲಿ ಯುಜಿಡಿ ಮ್ಯಾನ್‌ಹೋಲ್ ಕುಸಿದು ತಿಂಗಳಾದರೂ ದುರಸ್ತಿಯಾಗಿಲ್ಲ...!

ಕಳೆದ ವರ್ಷವಷ್ಟೇ ಅಭಿವೃದ್ಧಿ ಭಾಗ್ಯ ಕಂಡು, ಡಾಂಬರೀಕರಣಗೊಂಡಿರುವ ಇರ್ವಿನ್ ರಸ್ತೆಯಲ್ಲಿ ಯುಜಿಡಿ ಮ್ಯಾನ್‌ಹೋಲ್ ಕುಸಿದು, ಮೇಲಿನ ಮುಚ್ಚಳ ಕಿತ್ತು ಬಂದಿದ್ದು ವಾಹನ ಸವಾರರಲ್ಲಿ ತೀವ್ರ ಆತಂಕ ಮೂಡಿಸಿದೆ. ಪ್ರತಿನಿತ್ಯ ಸಾವಿರಾರು ವಾಹನಗಳ ಸಂಚರಿಸುವ ರಸ್ತೆಯಲ್ಲಿಯೇ ಮ್ಯಾನ್‌ಹೋಲ್ ಕುಸಿದು ತಿಂಗಳಾದರೂ ದುರಸ್ತಿ ಮಾಡದ ಪಾಲಿಕೆ ಅಧಿಕಾರಿ–ಸಿಬ್ಬಂದಿ ಕಾರ್ಯವೈಖರಿಗೆ ಪ್ರಜ್ಞಾವಂತ ನಾಗರಿಕರು ಕಿಡಿಕಾರಿದ್ದಾರೆ.

ಕುಸಿದಿರುವ ಮ್ಯಾನ್‌ಹೋಲ್ ಮೇಲೆ ಪೊಲೀಸರು ಬ್ಯಾರಿಕೇಡ್ ಇಟ್ಟಿದ್ದು, ದ್ವಿಚಕ್ರ ವಾಹನ ಸವಾರರು ಸ್ವಲ್ಪ ಯಾಮಾರಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಸಾರ್ವಜನಿಕರ ಪ್ರಾಣಕ್ಕೆ ಕುತ್ತು ತರುವ ಮ್ಯಾನ್‌ಹೋಲ್ ಅನ್ನು ಕೂಡಲೇ ದುರಸ್ಥಿಗೊಳಿಸಿ, ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಡುವಂತೆ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಒತ್ತಾಯಿಸಿದ್ದಾರೆ.

ಗುಂಡಿ ಬಿದ್ದ ರಸ್ತೆ ಮಂಡಿ ಮೊಹಲ್ಲಾದಲ್ಲಿರುವ ಮಿಷನ್ ಆಸ್ಪತ್ರೆ ರಸ್ತೆಯಲ್ಲಿ ಯುಜಿಡಿ ಮ್ಯಾನ್‌ಹೋಲ್ ನೀರು ಉಕ್ಕಿ ಹರಿದ ರಭಸಕ್ಕೆ ರಸ್ತೆಬದಿಯಲ್ಲಿ ಗುಂಡಿ ಬಿದ್ದಿದ್ದು, ಪಾದಚಾರಿಗಳು ತಿರುಗಾಡುವುದಕ್ಕೆ ಕಷ್ಟಪಡುವಂತಾಗಿದೆ. ಯುಜಿಡಿ ದುರಸ್ಥಿ ಮಾಡಿರುವ ಪಾಲಿಕೆ ಸಿಬ್ಬಂದಿ, ರಸ್ತೆ ಗುಂಡಿ ಮುಚ್ಚದೆ ಜನರ ಪ್ರಾಣಕ್ಕೆ ಸಂಚಕಾರ ತಂದೊಡ್ಡಿದ್ದಾರೆ ಎಂದು ಉದಯಗಿರಿ ನಿವಾಸಿ ನವಾಜ್ ಷರೀಫ್ ಬೇಸರ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ

ನನ್ನ ಕಕ್ಷಿದಾರರು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು #133/1, 9ನೇ ಮುಖ್ಯ ರಸ್ತೆ, 4ನೇ ಹಂತ, ಮಹಾವೀರ ಹಾಸ್ಟೆಲ್ ರೋಡ್, ಟಿ.ಕೆ. ಲೇಔಟ್, ಮೈಸೂರು ಇಲ್ಲಿ ವಾಸವಾಗಿರುವ ದೊಡ್ಡ ಸಿದ್ದರಾಮೇಗೌಡ ರವರ ಮಗನಾದ ಸುಮಾರು 55 ವರ್ಷ ವಯಸ್ಸಿನ ಶ್ರೀ ಭೀಮೇಗೌಡ ಹಾಗೂ ಇವರ ಧರ್ಮಪತ್ನಿ ಸುಮಾರು 48 ವರ್ಷ ವಯಸ್ಸಿನ ಶ್ರೀಮತಿ ಆರ್ ರಜಿನಿ ರವರು ಷೆಡ್ಯೂಲ್ ಸ್ವತ್ತಿನ ಮಾಲೀಕರು (ಕ್ರಯಕ್ಕೆ ಕೊಡುವವರು) ರವರಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಕೆಳಗಿನ ಷೆಡ್ಯೂಲ್‌ನ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಈ ಸಂಬಂಧ ಕ್ರಯಕ್ಕೆ ನೀಡುತ್ತಿರುವವರು ಷೆಡ್ಯೂಲ್ ಸ್ವತ್ತುಗಳು ಸಂಪೂರ್ಣ ಹಕ್ಕುವುಳ್ಳ ಮಾಲೀಕರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಕ್ರಯ ನೀಡುತ್ತಿರುವವರ ಹೊರತುಪಡಿಸಿ ಇನ್ನು ಯಾರಿಗಾದರೂ ಹಕ್ಕು ಹಾಗೂ ಹಿತಾಸಕ್ತಿ ಇದ್ದಲ್ಲಿ ಈ ಪತ್ರಿಕೆ ಪ್ರಕಟಣೆ ನೀಡಿದ 7 ದಿನಗಳ ಒಳಗೆ ಕೆಳಗೆ ತಿಳಿಸಿದ ವಕೀಲರ ಕಛೇರಿಯನ್ನು, ದಾಖಲಾತಿಗಳ ಸಮೇತ ಸಂಪರ್ಕಿಸುವುದು. ಈ ಅವಧಿಯ ಒಳಗೆ ಯಾವುದೇ ತಂಟೆ ತಕರಾರು ಬರದಿದ್ದ ಪಕ್ಷದಲ್ಲಿ ಕ್ರಯಕ್ಕೆ ನೀಡುತ್ತಿರುವವರು ಕಾನೂನುಬದ್ದ ಮಾಲೀಕರೆಂದು ಪರಿಗಣಿಸಿ ಅವರಿಂದ ನನ್ನ ಕಕ್ಷಿದಾರರ ಸ್ವತ್ತಿನ ಕ್ರಯವನ್ನು ಪಡೆಯಲು ಮುಂದಾಗುತ್ತಾರೆ ಹಾಗೂ ಆ ನಂತರ ಬರುವ ಯಾವುದೇ ತಂಟೆ ತಕರಾರುಗಳಿಗೆ ನಮ್ಮ ಕಕ್ಷಿದಾರರು ಭಾದ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ:

1) ಹೆಚ್.ಡಿ ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಮೈಸೂರು ಜಿಲ್ಲೆ ಶಾಂತಿಪುರ ಗ್ರಾಮದಲ್ಲಿರುವ ಸರ್ವೇ ನಂ. 47 ಜಮೀನು (ಹಳೆಯ ಸರ್ವೇ ನಂ. 12/22) ರಲ್ಲಿರುವ 39 ಗುಂಟೆ ಅಳತೆಯುಳ್ಳ ಜಮೀನಿನ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ 47/2 ರ ಜಮೀನು ಪಶ್ಚಿಮಕ್ಕೆ: ಸರ್ವೇ ನಂ 12 ರ ಜಮೀನು, ಉತ್ತರಕ್ಕೆ: ಸರ್ವೆ ನಂಬರು 47/2 ರ ಜಮೀನು ದಕ್ಷಿಣಕ್ಕೆ: ಹೆಚ್.ಡಿ. ಕೋಟೆ – ಹುಣಸೂರು ರಸ್ತೆ ಹಾಗೂ

2) ಹೆಚ್.ಡಿ ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಮೈಸೂರು ಜಿಲ್ಲೆ ಶಾಂತಿಪುರ ಗ್ರಾಮದಲ್ಲಿರುವ ಸರ್ವೇ ನಂ. 143 ಜಮೀನು (ಹಳೆಯ ಸರ್ವೆ ನಂಬರು 12/12) ರಲ್ಲಿರುವ 3 ಎಕರೆಗೆ ಸಂಬಂಧಿಸಿದ ಚಕ್ಕುಬಂದಿ ಪೂರ್ವಕ್ಕೆ: ಸರ್ವೇ ನಂ. 12 ರ ಜಮೀನು, ಪಶ್ಚಿಮಕ್ಕೆ ಸರ್ವೇ ನಂ 137 ರ ಜಮೀನು, ಉತ್ತರಕ್ಕೆ: ರಸ್ತೆ, ದಕ್ಷಿಣ: ಸರ್ವೆ ನಂ 139, ಹಾಗೂ

3) ಹೆಚ್.ಡಿ ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಮೈಸೂರು ಜಿಲ್ಲೆ ಶಾಂತಿಪುರ ಗ್ರಾಮದಲ್ಲಿರುವ ಸರ್ವೇ ನಂ. 137 ಜಮೀನು (ಹಳೆಯ ಸರ್ವೆ ನಂಬರು 11/60)ರ 3 ಎಕರೆಗೆ ಸಂಬಂಧಿಸಿದ ಚಕ್ಕುಬಂದಿ: ಪೂರ್ವಕ್ಕೆ: ದಾಸಯ್ಯರವರ ಜಮೀನು ಪಶ್ಚಿಮಕ್ಕೆ: ಭೀಮೇಗೌಡರ ಜಮೀನು, ಉತ್ತರಕ್ಕೆ: ಭೀಮೇಗೌಡರ ಜಮೀನು, ದಕ್ಷಿಣಕ್ಕೆ: ರಂಗಮ್ಮ ನವರ ಜಮೀನು, ಹಾಗೂ

4) ಹೆಚ್.ಡಿ ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಮೈಸೂರು ಜಿಲ್ಲೆ ಶಾಂತಿಪುರ ಗ್ರಾಮದಲ್ಲಿರುವ ಸರ್ವೇ ನಂ. 136 ಜಮೀನು (ಹಳೆಯ ಸರ್ವೆ ನಂಬರು 11/1) ರಲ್ಲಿರುವ 13 ಗುಂಟೆ ಕೃಷಿ ಭೂಮಿಗೆ ಸಂಬಂಧಿಸಿದ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ 12 ರ ಉಳಿಕೆ ಜಮೀನು ಪಶ್ಚಿಮಕ್ಕೆ: ಸರ್ವೆ ನಂ 11 ರ ಉಳಿಕೆ ಜಮೀನು, ಉತ್ತರಕ್ಕೆ: ಸರ್ವೆ ನಂ 11 ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 11 ರ ಉಳಿಕೆ ಜಮೀನು, ಹಾಗೂ

5) ಹೆಚ್.ಡಿ ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಮೈಸೂರು ಜಿಲ್ಲೆ ಶಾಂತಿಪುರ ಗ್ರಾಮದಲ್ಲಿರುವ ಸರ್ವೇ ನಂ.139 ಜಮೀನು (ಹಳೆಯ ಸರ್ವೆ ನಂಬರು 11/1) ರಲ್ಲಿರುವ 20 ಗುಂಟೆಗೆ ಸಂಬಂಧಿಸಿದ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 11ರ ಉಳಿಕೆ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 12ರ ಉಳಿಕೆ ಜಮೀನು, ಉತ್ತರಕ್ಕೆ: ಸರ್ವೆ ನಂ. 12ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 12ರ ಉಳಿಕೆ ಜಮೀನು.

ಸಹಿ/– ಕೆ.ಎಸ್. ರಾಜೇಶ್ ಬಾಬು, ವಕೀಲರು, ನಂಬರ್ 45, 9ನೇ ಮೇನ್, 5ನೇ ಕ್ರಾಸ್, ಜಯಲಕ್ಷ್ಮೀಪುರಂ, ಮೈಸೂರು. ಮೊ: 9481817814

ಸ್ಥಳ: ಮೈಸೂರು
ದಿನಾಂಕ: 18–11–2023

ಸಾರ್ವಜನಿಕ ಪ್ರಕಟಣೆಗಾಗಿ

ಏನೆಂದರೆ, ಈ ಕೆಳಕಂಡ ವಾದಿ ನನ್ನ ಕಕ್ಷಿದಾರರಾದ ಶ್ರೀ ಎಸ್.ಪಿ. ಆನಂದ್, ಇವರ ಇರ್ರ್ಯಾದೆ ಮೇರೆಗೆ, ಅವರು ಈಗಾಗಲೇ

ಗೌರವಾನ್ವಿತ 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು
ಅಸಲು ದಾವಾ ಸಂಖ್ಯೆ : 1412 /2023

ವಾದಿಗಳು : ಶ್ರೀ ಎಸ್.ಪಿ. ಆನಂದ್ ಬಿನ್ ಲೇಟ್ ಪಾಂಡುರಂಗೇಗೌಡ ಸುಮಾರು ವಯಸ್ಸು ವರ್ಷ ವಾಸ: ಸಾಲಿಗ್ರಾಮ, ಕಾಲುವೆ ಬೀದಿ, ಕೆ.ಆರ್. ನಗರ ತಾಲ್ಲೂಕು.

–ವಿರುದ್ಧ –

ಪ್ರತಿವಾದಿಗಳು :

1. ಶ್ರೀ ಜಯರಾಮ ಬಿನ್ ಜವರೇಗೌಡ ಸುಮಾರು ವಯಸ್ಸು 53 ವರ್ಷ ವಾಸ: ಮರಟಿಕ್ಯಾತನಹಳ್ಳಿ ಗ್ರಾಮ ಜಯಪುರ ಹೋಬಳಿ, ಮೈಸೂರು ತಾಲ್ಲೂಕು
2. ಶ್ರೀ ಪ್ರದೀಪ್ ಕುಮಾರ್ ಪಾರ್ಟನರ್ ಆಫ್ ಎಂ./ಎಸ್ ವ್ಯಾಲ್ಯೂ ಸ್ಪೇಸ್ ಇನ್ಫ್ರಾ ಪ್ರೊಜೆಕ್ಟ್ ಎಲ್.ಎಲ್.ಪಿ. ಲಿಮಿಟೆಡ್, ಆಫೀಸ್ ನಂ. 502, 14ನೇ ಮೇನ್, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು.
3. ಶ್ರೀ ಮೊಗಣ್ಣೇಗೌಡ ಬಿನ್ ಲೇಟ್ ಅಂಕೇಗೌಡ ಸುಮಾರು ವಯಸ್ಸು 70 ವರ್ಷ
4. ಶ್ರೀ ಮಹದೇವು ಬಿನ್ ಮೊಗಣ್ಣೇಗೌಡ ಸುಮಾರು ವಯಸ್ಸು 50 ವರ್ಷ
5. ಶ್ರೀ ಮಲ್ಲೇಶ್ ಬಿನ್ ಮೊಗಣ್ಣೇಗೌಡ ಸುಮಾರು ವಯಸ್ಸು 48 ವರ್ಷ
6. ಶ್ರೀ ರಾಜೇಂದ್ರ ಬಿನ್ ಮೊಗಣ್ಣೇಗೌಡ ಸುಮಾರು ವಯಸ್ಸು 46 ವರ್ಷ
7. ಶ್ರೀ ಚನ್ನೇಗೌಡ ಬಿನ್ ಲೇಟ್ ಅಂಕೇಗೌಡ ಸುಮಾರು ವಯಸ್ಸು 65 ವರ್ಷ
8. ಶ್ರೀಮತಿ ಜಯಮ್ಮ ಕೋಂ ಚನ್ನೇಗೌಡ ಸುಮಾರು ವಯಸ್ಸು 60 ವರ್ಷ
9. ಶ್ರೀಮತಿ ಮಹಾಲಕ್ಷ್ಮೀ ಬಿನ್ ಚನ್ನೇಗೌಡ ಸುಮಾರು ವಯಸ್ಸು 40 ವರ್ಷ
10. ಶ್ರೀಮತಿ ಮಂಗಳಗೌರಿ ಬಿನ್ ಚನ್ನೇಗೌಡ ಸುಮಾರು ವಯಸ್ಸು 38 ವರ್ಷ
11. ಶ್ರೀ ಹೆಚ್.ಸಿ. ಮಹದೇವ ಬಿನ್ ಚನ್ನೇಗೌಡ ಸುಮಾರು ವಯಸ್ಸು 36 ವರ್ಷ

3 ರಿಂದ 11 ರವರೆಗೆ ವಾಸ: ಮರಟಿಕ್ಯಾತನಹಳ್ಳಿ ಗ್ರಾಮ ಜಯಪುರ ಹೋಬಳಿ, ಮೈಸೂರು ತಾಲ್ಲೂಕು.

ರಂತೆ ಮೈಸೂರು ತಾಲ್ಲೂಕು. ಜಯಪುರ ಹೋಬಳಿ, ಮರಟಿಕ್ಯಾತನಹಳ್ಳಿ ಗ್ರಾಮದ, ಸರ್ವೆ.ನಂ.28/2 ರಲ್ಲಿರುವ 'ಬಿ' ಷೆಡ್ಯೂಲ್ ನಿವೇಶನಕ್ಕೆ ಸಂಬಂಧಪಟ್ಟ ಹಾಗೆ 4ನೇ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 1412/2023 ರಂತೆ ಮಾಲೀಕರಾಗಿ ಘೋಷಿಸುವಂತೆ ಹಾಗೂ 1ನೇ ಪ್ರತಿವಾದಿ ಜಯರಾಮ ರವರ ದಿನಾಂಕ 13/7/2016 ರ ನೊಂದಾಯಿತ ಕ್ರಯ ಪತ್ರವನ್ನು ರದ್ದು ಮಾಡುವಂತೆ ಮೇಲ್ಕಂಡ ದಾವೆಯನ್ನು ಹೂಡಿದ್ದು ಸದರಿ ದಾವೆಯಲ್ಲಿ 'ಬಿ' ಷೆಡ್ಯೂಲ್ ಸ್ವತ್ತನ್ನು ಯಾರಿಗೂ ಮಾರಾಟ ಮಾಡದಂತೆ ಹಾಗು ಸದರಿ ನಿವೇಶನದಲ್ಲಿ ಯಾವುದೇ ರಸ್ತೆ, ಚರಂಡಿ, ಲೇಔಟ್ ಮಾಡದಂತೆ ಹಾಗೂ 'ಬಿ' ಷೆಡ್ಯೂಲ್ ಸ್ವತ್ತಿನ ನೈಜತೆಯಂತೆ ಬದಲಾವಣೆ ಮಾಡದಂತೆ ದಿನಾಂಕ 13/10/2023 ರಂದು ತಾತ್ಕಲಿಕ ನಿರ್ಬಂಧಕಾಜ್ಞೆ ಆದೇಶವಾಗಿರುತ್ತದೆ. ಆದರೆ ಇತ್ತೀಚಿಗೆ ಕೆಲವು ಅಪರಿಚಿತರು ಷೆಡ್ಯೂಲ್ 'ಬಿ' ಸ್ವತ್ತಿಗೆ ಸಂಬಂಧಿಸಿದಂತೆ ಬಂದು ಸದರಿ ನಿವೇ ಶನ ಮಾರಾಟಕ್ಕೆ ಇದೆ ಎಂದು ಬಂದು ಕೆಲವು ದಲ್ಲಾಳಿಗಳ ಮುಖಾಂತರ ಆಗಿದ್ದಾಂಗ್ಯೆ ಭೇಟಿ ನೀಡಿ ವಿಚಾರಿಸುತ್ತಿರುವುದು ನನ್ನ ಕಕ್ಷಿದಾರರ ಗಮನಕ್ಕೆ ಬಂದಿದ್ದು, ಆದ್ದರಿಂದ ಸದರಿ ನ್ಯಾಯಾಲಯದ ಆದೇಶದ ಬಗ್ಗೆ ಈ ಸಾರ್ವಜನಿಕ ಪ್ರಕಟಣೆ ಹೊರಡಿಸುತ್ತಿದ್ದು ಸದರಿ ಬಿ ಷೆಡ್ಯೂಲ್ ಸ್ವತ್ತಿನ ಸಂಬಂಧ ಮೇಲ್ಕಂಡ ದಾವೆಯಲ್ಲಿ ಹೊರಡಿಸಿರುವ ಆದೇಶವು ಮುಗಿಯುವವರೆಗೂ ಸಾರ್ವಜನಿಕರು ಷೆಡ್ಯೂಲ್ ಬಿ ಸ್ವತ್ತಿನ ಸಂಬಂಧ ಯಾವುದೇ ರೀತಿಯ ಕ್ರಯ ಇತ್ಯಾದಿ ವರ್ಗಾವಣೆ ಸಂಬಂಧ ಯಾವುದೇ ವ್ಯವಹಾರವನ್ನು ಮಾಡಬಾರದೆಂದು ಈ ಮೂಲಕ ನನ್ನ ಕಕ್ಷಿದಾರರು ಸಾರ್ವಜನಿಕರ ತಿಳುವಳಿಕೆಗೆ ತರುತಿದ್ದು ಹಾಗೊಂದು ವೇಳೆ ಈ ಪ್ರಕಟಣೆ ಹೊರಡಿಸಿದ ನಂತರವೂ ಯಾರಾದರೂ ಸದರಿ ಬಿ ಷೆಡ್ಯೂಲ್ ಸ್ವತ್ತಿನ ಸಂಬಂಧ ವ್ಯವಹರಿಸಿದರೆ ಸದರಿ ವ್ಯವಹಾರವೂ ನನ್ನ ಕಕ್ಷಿದಾರರಿಗೆ ಬದ್ಧಪಡಿಸುವುದಿಲ್ಲವೆಂತಲೂ ಮತ್ತು ಅಂತಹರವನ್ನೂ ಮೇಲ್ಕಂಡ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗುತ್ತದೆ ಎಂದು ಈ ಪ್ರಕಟಣೆ ಮೂಲಕ ತಿಳಿಸುತ್ತದೆ.

ಎ ಷೆಡ್ಯೂಲ್ ಸ್ವತ್ತುಗಳು: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದಲ್ಲಿರುವ ಅಭಿವೃದ್ಧಿಯಾಗದೇ ಇರುವ ಭೂ ಪರಿವರ್ತನೆ ಹೊಂದಿರುವ ಸರ್ವೆ.ನಂ. 28/2 ರಲ್ಲಿ 1 ಎಕರೆ 28 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂ 28/1 ರ ಸ್ವತ್ತು; ಉತ್ತರಕ್ಕೆ: ಸರ್ವೆ ನಂ 27 ರ ಸ್ವತ್ತು ; ದಕ್ಷಿಣಕ್ಕೆ : ಸರ್ವೆ ನಂ 9 & 28/ 3 ರ ಸ್ವತ್ತು.

ಮೈಸೂರು ತಾಲ್ಲೂಕು, ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದಲ್ಲಿರುವ ಅಭಿವೃದ್ಧಿಯಾಗದೇ ಇರುವ ಭೂ ಪರಿವರ್ತನೆ ಹೊಂದಿರುವ ಸರ್ವೆ.ನಂ. 28/3 ರಲ್ಲಿ 28 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚೆಕ್ಕುಬಂದಿ :

ಪೂರ್ವಕ್ಕೆ: ಸರ್ವೆ ನಂ. 29 ; ಪಶ್ಚಿಮಕ್ಕೆ: ಸರ್ವೆ ನಂ 28/4 ರ ಸ್ವತ್ತು ; ಉತ್ತರಕ್ಕೆ: ಸರ್ವೆ ನಂ. 28/2 ರ ಸ್ವತ್ತು ; ದಕ್ಷಿಣಕ್ಕೆ: ಸರ್ವೆ ನಂ. 9 ರ ಸ್ವತ್ತು.

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನಹಳ್ಳಿ ಗ್ರಾಮದಲ್ಲಿರುವ ಅಭಿವೃದ್ಧಿಯಾಗದೇ ಇರುವ ಭೂ ಪರಿವರ್ತನೆ ಹೊಂದಿರುವ ಸರ್ವೆ.ನಂ. 28/4 ರಲ್ಲಿ 27 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ : ಸರ್ವೆ ನಂ 28/3 ಸ್ವತ್ತು; ಪಶ್ಚಿಮಕ್ಕೆ: ಸರ್ವೆ ನಂ 20 ರ ಸ್ವತ್ತು ; ಉತ್ತರಕ್ಕೆ: ಸರ್ವೆ ನಂ 28/1 ರ ಸ್ವತ್ತು ; ದಕ್ಷಿಣಕ್ಕೆ: ಸರ್ವೆ ನಂ 9 ರ ಸ್ವತ್ತು.

ಬಿ ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟೀಕ್ಯಾತನ ಗ್ರಾಮದಲ್ಲಿರುವ ಸರ್ವೆ.ನಂ. 28/2 ರಲ್ಲಿ 2.2 ಗುಂಟೆ ಅಂದರೆ 35 ಗುಂಟೆ ಪೈಕಿ 40X60 ಒಂದು ಚದರ ಅಡಿ ಯಲ್ಲಿ ಎ.ಸಿ. ಶೀಟ್ ಮನೆಯ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಉಳಿಕೆ ಸ್ವತ್ತು ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಉಳಿಕೆ ಸ್ವತ್ತು.

ಸಹಿ/– ಕಕ್ಷಿದಾರರು

ಸಹಿ/– ಶ್ರೀ ಶರತ್, ವಕೀಲರು, ನಂ. 645, ಮೊದಲನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ಸೀತಾವಿಲಾಸ ಛತ್ರದ ಹಿಂಬದಿ, ಮೈಸೂರು. ಮೊ: 8217685002